ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮೇ 18, 2011 ಪುಟ 20 ರೂ. 12/-



ಡಿಜಿಪಿ ಹುದ್ದೆಯತ್ತ ಬಿದರಿ



ಕ್ರಮ್ ಎನ್‌ಕೌಂಟರ್

ದರಿ ಕುಣಿಕೆಯ ೊನೆಯ ಮಿಕ




ಮೈಸೂರು

ಾಮದಾಸ್ ಅವ್ಯವಹಾರಕ್ಕೆ ನಿವಿಂಕ್ ದುಡ್ಡು?



ಪವರ್‌ಫುಲ್ ಹುಡುಗರು



ಒಸಾಮಾ-ಒಬಾಮಾ

ಯಾರ ಗೆಲುವು

ಶಿವಸುಂದರ್



ಚಾರ್ವಾಕ

ಒಬಾಮಾ-ಒಸಾಮಾ ದೊಡ್ಡ ಉಗ್ರಗಾಮಿ ಸಣ್ಣ ಉಗ್ರಗಾಮಿಯನ್ನು ಕೊಂದದ್ದು!

ಇದ್ದಕ್ಕಿದ್ದಂತೆ ಅಮೆರಿಕದ ವಿರುದ್ಧ ಒಸಾಮಾ ಕಾರ್ಯಾಚರಣೆ ನಡೆಸಿದ್ದೇಕೆ ಎನ್ನುವುದು ಹಾಗೂ ಸೆಪ್ಟೆಂಬರ್ 11ರ ನಿಜವಾದ ರೂವಾರಿಗಳು ಯಾರು ಎಂಬುದು ಈಗಲೂ ನಿಗೂಢವೇ. ಅಮೆರಿಕ ಅದನ್ನು ಒಸಾಮಾನ ಹೆಗಲಿಗೆ ಹೇರಿತು. ಜಗತ್ತು ಅದನ್ನು ನಂಬಿತು. ನಂತರದಲ್ಲಿ ಒಸಾಮಾ ಅಮೆರಿಕದ ಮಿತ್ರನಾಗಿರುವುದಕ್ಕಿಂತ ಶತ್ರುವಾದರೆ ಲೇಸೆಂದು ತಂತ್ರ ಬದಲಿಸಿದ ಅಮೆರಿಕ 'ಒಸಾಮ ನಮ್ಮ ಶತ್ರು' ಎಂದು ಹೇಳಲು ಪ್ರಾರಂಭಿಸಿತು. ಜಗತ್ತು ಅದನ್ನು ದೂಸರಾ ಮಾತಿಲ್ಲದೆ ನಂಬಿತು. ಒಸಾಮಾನಿಗೆ ಅಮೆರಿಕನ್ ಸಾಮ್ರಾಜ್ಯವಾದಿಗಳು ನೀಡಿದ ಈ ಹೊಸ ಪಾತ್ರದಲ್ಲಿ ಆತ ಯಾವಾಗಲೋ ಬಲಿಯಾಗಿರಬಹುದು. ಹೀಗಾಗಿ ಆತನ ಹತ್ಯೆಗಿಂತ ಅಮೆರಿಕನ್ ಸಾಮ್ರಾಜ್ಯಶಾಹಿ ಯೋಜನೆಗಳೇ ಚರ್ಚಿಸಬೇಕಾದ ವಿಷಯ. ಒಸಾಮನಿಗಿಂತ ಆತನನ್ನು ಹುಟ್ಟುಹಾಕುವ ಒಬಾಮಾ ದೊಡ್ಡ ಭಯೋತ್ಪಾದಕನಲ್ಲವೇ?

ಒಸಾಮಾ ಬಿನ್ ಲಾದೆನ್‌ನನ್ನು ಒಬಾಮಾ ಬಿನ್ ಅಮೆರಿಕ ಪಡೆಗಳು ಕೊಂದುಹಾಕಿವೆ. ಈ ಮೂಲಕ ಪ್ರಪಂಚದಲ್ಲಿ ಉಗ್ರಗಾಮಿತ್ವಕ್ಕೆ ಇತಿಶ್ರೀ ಹಾಡಿದಂತಾಗಿದೆ ಎಂದು ಅಮೆರಿಕನ್ ಮಾಧ್ಯಮಗಳು ಕೊಚ್ಚಿಕೊಳ್ಳುತ್ತಿವೆ. ಬೇರೆ ದೇಶಗಳ ಸರ್ಕಾರಗಳೂ ಒಬಾಮಾನನ್ನು ಶ್ಲಾಘಿಸಿವೆ. ಆದರೆ ಒಸಾಮಾ ಬಿನ್ ಲಾದೆನ್‌ನನ್ನು ಕೊಂದ ರೀತಿ, ಆತನ ಹೆಣವನ್ನು ಸಾಗರದಲ್ಲಿ ಬಿಸಾಡಿದ ರೀತಿ ಎಲ್ಲವನ್ನೂ ನೋಡಿದರೆ ಈ ಕಾರ್ಯಾಚರಣೆಯ ಬಗ್ಗೆಯೇ ಹಲವು ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ.

ಇಂಥಾ ಬೃಹತ್ ಕಾರ್ಯಾಚರಣೆಗಳು ಮತ್ತು ಸೆಲೆಬ್ರೇಟೆಡ್ ಕೊಲೆಗಳು ನಡೆದಾಗಲೆಲ್ಲಾ ಅದರ ಸುತ್ತಾ ಸಂಶಯದ ಹುತ್ತ ಹುಟ್ಟಿಕೊಳ್ಳುವುದು ಸಾಮಾನ್ಯ ಎಂದು ಮೂಗುಮುರಿದು ಈ ಪ್ರಶ್ನೆಗಳನ್ನು ತಳ್ಳಿಹಾಕಲು ಸಾಧ್ಯವೇ ಇಲ್ಲ. ಮೊದಲನೆಯದಾಗಿ ಪ್ರಭುತ್ವಗಳು, ಮಾಧ್ಯಮಗಳು ಹಾಗೂ ಕಾರ್ಪೊರೇಟ್ ಬಂಡವಾಳಿಗರ ಆಸಕ್ತಿಗಳೆಲ್ಲಾ ಏಕೀಭವಿಸಿದಾಗ ಅವರು ಬಿತ್ತುವ ಸತ್ಯಗಳನ್ನು ಅನುಮಾನ ದಿಂದ ನೋಡದ ಹೊರತು ಸತ್ಯ ಗೊತ್ತಾಗುವುದೇ ಇಲ್ಲ. ಒಸಾಮಾ ಹತ್ಯೆಯ ಬಗೆಗೆ ಪ್ರಪಂಚದ ಎಲ್ಲಾ ಪ್ರಭುತ್ವಗಳು - ಮುಖ್ಯವಾಗಿ ಅಮೆರಿಕದ ಪ್ರಭುತ್ವ - ಪ್ರಪಂಚದ ಎಲ್ಲಾ ಕಾರ್ಪೊರೇಟ್ ಮೀಡಿಯಾಗಳು ಒಂದು ನಿರ್ದಿಷ್ಟ ಬಗೆಯ ಕಥನವನ್ನು ಮತ್ತು ಆ ಮೂಲಕ ಒಂದು ರಾಜಕೀಯವನ್ನು ಉಣಬಡಿ ಸುತ್ತಿವೆ. ಈ ರಾಜಕೀಯ ಹತ್ಯಾ ಕಥನ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿಗಳ 'ವಾರ್ ಆನ್ ಟೆರರಿಸಂ' ಎಂಬ ಅಶ್ವಮೇಧಯಾಗಕ್ಕೆ ಅತ್ಯಂತ ಅಗತ್ಯ. ಆದರೆ ಈ ತಥಾಕಥಿತ ವಾರ್ ಆನ್ ಟೆರರ್‌ನಿಂದಾಗಿ ನೊಂದು ನಲುಗಿರುವ ವಿಶ್ವದ ಎಲ್ಲಾ ಜನತೆಯೂ ಅದನ್ನೇ ನಂಬಬೇಕೆಂಬುದು ಮತ್ತು ಅದನ್ನೇ ನಂಬುವಂತೆ ಮಾಡುವುದೂ ಈ ಯುದ್ಧದ ಮತ್ತೊಂದು ಅಜೆಂಡಾ ಆಗಿದೆ.

ಒಸಾಮಾ ಬಿನ್ ಲಾದೆನ್‌ನ ರಾಜಕೀಯ ಹತ್ಯೆಯ ಕಥನ ಅಮೆರಿಕ ನೇತೃತ್ವದ 'ವಾರ್ ಆನ್ ಟೆರರಿಸಂ' ಕಥನದ ಪ್ರಮುಖ ಉಪಕಥೆಯಾಗಿರುವುದರಿಂದ ಮತ್ತು ವಾರ್ ಆನ್ ಟೆರರಿಸಂ ಎಂಬುದು ಅಮೆರಿಕ ಪ್ರಪಂಚದ ಮೇಲೆ ತನ್ನ ಅಧಿಪತ್ಯವನ್ನು ಮಿಲಿಟರಿ ಮೂಲಕ ಕಾಪಾಡಿಕೊಳ್ಳಲು ನಡೆಸಿರುವ ದೊಡ್ಡ ಷಡ್ಯಂತ್ರವೂ ಆಗಿರುವುದರಿಂದ ಮೇ 1 ರಂದು ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಒಸಾಮಾ ಹತ್ಯೆಯ ಬಗ್ಗೆ ನೀಡಿದ ಅಧಿಕೃತ ಹೇಳಿಕೆಯನ್ನೂ ಸಹ ಆ ರಾಜಕೀಯದ ಭಾಗವಾಗಿಯೇ ವಿಶ್ಲೇಷಿಸಬೇಕಲ್ಲವೇ?

ಇದರರ್ಥ ಒಸಾಮಾ ಸತ್ತಿಲ್ಲ ಎಂಬುದೂ ಅಲ್ಲ, ಅಮೆರಿಕ ಪಡೆಗಳು ಆತನನ್ನು ಕೊಂದು ಹಾಕಿದೆಯೇ ಇಲ್ಲವೇ ಎಂಬ ಪ್ರಶ್ನೆಯೂ ಅಲ್ಲ, ವಾಸ್ತವವಾಗಿ ಅದರ ಸುತ್ತಲೂ ಸಾಕಷ್ಟು ಅನುಮಾನಗಳು ಮತ್ತು 'ಸಂಚು ಸಿದ್ಧಾಂತಗಳು' ತುಂಬಿಕೊಂಡಿವೆ. ಆದರೆ ವಿಶ್ಲೇಷಣೆ ಮಾಡುವ ಜರೂರೂ ಇದೆ. ಆದರೆ ಅದಕ್ಕಿಂತ ಮುಖ್ಯವಾದದ್ದು "ಒಸಾಮಾ ಹತ್ಯೆಯ ಮೂಲಕ ಈ ಜಗತ್ತು ಕಂಡ ಅತಿ ದೊಡ್ಡ ಭಯೋತ್ಪಾದಕ ಮತ್ತು ಎಲ್ಲಾ ಇಸ್ಲಾಮಿಕ್ ಭಯೋತ್ಪಾದನೆಯ ತಾಯಿಯಾಗಿದ್ದ ಅಲ್ ಕೈದಾ ಸಂಸ್ಥೆಯ ಜನಕನನ್ನು ಕೊಂದಿರುವುದರಿಂದ ಈಗ ಜಗತ್ತು ಮೊದಲಿಗಿಂತ ಹೆಚ್ಚು ಭಯೋತ್ಪಾದಕ ಮುಕ್ತ ಲೋಕವಾಗಿದೆ" ಎಂಬ ಅಮೆರಿಕದ ಅಧ್ಯಕ್ಷ ಒಬಾಮಾರ ಹೇಳಿಕೆ ಕೇವಲ ಒಂದು ಕಾರ್ಯಾಚರಣೆಯ ವರದಿಯಲ್ಲ ಎಂಬುದು ಸ್ಪಷ್ಟ. ಈ ಸಾವಿನ ಘೋಷಣೆಯ ಹಿಂದೆ ಸಾಮ್ರಾಜ್ಯಶಾಹಿ ಭಯೋತ್ಪಾದನೆಯ ವಿಜಯದ ಘೋಷಣೆಯಿದೆ ಎಂಬುದನ್ನು ಮರೆಯಬಾರದು. ಇದರ ವಿಶ್ಲೇಷಣೆ ಮಾಡುವ ಮುನ್ನ ಒಸಾಮಾ ಹತ್ಯೆಯ ಸುತ್ತ ಎದ್ದಿರುವ ಅನುಮಾನದ ಹಿಂದಿನ ತರ್ಕವನ್ನು ಒಂದಷ್ಟು ನೋಡಲೇಬೇಕು.

ಅಮೆರಿಕದ ಪತ್ರಿಕೆಗಳನ್ನೂ ಒಳಗೊಂಡಂತೆ ಹಲವು ಪ್ರಮುಖ ಪರ್ಯಾಯ ಮಾಧ್ಯಮಗಳು ಒಸಾಮಾ ಹತ್ಯೆ ಆದದ್ದು 2011ರ ಮೇ 1 ರಂದು ಎಂಬ ಕಥನವನ್ನು ತೀವ್ರವಾಗಿ ಪ್ರಶ್ನಿಸುತ್ತಿವೆ. ಅದೇ ರೀತಿ ಒಸಾಮಾ ಬಿಬ್ ಲಾಡೆನ್ ಅಬೋಟಾಬಾದ್‌ನಲ್ಲಿ ಆ ಪಾಳು ಬಂಗಲೆಯಲ್ಲಿ ಅವಿತಿಟ್ಟುಕೊಂಡಿದ್ದು ಕಳೆದ ಕೆಲವು ತಿಂಗಳವರೆಗೆ ಗೊತ್ತಿರಲಿಲ್ಲ ಎಂಬ ವಾದವನ್ನೂ ಸಹ ಪ್ರಶ್ನಿಸುತ್ತಿವೆ. ಇವು ಕೇವಲ 'ಸಂಚು ಸಿದ್ಧಾಂತದ' ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಪ್ರಶ್ನೆಗಳಲ್ಲ. ಒಸಾಮಾ ಬಿನ್ ಲಾಡೆನ್ ಯಾರು? ಆತನನ್ನು ಬೆಳೆಸಿದ್ದು ಯಾರು ಎಂಬುದನ್ನೆಲ್ಲಾ ನಂತರ ಚರ್ಚಿಸೋಣ. ಆದರೆ 2001ರ ಜುಲೈನಲ್ಲಿ ಆತ ಕಿಡ್ನಿ ತೊಂದರೆಯಿಂದ ಅಫ್ಘಾನಿಸ್ತಾನದಲ್ಲಿ ಆಸ್ಪತ್ರೆ ಸೇರಿಕೊಂಡಿದ್ದಾಗ ಅಮೆರಿಕದ ಬಹುಪಾಲು ಸೇನಾಧಿಕಾರಿಗಳು ಮತ್ತು ರಾಜತಾಂತ್ರಿಕರು ಆಸ್ಪತ್ರೆಗೆ ಭೇಟಿ ನೀಡಿ ಆತನ ಆರೋಗ್ಯವನ್ನು ವಿಚಾರಿಸಿದ್ದರು ಎಂಬುದನ್ನು ಮರೆಯದಿರೋಣ. 2001ರ ಸೆಪ್ಟೆಂಬರ್ 11ರವರೆಗೂ ಒಸಾಮಾ ಅಮೆರಿಕದ ಆಪ್ತ ಸ್ನೇಹಿತನಾಗಿದ್ದದ್ದು ಜಗತ್ತೇ ತಿಳಿದಿದ್ದ ವಿಷಯ. ಅದೇರೀತಿ ಆತನಿಗೆ ತೀವ್ರವಾದ ಕಿಡ್ನಿ ವೈಫಲ್ಯವಿತ್ತು ಮತ್ತು ನಿಯಮಿತವಾಗಿ ಆತನಿಗೆ ಡಯಾಲಿಸಿಸ್ ಕೂಡಾ ಆಗಬೇಕಿತ್ತು ಎಂಬುದು ಗೊತ್ತಿದ್ದದ್ದೆ. ಆತನ ವಯಸ್ಸು, ತೀವ್ರ ಆರೋಗ್ಯ ತೊಂದರೆ ಹಾಗೂ ಅದರ ಬಗ್ಗೆ ನಿಗಾ ವಹಿಸಲು ಬೇಕಾದ ಆಧುನಿಕ ವೈದ್ಯಕೀಯ ವ್ಯವಸ್ಥೆಯಿಲ್ಲದೆ ಆತ ಒಂದು ಕಡೆಯಿಂದ ಮತ್ತೊಂದು ಕಡೆಗೆ ಓಡಾಡುವುದು, ಕಾಡುಮೇಡುಗಳಲ್ಲಿ ಅಲೆಯುವುದು ಇತ್ಯಾದಿಗಳು ಸಾಧ್ಯವೇ ಇರಲಿಲ್ಲ. 2001ರ ಡಿಸೆಂಬರ್‌ನಿಂದ ಅಮೆರಿಕನ್ ಸೈನ್ಯ ಅಫ್ಘಾನಿಸ್ತಾನವನ್ನು ಆಕ್ರಮಣ ಮಾಡಿದ ನಂತರ ಅಫ್ಘಾನಿಸ್ತಾನದಲ್ಲಾಗಲೀ, ಪಾಕಿಸ್ತಾನದಲ್ಲಾಗಲೀ ಅಮೆರಿಕಕ್ಕೆ ಗೊತ್ತಿಲ್ಲದೆ ಒಸಾಮಾ ಓಡಾಡುವುದು ಅಥವಾ ವೈದ್ಯಕೀಯ ಉಪಚಾರ ಪಡೆದುಕೊಳ್ಳುವುದು ಸಾಧ್ಯವೇ ಇಲ್ಲದ ಮಾತಾಗಿತ್ತು. ಕೆಲವು ಅಮೆರಿಕನ್ ಸೇನಾ ಮೂಲಗಳ ಪ್ರಕಾರ ಒಸಾಮಾ 2001ರ ಡಿಸೆಂಬರ್‌ನಲ್ಲೇ ಸತ್ತುಹೋಗಿದ್ದ. ಆದರೆ ವಾರ್ ಆನ್ ಟೆರರ್ ಎಂಬ ಸಾಮ್ರಾಜ್ಯಶಾಹಿ ಭಯೋತ್ಪಾದನಾ ರಾಜಕಾರಣ ಆ ಸತ್ಯವನ್ನು ಜಗತ್ತಿನಿಂದ ಮರೆಮಾಚಿತ್ತು ಎಂದೂ ಹೇಳುತ್ತಾರೆ. ಅದೇನೇ ಇರಲಿ, ಅಬೋಟಬಾದ್‌ನಲ್ಲಿ ಒಸಾಮಾ ಇದ್ದ ಎಂದು ಹೇಳಲಾಗುತ್ತಿದ್ದ ಮನೆಯಲ್ಲಿ ಆ ಬಗೆಯ ಆಧುನಿಕ ಔಷಧೋಪಚಾರದ ಯಾವ ಕುರುಹುಗಳು ಕಂಡುಬರಲಿಲ್ಲ.

ಇದರ ಬಗ್ಗೆ ಇನ್ನೊಂದು ವಿಶ್ಲೇಷಣೆಯೂ ಇದೆ. ಈ ಒಸಾಮಾ ಹತ್ಯೆಯ ಎರಡು ದಿನಗಳ ಹಿಂದೆ ವಿಕಿಲೀಕ್ಸ್ ಮತ್ತು ಅಮೆರಿಕದ ಇತರ ಪತ್ರಿಕೆಗಳು ಗುಂಟಾನಾಮೋ ಚಿತ್ರಹಿಂಸಾ ಶಿಬಿರದ ಕುರಿತು ಹಲವು ದಾಖಲೆಗಳನ್ನು ಬಿಡುಗಡೆ ಮಾಡಿವೆ. ಅದರಲ್ಲಿನ ಪ್ರಮುಖ ದಾಖಲೆಯೊಂದು ಅಲ್-ಲಿಬಿ ಎಂಬ ಅಲ್‌ಕೈದಾ ಸದಸ್ಯನ ಬಗ್ಗೆ ವಿವರಗಳನ್ನು ನೀಡುತ್ತದೆ. ಈತ 2002ರಿಂದಲೂ ಇರಾಕ್‌ನಲ್ಲಿ ಕೆಲಸ ಮಾಡುತ್ತಿದ್ದು 2003ಪ್ಲಿ ಆತನನ್ನು ಒಸಾಮಾ ಬಿನ್ ಲಾಡೆನ್ ತನ್ನ ಹಾಗೂ ಪಾಕಿಸ್ತಾನದ ನಡುವೆ ಅಧಿಕೃತ ಸಂದೇಶ ವಾಹಕನ್ನಾಗಿ ನೇಮಿಸಿದನೆಂದು ಆತ 2005ರಲ್ಲಿ ಅಮೆರಿಕನ್ ಸೈನ್ಯಕ್ಕೆ ಸೆರೆಸಿಕ್ಕ ನಂತರ ಒಪ್ಪಿಕೊಂಡನೆಂದು ಈ ಪತ್ರಗಳು ಹೇಳುತ್ತವೆ. 2003ರ ಮಧ್ಯದಲ್ಲಿ ಈತ ತನ್ನ ಕುಟುಂಬವನ್ನು ಅಬೋಟಾಬಾದ್‌ಗೆ ಸ್ಥಳಾಂತರಿಸಿದ್ದಲ್ಲದೆ ಪೆಷಾವರ್ ಜೊತೆ ಸಂಬಂಧ ಇರಿಸಿಕೊಂಡಿದ್ದನೆಂದೂ ಹೇಳಲಾಗಿದೆ. ಇವೆಲ್ಲವೂ ಪಾಕಿಸ್ತಾನಕ್ಕೆ ಗೊತ್ತಿತ್ತೋ ಇಲ್ಲವೋ ಅಥವಾ ಗೊತ್ತಿದ್ದೂ ಸುಳ್ಳು ಹೇಳುತ್ತಿದೆಯೋ ಎಂಬುದು ಬೇರೆಯೇ ರಾಜಕಾರಣವಾದರೂ ಒಸಾಮಾ ಅಬೋತಾಬಾದ್‌ನಲ್ಲಿ ಇದ್ದದ್ದು ಅಮೆರಿಕಕ್ಕೆ 2005ರಿಂದಲೇ ಗೊತ್ತಿತ್ತು ಎಂದು ಈ ವಿಕಿಲೀಕ್ಸ್ ಪತ್ರಗಳು ರುಜುವಾತು ಮಾಡುತ್ತವೆ. ಅಷ್ಟು ಮಾತ್ರವಲ್ಲ, ಇದೇ ವಿಕಿಲೀಕ್ಸ್ ಬಹಿರಂಗ ಪಡಿಸಿರುವ ಸಂಗತಿಗಳ ಪ್ರಕಾರ ತಾಲಿಬಾನ್ ಮೇಲಾಗಲೀ ತನ್ನದೇ ಅಲ್ ಕೈದಾ ಸಂಘಟನೆಯ ಮೇಲಾಗಲೀ ಒಸಾಮಾ ಸಂಪೂರ್ಣ ಹಿಡಿತವನ್ನೇನೂ ಹೊಂದಿರಲಿಲ್ಲ.



ಈ ಎಲ್ಲಾ ಸಂಗತಿಗಳು ಏನಿಲ್ಲವೆಂದರೂ ಒಂದು ವಿಷಯವನ್ನು ಸ್ಪಷ್ಟಪಡಿಸುತ್ತವೆ. ಒಸಾಮಾ ಇದೇ ಮೇ 1ರಂದು ಕೊಲ್ಲಲ್ಪಟ್ಟನೋ ಅಥವಾ 2001ರಲ್ಲೇ ಸತ್ತನೋ ಎಂಬುದು ಬೇರೆ ಸಂಗತಿ. ಆದರೆ ಒಸಾಮಾ ಬಿನ್ ಲಾಡೆನ್ ಬೇಟೆಯ ಹೆಸರಲ್ಲಿ ಮಾತ್ರ ಅಮೆರಿಕ ವಿಶ್ವದ ಮೇಲೆ 'ವಾರ್ ಆನ್ ಟೆರರ್' ಪ್ರಾರಂಭಿಸಿತು. ಎಲ್ಲೆಲ್ಲಿ ಜನರು - ಅದರಲ್ಲೂ ಇರಾಕ್, ಸೂಡಾನ್, ಲೆಬನಾನ್, ಜೋರ್ಡಾನ್ ಹಾಗೂ ಇನ್ನಿತರ ಅರಬ್ ದೇಶಗಳಲ್ಲಿ - ಅಮೆರಿಕನ್ ಸಾಮ್ರಾಜ್ಯವಾದದ ವಿರುದ್ಧ ಪ್ರತಿಭಟಿಸುತ್ತಿದ್ದರೋ, ಅವೆಲ್ಲವನ್ನೂ ಸದೆಬಡಿಯುವುದಕ್ಕೆ ಅಮೆರಿಕ ಒಸಾಮಾ ಮತ್ತು ಅಲ್ ಕೈದಾ ಭೂತವನ್ನೇ ಬಳಸಿತು. ಹೀಗಾಗಿ ಒಸಾಮಾ ಸತ್ತಿದ್ದು ಯಾವಾಗ ಎಂಬ ಪ್ರಶ್ನೆಗಿಂತ ಅಮೆರಿಕ ಒಸಾಮಾ ಗುಮ್ಮವನ್ನು ಜೀವಂತವಾಗಿರಿಸಿದ್ದು ಮಾತ್ರ ತನ್ನ ಸಾಮ್ರಾಜ್ಯಶಾಹಿ ಈಡೇರಿಕೆಗೆ ಎಂಬುದು ಸ್ಪಷ್ಟ. ಅಮೆರಿಕದ ಕಟ್ಟಡಗಳ ಮೇಲೆ ಒಸಾಮಾ ದಾಳಿ ಮಾಡಿದಾಗ ಸತ್ತಿದ್ದು 2700 ಜನರು. ಆದರೆ ಅಮೆರಿಕ ಈ ವಾರ್ ಆನ್ ಟೆರರ್ ಪ್ರಾರಂಭಿಸಿದ ಮೇಲೆ ಕೇವಲ ಅಫ್ಘಾನಿಸ್ತಾನ ಒಂದರಲ್ಲೇ ಅಮೆರಿಕನ್ ಸೇನೆಗಳು ಲಕ್ಷಾಂತರ ಅಮಾಯಕರನ್ನು ಕೊಂದಿದೆ. ಆದರೆ ಇದು ಮಾತ್ರ ಭಯೋತ್ಪಾದನೆ ಎಂದೆನಿಸಿಕೊಳ್ಳುವುದೇ ಇಲ್ಲ. ಅಫ್ಘಾನಿಸ್ತಾನದಲ್ಲಿ ಅಮೆರಿಕನ್ ಕೈಗೊಂಬೆ ಸರ್ಕಾರದ ವಿರುದ್ಧ ಸಿಡಿದೆದ್ದಿರುವ ತಾಲಿಬಾನ್‌ಗಳನ್ನು ಮಟ್ಟಹಾಕಲೆಂದೇ ಒಸಾಮಾ ಭೂತವನ್ನು ಬಳಸಿಕೊಂಡ ಅಮೆರಿಕದ ಭಯೋತ್ಪಾದಕ ಸೇನೆ ಅಮಾಯಕ ಅಫ್ಘನ್ನರ ಮಾರಣಹೋಮ ನಡೆಸುತ್ತಿದೆ. ವಾಸ್ತವವಾಗಿ ಈಗಿರುವ ತಾಲಿಬಾನ್ ನಾಯಕತ್ವ ಒಸಾಮಾನನ್ನು ತನ್ನ ನಾಯಕನೆಂದು ಒಪ್ಪಿಕೊಂಡೇ ಇಲ್ಲವೆಂದು ಈಗ ಜಗಜ್ಜಾಹೀರಾಗಿದೆ.

ಅದಕ್ಕೆ ಕಾರಣವೂ ಇದೆ. 2001ರ ಸೆಪ್ಟೆಂಬರ್‌ನಲ್ಲಿ ಅಮೆರಿಕನ್ ಕಟ್ಟಡಗಳ ಮೇಲೆ ದಾಳಿ ಮಾಡಿದ್ದನ್ನು ಬಿಟ್ಟರೆ ಒಸಾಮಾನ ಅಲ್ ಕೈದಾ ಎಂದಿಗೂ ಅಮೆರಿಕನ್ ಮತ್ತದರ ಚೇಲಾಗಳ ಮೇಲೆ ಯಾವುದೇ ಆಕ್ರಮಣ ನಡೆಸಿಲ್ಲ. ಹಾಗೆ ನೋಡಿದರೆ ಒಸಾಮಾ ಲಾದೆನ್‌ನನ್ನು, ತಾಲಿಬಾನ್‌ಗಳನ್ನು ಮತ್ತು ಅಲ್ ಕೈದಾವನ್ನು ಹುಟ್ಟುಹಾಕಿದ್ದೇ ಅಮೆರಿಕ. 1980ರಲ್ಲಿ ರಷ್ಯನ್ ಪಡೆಗಳು ಅಫ್ಘಾನಿಸ್ತಾನವನ್ನು ಆಕ್ರಮಣ ಮಾಡಿಕೊಂಡ ನಂತರ ಅಲ್ಲಿ ಒಂದು ಧರ್ಮ ನಿರಪೇಕ್ಷ ಆಧುನಿಕ ಸರ್ಕಾರ ಸ್ಥಾಪನೆಯಾಯಿತಾದರೂ ಅಫಘನ್ ಜನತೆಯ ಬಹು ದೊಡ್ಡ ವರ್ಗ ಅದು ತಮ್ಮ ದೇಶದ ಮೇಲೆ ಪರದೇಶವೊಂದು ಮಾಡಿದ ಆಕ್ರಮಣ ಎಂದೇ ಭಾವಿಸಿದ್ದರು. ಅದು ಅಮೆರಿಕ ಹಾಗೂ ರಷ್ಯದ ನಡುವೆ ಶೀತಲಯುದ್ಧ ಜೋರಾಗಿ ನಡೆಯುತ್ತಿದ್ದ ಸಂದರ್ಭ. ಎಲ್ಲೆಲ್ಲಿ ರಷ್ಯನ್ನರ ಪ್ರಾಬಲ್ಯವಿತ್ತೋ ಅಲ್ಲೆಲ್ಲ ಅಮೆರಿಕ ಬಂಡಾಯವನ್ನು ಪ್ರಚೋದಿಸಿ ಸರ್ಕಾರವನ್ನು ಕೆಡವಿ ತನ್ನ ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಲು ಹುನ್ನಾರ ನಡೆಸುತ್ತಿದ್ದ ಕಾಲ. ಅಮೆರಿಕ ಈ ರೀತಿ ಲ್ಯಾಟಿನ್ ಅಮೆರಿಕ ಮತ್ತು ಏಷಿಯಾದ ಹಲವು ದೇಶಗಳಲ್ಲಿ ತನ್ನ ವಿರೋಧಿ ಸರ್ಕಾರಗಳ ವಿರುದ್ಧದ ಬಂಡಾಯಕ್ಕೆ ಗುಪ್ತ ಸಹಾಯ ಮಾಡಿ ಕೊಲೆ, ಯುದ್ಧ ಹಿಂಸಾಚಾರಗಳನ್ನು ನಡೆಸಿದ ದೊಡ್ಡ ಇತಿಹಾಸವೇ ಇದೆ. 1980ರ ಉತ್ತರಾರ್ಧದ ರೇಗನ್ ಕಾಲಾವಧಿಯಲ್ಲಿ ಇದು ಇನ್ನಷ್ಟು ಖುಲಂ ಖುಲ್ಲಾ ನಡೆಯಿತು. ಆಗ ರಷ್ಯನ್ ಪ್ರಾಬಲ್ಯದಲ್ಲಿದ್ದ ಅಫ್ಘಾನಿಸ್ತಾನದಲ್ಲಿ ಅಮೆರಿಕದ ಪರವಾದ ಸರ್ಕಾರ ತರಲು ಅಮೆರಿಕದ ಸಿಐಎ, ಪಾಕಿಸ್ತಾನದ ಐಎಸ್‌ಐ ಜಂಟಿ ಯೋಜನೆ ರೂಪಿಸಿತು. ಆಗ ಅವರ ಸಹಾಯಕ್ಕೆ ಬಂದಿದ್ದು ಮತ್ತು ಅಮೆರಿಕನ್ ಯೋಜನೆಗಳನ್ನು ಜಾರಿ ಮಾಡುವ ನೇತೃತ್ವ ವಹಿಸಿದ್ದು ಒಸಾಮಾ ಬಿನ್ ಲಾಡೆನ್. ಆ ವೇಳೆಗಾಗಲೆ ಆತ ಸೂಡಾನ್ ಹಾಗೂ ಇತರ ದೇಶಗಳಲ್ಲಿ ರಾಸಾಯನಿಕ ಕೈಗಾರಿಕೆಗಳು ಮಾತ್ರವಲ್ಲದೆ ಶಸ್ತ್ರಾಸ್ತ್ರ ಕೈಗಾರಿಕೆಗಳನ್ನೂ ನಡೆಸುತ್ತಿದ್ದ. ಈತನ ಬಿಸಿನೆಸ್ ಪಾಲುದಾರನಾಗಿದ್ದದ್ದು ನಂತರದಲ್ಲಿ ಬುಷ್ ಆಡಳಿತದಲ್ಲಿ ರಕ್ಷಣಾ ಮಂತ್ರಿಯಾಗಿದ್ದ ಡಿಕ್ ಚೆನಿ! ಅಮೆರಿಕದ ಬಹುಪಾಲು ಉದ್ಯಮಪತಿಗಳು ಮತ್ತು ರಾಜತಂತ್ರಜ್ಞರೂ ಸಹ ಇವನ ಉದ್ಯಮದಲ್ಲಿ ಪಾಲುದಾರರು ಮತ್ತು ಸ್ನೇಹಿತರೂ ಆಗಿದ್ದರು. ಈ ಕಾರಣದಿಂದಲೇ ಆತ ಮಿಲಿಯಾಧಿಪತಿಯೂ ಆಗಿದ್ದ. ಇಂಥಾ ಒಸಾಮಾ ಅಮೆರಿಕದ ವಿರುದ್ಧವೇ ಹೋರಾಟ ಮಾಡಲು ಸಾಧ್ಯವೇ? ತಾಲಿಬಾನ್ ಮತ್ತು ಮುಜಾಹಿದ್ದೀನ್ ಪಡೆಗಳನ್ನು ಹುಟ್ಟುಹಾಕಿದ ಒಸಾಮಾ ಪರದೇಶದ ಆಕ್ರಮಣದ ವಿರುದ್ಧ ಜನರಿಗಿದ್ದ ಅಸಮಾಧಾನಕ್ಕೆ ಧಾರ್ಮಿಕ ಉಗ್ರಗಾಮಿತ್ವದ ತಿರುಚನ್ನು ನೀಡಿದ. 1990ರ ವೇಳೆಗೆ ರಷ್ಯನ್ ಪಡೆಗಳು ಅಫಘಾನಿಸ್ತಾನದಿಂದ ಹಿಂತಿರುಗಿದ್ದವು. ಹೀಗೆ ಅಫಘಾನಿಸ್ತಾನದಲ್ಲಿ ಅಮೆರಿಕದ ವಿಜಯಕ್ಕೆ ಸಾರಥ್ಯವಹಿಸಿದ್ದು ಒಸಾಮಾ ಬಿನ್ ಲಾದೆನ್ನೇ! ನಂತರದಲ್ಲಿ ಆತ ಸೃಷ್ಟಿಸಿದ ಅಲ್ ಕೈದಾ ಹೋರಾಟ ನಡೆಸಿದ್ದೆಲ್ಲ. ನೈಜ ಅಮೆರಿಕನ್ ವಿರೋಧೀ ಸಂಘಟನೆಗಳ ವಿರುದ್ಧವೇ! ಲೆಬನಾನಿನ ಹೆಜ್ಬುಲ್ಲಾಗಳ ವಿರುದ್ಧ ನಡೆಸಿದ ಷಡ್ಯಂತ್ರ, ಇರಾಕಿನಲ್ಲಿ ಶಿಯಾಗಳ ಮಾರಣಹೋಮ, ಇರಾನಿನ ಹಮಾಸ್ ಪ್ರಾಬಲ್ಯ ಕಡಿಮೆ ಮಾಡುವ ಸಂಚು ಇವೆಲ್ಲವೂ ಅಮೆರಿಕನ್ ಆಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಒಸಾಮಾ ಮತ್ತು ಅವನ ಅಲ್ ಕೈದಾ ಮಾಡಿದ ಕಾರ್ಯಾಚರಣೆಗಳು.

ಆತನ ಸಂಘಟನೆ ಇಡೀ ವಿಶ್ವದಲ್ಲಿ ಮುಸ್ಲಿಮರ ವಿರುದ್ಧ, ಅರಬ್ ದೇಶಗಳ ವಿರುದ್ಧ, ಅಮೆರಿಕನ್ ಕುಮ್ಮಕ್ಕಿನೊಂದಿಗೆ ದಬ್ಬಾಳಿಕೆ ನಡೆಸುತ್ತಿರುವ ಇಸ್ರೇಲ್ ವಿರುದ್ಧ ಈವರೆಗೆ ಒಂದೂ ಕಾರ್ಯಾಚರಣೆ ನಡೆಸಿಲ್ಲ. ಅಷ್ಟು ಮಾತ್ರವಲ್ಲ, ಸೆಪ್ಟೆಂಬರ್ 11, 2001ರಲ್ಲಿ ಅಮೆರಿಕನ್ ಕಟ್ಟಡಗಳ ಮೇಲೆ ನಡೆಸಿದ ಒಂದೇ ಒಂದು ಕಾರ್ಯಾಚರಣೆ ಬಿಟ್ಟರೆ ಈವರೆಗೆ ಅಲ್‌ಕೈದಾ ಅಮೆರಿಕ ವಿರುದ್ಧವೂ ಒಂದೂ ಕಾರ್ಯಾಚರಣೆಯನ್ನು ನಡೆಸಿಲ್ಲ. ಮೇಲಿನ ಉದಾಹರಣೆಗಳು ಸ್ಪಷ್ಟಪಡಿಸುವಂತೆ ಅವರ ಕಾರ್ಯಾಚರಣೆ ಏನಿದ್ದರೂ ಅಮೆರಿಕದ ಶತ್ರುಗಳ ವಿರುದ್ಧವೇ ಆಗಿತ್ತು. ಆದರೂ ಇದ್ದಕ್ಕಿದ್ದಂತೆ ಅಮೆರಿಕದ ವಿರುದ್ಧ ಒಸಾಮಾ ಕಾರ್ಯಾಚರಣೆ ನಡೆಸಿದ್ದೇಕೆ ಎನ್ನುವುದು ಹಾಗೂ ಸೆಪ್ಟೆಂಬರ್

...15

ಅಮೆರಿಕ ಹಸಿದಿತ್ತು, ಪಾಕಿಸ್ತಾನ ಹಳಸಿತ್ತು...



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಒಸಾಮಾ ಬಿನ್ ಲಾಡೆನ್‌ನ ಹತ್ಯೆಯಿಂದಾಗಿ ಮೆರಿಕ ಸರ್ಕಾರಕ್ಕೆ ಖುಷಿಯಾಗಿದೆ, ಪಾಕಿಸ್ತಾನದ ರ್ಕಾರಕ್ಕೆ ಮುಖಭಂಗವಾಗಿದೆ, ಭಾರತ ಸರ್ಕಾರಕ್ಕೆ ಾವು ಬಾಯಿ ಬಡಿದುಕೊಂಡರೂ ನೀವು ಳಲಿಲ್ಲ, ನೋಡಿ ಈಗ" ಎಂಬ ನೆಮ್ಮದಿಯಂತೂ ದೆ.

ಕಳೆದ ಹಲವಾರು ವರ್ಷಗಳಿಂದ ಪಾಕಿಸ್ತಾನ ಯೋತ್ಪಾದಕರಿಗೆ, ಕ್ರಿಮಿನಲ್‌ಗಳಿಗೆ ನೆರವು ಮತ್ತು ಶ್ರಯ ನೀಡುತ್ತದೆಂದು ಭಾರತವು ಅಮೆರಿಕಕ್ಕೆ ಾರುಗಳನ್ನು ನೀಡುತ್ತಲೇ ಬಂದಿದೆ. ಮಾತ್ರವಲ್ಲ ಕಾರಣಕ್ಕಾಗಿಯೇ ಅಮೆರಿಕವು ಪಾಕಿಸ್ತಾನಕ್ಕೆ ರ್ಥಿಕ ನೆರವು ನೀಡಕೂಡದೆಂದು ಒತ್ತಾಯಿಸುತ್ತಲೇ ದೆ. ಆದರೆ ಇದ್ಯಾವುದರ ಬಗ್ಗೆಯೂ ಗಮನ ಡದ ಅಮೆರಿಕ ಪಾಕಿಸ್ತಾನವನ್ನು ಮುದ್ದಾಡುತ್ತಾ ದೇಶಕ್ಕೆ ಯಥೇಚ್ಛ ಹಣ ಸಹಾಯವನ್ನು ಡುತ್ತಲೇ ಬಂದಿದೆ. ಒಂದು ಅಂದಾಜಿನ ಪ್ರಕಾರ, ದ ಒಂಭತ್ತು ವರ್ಷಗಳಲ್ಲಿ ಅಮೆರಿಕ ದೇಶವು ಕಿಸ್ತಾನಕ್ಕೆ 18 ಬಿಲಿಯನ್ ಡಾಲರ್‌ಗಳ ನೆರವನ್ನು ಡಿದೆ. ಅದರಲ್ಲಿ ಬಹಳಷ್ಟು ಹಣವನ್ನು ತನ್ನ ನ್ಯಕ್ಕೆ ಆಧುನಿಕ ಶಸ್ತ್ರಾಸ್ತ್ರಗಳನ್ನು ಮತ್ತು ತ್ರಜ್ಞಾನವನ್ನು ಖರೀದಿಸಲು ಪಾಕಿಸ್ತಾನ ವೆಚ್ಚ ಾಡುವುದಕ್ಕೆ. ಅಂತಹ ವಸ್ತುಗಳನ್ನು ಯೋಗಿಸಿಯೇ ಪಾಕಿಸ್ತಾನದ ಭಯೋತ್ಪಾದಕರು ಮುಂಬೈ ಮೇಲೆ ದಾಳಿ ನಡೆಸಲು ಸಾಧ್ಯವಾಗಿದ್ದು.

ಈಗ ನೋಡಿದರೆ ಯಾವ ಭಯೋತ್ಪಾದಕರನ್ನು ಿಹಿಸಲು, ನಿರ್ಮೂಲನೆ ಮಾಡಲು ಅಮೆರಿಕ ಕಿಸ್ತಾನಕ್ಕೆ ಅಷ್ಟೊಂದು ಧನಸಹಾಯ ಡುತ್ತಿತ್ತೋ ಅದೇ ಪಾಕಿಸ್ತಾನದಲ್ಲಿ ಅಮೆರಿಕದ ಮ ಶತ್ರು'ವಾಗಿದ್ದ ಒಸಾಮಾ ಬಿನ್ ಲಾಡೆನ್ ತ್ತೆಯಾಗಿದ್ದಾನೆ. ಆತ ತನ್ನ ದೇಶದಲ್ಲಿ ಇದ್ದದ್ದು ಗೆ ಗೊತ್ತೇ ಇರಲಿಲ್ಲ ಎಂದು ಪಾಕಿಸ್ತಾನದ ರ್ಕಾರ ಅದೆಷ್ಟೇ ಬಾಯಿ ಬಡಿದುಕೊಂಡರೂ ನ್ನು ಪ್ರಜ್ಞಾವಂತರಾರೂ ನಂಬುವುದಿಲ್ಲ.

ಏಕೆಂದರೆ ಒಸಾಮಾ ಬಿನ್ ಲಾಡೆನ್‌ನಂತಹ ಐದಾರು ವರ್ಷಗಳ ಕಾಲ ತನ್ನ ಹಲವು ಯರು, ಇಪ್ಪತ್ತಕ್ಕೂ ಹೆಚ್ಚು ಮಕ್ಕಳು, ಹತ್ತಾರು ಮ್ಮಕ್ಕಳು, ಹಲವಾರು ಸಹಚರರು ದಿಗಳೊಂದಿಗೆ ಅಬೋಟಾಬಾದ್‌ನಂತಹ ಟೋನ್‌ಮೆಂಟ್ ಪಟ್ಟಣದಲ್ಲಿ ಪಾಕಿಸ್ತಾನದ ವುದಾದರೂ ಒಂದು ಅಧಿಕಾರದ ಅಂಗದ ಲ್ಲದೆ ಬದುಕಿರಲು ಸಾಧ್ಯವೇ ಇರಲಿಲ್ಲ.

ಸಹಜವಾಗಿಯೇ ಈಗ ಪಾಕಿಸ್ತಾನದ ಇಂತಹ ಹದ ವಿರುದ್ಧ ಅಮೆರಿಕದಲ್ಲಿ ಅಪಾರ ಕೋಪ ವಾಗುತ್ತಿದೆ. ಇನ್ನು ಮುಂದೆ ಪಾಕಿಸ್ತಾನಕ್ಕೆ ನೆರವು ಕೂಡದೆಂದು ಅಲ್ಲಿನ ಜನಸಾಮಾನ್ಯರಿಂದ ದು ರಾಜಕಾರಣಿಗಳೂ ಹೇಳುತ್ತಿದ್ದಾರೆ. ಇಷ್ಟೆಲ್ಲ ದದ ನಡುವೆಯೂ ಬರಾಕ್ ಒಬಾಮಾ ಅವರ ರ ಪಾಕಿಸ್ತಾನದ ಕೈಬಿಡದಿರಲು ನಿರ್ಧರಿಸಿದೆ. ಕ್ಕೆ ಕಾರಣ ಪಾಕಿಸ್ತಾನ ಮತ್ತು ಅಮೆರಿಕ ಡೂ ದೇಶಗಳು ತಾವೇ ತೋಡಿಕೊಂಡಿರುವ ದಲ್ಲಿ ಬಿದ್ದಿರುವುದು.



ಎಂಭತ್ತರ ದಶಕದಲ್ಲಿ ಅಫ್ಘಾನಿಸ್ತಾನದ ಮೇಲೆ ರಷ್ಯಾದ ಎಡಪಂಥೀಯ ಸಿದ್ಧಾಂತ ಹೆಚ್ಚಾದಾಗ ಅದನ್ನು ತಡೆಯಲು ಅಮೆರಿಕ ಮುಂದಾಯಿತು. ಆಗ ಅಮೆರಿಕಕ್ಕೆ ಸಾಥ್ ನೀಡಿದ್ದು ಇದೇ ಪಾಕಿಸ್ತಾನ. ಪಾಕಿಸ್ತಾನಕ್ಕೂ ಇದು ಬೇಕಿತ್ತು. 1971ರ ಯುದ್ಧದಲ್ಲಿ ಭಾರತಕ್ಕೆ ಸೋತಿದ್ದ ಪಾಕಿಸ್ತಾನ ಇಬ್ಭಾಗವಾಗಿತ್ತು. ಹೀಗೆ ಸೋತು ಹೈರಾಣಾಗಿದ್ದ ಪಾಕಿಸ್ತಾನದ ಆತಂಕ ಹೆಚ್ಚಾಗುವಂತೆ ಭಾರತ 1974ರಲ್ಲಿ ಅಣುಬಾಂಬ್ ಸ್ಫೋಟಿಸಿತು. ಇತ್ತ ತನಗಿಂತ ಬಲಿಷ್ಠವಾಗಿದ್ದ ಭಾರತ, ಅತ್ತ ತನ್ನ ಗಡಿಯನ್ನೇ ಸೀಳಿಕೊಂಡು ಬರಲು ಸಜ್ಜಾಗಿದ್ದ ರಷ್ಯಾದ ಕೆಂಪು ಸೈನ್ಯ. ಆ ಸಮಯದಲ್ಲೇ ಅಮೆರಿಕದ ನೆರವಿನಿಂದ ಜಿಯಾ ಉಲ್ ಹಕ್ ಎಂಬ ಸೈನ್ಯಾಧಿಕಾರಿ ಪಾಕಿಸ್ತಾನದಲ್ಲಿ ಅಧಿಕಾರವನ್ನು ಲಪಟಾಯಿಸಿದ.

ಅಮೆರಿಕ ಮತ್ತು ಜಿಯಾ ಒಟ್ಟುಗೂಡಿ ತಾಲಿಬಾನ್ ಎಂಬ ಮೂಲಭೂತವಾದಿ ಸಂಘಟನೆಯನ್ನು ಸೃಷ್ಟಿಸಿದರು. ಅದೂ ಸಾಲದೆಂಬಂತೆ ಒಸಾಮಾ ಬಿನ್ ಲಾಡೆನ್‌ನಂತಹ ವ್ಯಕ್ತಿ ಅಲ್ ಕೈದಾವನ್ನು ಸ್ಥಾಪಿಸಲು ಎಲ್ಲ ತರಹದ ನೆರವನ್ನೂ ನೀಡಿದರು. ಇದರ ಜೊತೆಜೊತೆಗೆ ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನ, ಎರಡೂ ದೇಶಗಳಲ್ಲಿ ಮೂಲಭೂತವಾದಿಗಳನ್ನು ಪ್ರೋತ್ಸಾಹಿಸಲಾರಂಭಿಸಿದರು. ಅಮೆರಿಕದ ಸಿಐಎ ಮತ್ತು ಪಾಕಿಸ್ತಾನದ ಐಎಸ್‌ಐ ಮದರಸಾಗಳಲ್ಲಿ ಇಸ್ಲಾಮ್‌ನ ನಿಜ ಅರ್ಥವನ್ನೇ ತಿರುಚಿ 'ಜಿಹಾದ್' ಮತ್ತು 'ಖಾಫಿರ್'ನಂತಹ ಪದಗಳಿಗೆ ಹೊಸ ವ್ಯಾಖ್ಯಾನಗಳನ್ನು ನೀಡುವ ಮೂಲಕ ಹೊಸ ಪೀಳಿಗೆಯನ್ನೂ ಬ್ರೈನ್‌ವಾಶ್ ಮಾಡಿದರು.

ಹೀಗೆ ರಷ್ಯಾದ 'ಕಮ್ಯೂನಿಸಂ' ವಿರುದ್ಧ ಅಮೆರಿಕದ 'ಪ್ರಜಾತಂತ್ರ'ಕ್ಕೆ ಬೆಂಬಲ ನೀಡುವ ನೆಪದಲ್ಲಿ ಆ ದೇಶದಿಂದ ಅಪಾರ ನೆರವನ್ನು ಪಡೆಯಲಾರಂಭಿಸಿದ ಪಾಕಿಸ್ತಾನ ಭಾರತಕ್ಕೆ ಕಿರುಕುಳ ಕೊಡುವುದನ್ನು ಮುಂದುವರೆಸಿತು. ಮೊದಲು ಖಾಲಿಸ್ತಾನ್ ಹೆಸರಲ್ಲಿ ಪಂಜಾಬ್‌ನಲ್ಲಿ ತನ್ನ ತಂಟೆ ಶುರುಮಾಡಿತು. ಆ ಹೋರಾಟದಲ್ಲಿ ಸಾವಿರಾರು ಜನ ಸತ್ತರು. ಕೊನೆಗೆ ಕೆ.ಪಿ.ಎಸ್. ಗಿಲ್ ಎಂಬ ಪೊಲೀಸ್ ಅಧಿಕಾರಿ ಹತ್ತಾರು ಅಕ್ರಮ ಮತ್ತು ಸಕ್ರಮ ಮಾರ್ಗಗಳನ್ನು ಬಳಸಿ ಅದನ್ನು ಮಟ್ಟಹಾಕುವುದರಲ್ಲಿ ಯಶಸ್ವಿಯಾದರು. ಅದಾದನಂತರ ಪಾಕಿಸ್ತಾನ ಕಾಶ್ಮೀರದಲ್ಲಿ ತನ್ನ ಚೇಷ್ಟೆಯನ್ನು ಪ್ರಾರಂಭಿಸಿತು. ಅದಕ್ಕೆ ಸರಿಯಾಗಿ ಭಾರತ ಸರ್ಕಾರವೂ ಕಾಶ್ಮೀರಿಗಳ ಆಶೋತ್ತರಗಳಿಗೆ ಸ್ಪಂದಿಸದೆ ತನ್ನ ಬಲ ಪ್ರಯೋಗಿಸಲು ಮುಂದಾಯಿತು. ಇದೆಲ್ಲದರ ಪರಿಣಾಮವನ್ನು ಇವತ್ತಿಗೂ ನಾವು ಕಾಶ್ಮೀರದಲ್ಲಿ ನೋಡುತ್ತಿದ್ದೇವೆ.

ಇದೆಲ್ಲದರ ನಡುವೆ ಅಮೆರಿಕವೂ ಜಗತ್ತಿನ ಇತರೆ ದೇಶಗಳಲ್ಲಿ ತನ್ನ ಸರ್ವಾಧಿಕಾರಿ ಧೋರಣೆಯನ್ನು ಮುಂದುವರೆಸಿತ್ತು. ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಅನ್ನು ಅಮೆರಿಕದಿಂದ ನಿಗ್ರಹಿಸಲಾಗದಿದ್ದರೂ ಅಲ್ಲಿ ಕರ್ಜೈ ಎಂಬ ನಿರುಪದ್ರವಿಯನ್ನು ಅಧಿಕಾರದಲ್ಲಿ ಕೂರಿಸಿ ಆತನ ರಕ್ಷಣೆಗೆ ನಿಂತಿತು. ಆನಂತರ ಇರಾಕ್ ಮೇಲೆ ದಾಳಿ ಮಾಡಿ ಸದ್ದಾಮ್ ಹುಸೇನ್‌ನನ್ನು ಕೊಂದು ಹಾಕಿತು. ಇವತ್ತಿಗೂ ಟುನಿಸಿಯಾ, ಈಜಿಪ್ಟ್ ಮತ್ತು ಇತರೆ ಮುಸ್ಲಿಮ್ ದೇಶಗಳಲ್ಲಿ ಪ್ರಜಾತಂತ್ರ ಬಾರದಂತೆ ಅಲ್ಲಿನ ಸರ್ವಾಧಿಕಾರಿಗಳಿಗೆ ನೆರವನ್ನು ನೀಡುತ್ತಿದೆ.

ಹೀಗೆ ಜಗತ್ತಿನಾದ್ಯಂತ ಅತಿದೊಡ್ಡ ಭಯೋತ್ಪಾದಕನಾಗಿ ವರ್ತಿಸುತ್ತಿರುವ ಅಮೆರಿಕಕ್ಕೆ ಇವತ್ತು ಪಾಕಿಸ್ತಾನದ ಹಂಗಿನಲ್ಲಿ ಉಳಿಯುವ ಅನಿವಾರ್ಯ ಪರಿಸ್ಥಿತಿ ಎದುರಾಗಿದೆ. ಸಮುದ್ರ ತೀರವಿಲ್ಲದಿರುವ ಅಫ್ಘಾನಿಸ್ತಾನದಲ್ಲಿ ಸುಮಾರು 1,40,000 ಸೈನಿಕರನ್ನು ನಿಯೋಜಿಸಿರುವ ಅಮೆರಿಕ, ಇವತ್ತು ಅವರಿಗೆಲ್ಲ ಆಹಾರದಿಂದ ಹಿಡಿದು ಶಸ್ತ್ರಾಸ್ತ್ರಗಳನ್ನು ಕಳುಹಿಸಲು ಪಾಕಿಸ್ತಾನದ ವಿಮಾನ ನಿಲ್ದಾಣಗಳನ್ನು ಮತ್ತು ರಸ್ತೆಗಳನ್ನೇ ಅವಲಂಬಿಸಬೇಕಿದೆ. ಪಾಕಿಸ್ತಾನದ ನೆರವಿಲ್ಲದಿದ್ದರೆ ಅಫ್ಘಾನಿಸ್ತಾನದಲ್ಲಿ ತನ್ನ ಸೈನ್ಯವನ್ನು ಇರಿಸಲು ಅಮೆರಿಕಕ್ಕೆ ಆಗುವುದಿಲ್ಲ. ಆ ಕಾರಣಕ್ಕೇ ಪಾಕಿಸ್ತಾನ ಎಂತಹ ಅವಘಡಗಳಿಗೆ ಕಾರಣವಾದರೂ ಅದನ್ನು ತೊರೆಯಲು ಅಮೆರಿಕಕ್ಕೆ ಆಗುತ್ತಿಲ್ಲ.

ಇದೆಲ್ಲದರ ಮಧ್ಯೆ ಮತ್ತೊಂದು ಸಮಸ್ಯೆಯೂ ಇದೆ. ಅದೇನೆಂದರೆ ಪಾಕಿಸ್ತಾನ ಈಗ ಚಿಂದಿ ಚಿತ್ರಾನ್ನವಾಗಿರುವುದು. ಇವತ್ತು ಪಾಕಿಸ್ತಾನದಲ್ಲಿ ಚುನಾಯಿತ ಸರ್ಕಾರ ಅಧಿಕಾರದಲ್ಲಿದ್ದರೂ ಅಲ್ಲಿ ನಿಜವಾಗಲೂ ಅಧಿಕಾರ ಚಲಾಯಿಸುವುದು ಪಾಕಿಸ್ತಾನದ ಸೈನ್ಯ ಮತ್ತು ಗೂಢಚರ್ಯ ಇಲಾಖೆಯಾದ ಐಎಸ್‌ಐ. ಇದರೊಂದಿಗೆ ಅಲ್ಲಿನ ಮುಲ್ಲಾಗಳೂ ನಡೆಸುವ ದರ್ಬಾರು ಬೆರೆತಿದೆ. ಇದೆಲ್ಲದರ ಅರ್ಥ ಏನೆಂದರೆ ಇವತ್ತು ಪಾಕಿಸ್ತಾನ ನಿಜಕ್ಕೂ ಅರಾಜಕ ಸ್ಥಿತಿಯಲ್ಲಿದೆ. ಅಲ್ಲಿನ ಪ್ರತಿಯೊಂದು ಅಧಿಕಾರಸ್ಥ ಅಂಗವೂ ಯಾರ ನಿಯಂತ್ರಣದಲ್ಲಿಲ್ಲವೆಂಬಂತೆ ವರ್ತಿಸುತ್ತಿವೆ. ಇಂತಹ ಸಂದರ್ಭದಲ್ಲಿ ಅಪ್ಪಿತಪ್ಪಿ ಅಮೆರಿಕವೇನಾದರೂ ಆರ್ಥಿಕ ನೆರವನ್ನು ನಿಲ್ಲಿಸಿದರೆ "ನಮ್ಮಲ್ಲಿರುವ ಅಣುಬಾಂಬ್ ಬೇರೆ ಯಾವುದಾದರೂ ಇಸ್ಲಾಮಿಕ್ ಗುಂಪಿನ ಪಾಲಾಗುವ ಅಪಾಯವಿದೆ" ಎಂದೂ ಪಾಕಿಸ್ತಾನ ಅಮೆರಿಕವನ್ನೇ ಸೂಕ್ಷ್ಮವಾಗಿ ಬ್ಲಾಕ್‌ಮೇಲ್ ಮಾಡುತ್ತಿದೆ.

ಒಟ್ಟಾರೆ ತನ್ನ ಭಂಡತನದಿಂದಾಗಿ ಲಾಡೆನ್‌ನಂತಹ ಭಯೋತ್ಪಾದಕನಿಗೆ ರಕ್ಷಣೆ ನೀಡುತ್ತದೆ, 1992ರ ಮುಂಬೈ ಸರಣಿ ಬಾಂಬ್ ದಾಳಿಯ ರುವಾರಿಯಾದ ಭೂಗತ ಜಗತ್ತಿನ ಕ್ರಿಮಿ ದಾವೂದ್ ಇಬ್ರಾಹಿಂನಂತಹವನಿಗೆ ನೆರವು ನೀಡುತ್ತದೆ ಪಾಕಿಸ್ತಾನ. ಆದರೂ ಸ್ವಯಂಕೃತ ಅಪರಾಧಗಳಿಂದಾಗಿ ಇವತ್ತು ಅಮೆರಿಕ ಅಂತಹ ಪಾಕಿಸ್ತಾನವನ್ನೇ ಬೆಂಬಲಿಸುವ ಪರಿಸ್ಥಿತಿಯಲ್ಲಿದೆ. ಅದಕ್ಕೇ ಮೊದಲೇ ಅಂದದ್ದು, ಅಮೆರಿಕ ಹಸಿದಿತ್ತು, ಪಾಕಿಸ್ತಾನ ಹಳಸಿತ್ತು ಎಂದು....




ಮೇಯರ್ ಹೆಬ್ಬೆಟ್ಟು ಉಪಮೇಯರ್ ಕ್ರಿಮಿನಲ್

ಮೇಯರ್ ಹೆಬ್ಬೆಟ್ಟು, ಉಪಮೇಯರ್ ಕ್ರಿಮಿನಲ್. ಇವರನ್ನಿಟ್ಟು ಬೆಂಗಳೂರನ್ನಾಳಲು ಹೊರಟವರು ಅಶೋಕ್, ಮುನಿರಾಜು ಇತ್ಯಾದಿ ಬಿಜೆಪಿಯ ದೊಣ್ಣೆನಾಯಕರು ಈಗಾಗಲೇ ವರ್ಕ್‌ಕೋಡ್ ಹಗರಣದಲ್ಲಿ ಐದು ಸಾವಿರ ಕೋಟಿಯಷ್ಟು ನುಂಗಿ ನೀರು ಕುಡಿದಾಗಿದೆ. ನೂರೈವತ್ತು ಕೋಟಿಯ ಮೇಯರ್ ಫಂಡ್ ಪೂರ್ತಿ ಮಾಜಿ ಮೇಯರ್ ನಟರಾಜ್ ಮತ್ತಾತನ ಗಾಡ್‌ಫಾದರ್ ಅಶೋಕ್ ಪಾದಕ್ಕೆ ಸಮರ್ಪಣೆಯಾಗಿದೆ. ಹೊಸ ಕವಳಕ್ಕಾಗಿ ಹಸಿದು ಕೂತ ಪಾಲಿಕೆ ಅಧಿಕಾರಿಗಳ ಹಿಂಡು, ಸಿಕ್ಕಿದ್ದೆಲ್ಲಾ ಸ್ವಾಹಾಗೈಯಲು ನಿಂತ ಸ್ಥಾಯಿ ಸಮಿತಿ ಅಧ್ಯಕ್ಷರುಗಳ ದಂಡು ಮತ್ತು ಬಂದಷ್ಟು ಗುಂಜಿಕೊಳ್ಳಲು ಹಾತೊರೆದು ಕೂತ ಬಿಜೆಪಿ ಕೌನ್ಸಿಲರ್‌ಗಳೆಂಬ ಬಕಪಕ್ಷಿಗಳ ಪಡೆ-

ಬೆಂಗಳೂರಿನ ನಾಶಕ್ಕೆ ಏನೇನು ಬೇಕೋ ಅದೆಲ್ಲದರ ವಿಲಕ್ಷಣ ಕಾಂಬಿನೇಶನ್ನಿನಂತೆ ಹೊಸ ಮೇಯರ್ ಮತ್ತು ಉಪಮೇಯರ್ ಕಂಗೊಳಿಸುತ್ತಿದ್ದಾರೆ.

ಎಸ್.ಕೆ.ನಟರಾಜ್ ಅವಧಿ ಮುಗಿಯುತ್ತಿದ್ದಂತೆ ಪರಿಶಿಷ್ಟ ಮಹಿಳೆಯನ್ನು ಮೇಯರ್ ಮಾಡುವ ಷಡ್ಯಂತ್ರದ ಹಿಂದಿದ್ದದ್ದು once again ಗೃಹಮಂತ್ರಿ ಅಶೋಕ್. ಬಿಳೇಕಳ್ಳಿ ವಾರ್ಡ್‌ನ ರೂಪಾ ರಮೇಶ್ ಮತ್ತು ನಾಯಂಡಹಳ್ಳಿಯ ಬಿಜೆಪಿ ಕೌನ್ಸಿಲರ್ ರಾಜೇಶ್ವರಿಯವರಂಥ ಸುಸಂಸ್ಕೃತ, ಪ್ರಜ್ಞಾವಂತ ದಲಿತ ಕೌನ್ಸಿಲರ್‌ಗಳಿದ್ದಾಗ್ಯೂ ಹೋಗಿ ಹೋಗಿ ಶಾರದಮ್ಮನಂಥ ಹೆಬ್ಬೆಟ್ಟು ಮಾತೆಯನ್ನು ತಂದು ಮೇಯರ್ ಗಾದಿಗೆ ತಗುಲಿ ಹಾಕಿದ ಅಶೋಕ್ ಹುನ್ನಾರಕ್ಕೆ, ಬೆಂಗಳೂರಿನ ಹಿತದೃಷ್ಟಿಯಾಗಲಿ, ಸಾರ್ವಜನಿಕ ಕಾಳಜಿಯಾಗಲಿ ಅಥವಾ ಅಂತರರಾಷ್ಟ್ರೀಯ ಉದ್ದೇಶವಾಗಲಿ ಇದ್ದಿದ್ದರೆ ಆ ಮಾತೇ ಬೇರೆ.



ದೀಪು

ಬ್ರೋಕರ್ ರಾಮಾಂಜಿ

ಶಾರದಮ್ಮ ಹೇಳಿಕೇಳಿ ಅಶೋಕ್‌ರ ಪಕ್ಕಾ ಭಟ್ಟಂಗಿ, ದಾಸರಹಳ್ಳಿ ಶಾಸಕ ಮುನಿರಾಜನ ಭಕ್ತೆ. ದಾಸರಹಳ್ಳಿ ಮುನಿರಾಜು ರಿಯಲ್ ಎಸ್ಟೇಟ್ ದಂಧೆಯಲ್ಲಿ ಅಶೋಕ್ ಹುಟ್ಟು ಹಾಕಿದ ಘಟಸರ್ಪಗಳ ಪೈಕಿ ಅತ್ಯಂತ ಚಾಣಾಕ್ಷ ಮತ್ತು ಅಪಾಯಕಾರಿ ಕ್ರಿಮಿ. ಕಳೆದ ಪಾಲಿಕೆ ಚುನಾವಣೆಯಲ್ಲಿ ದಾಸರಹಳ್ಳಿಯ ಶೆಟ್ಟಿಹಳ್ಳಿ ವಾರ್ಡನ್ನು ಪರಿಶಿಷ್ಟ ಮಹಿಳೆಗೆ ಮೀಸಲಾಗಿರಿಸಿದ ಮುನಿರಾಜು ಹುನ್ನಾರದ ಹಿಂದಿದ್ದವನು ಶಾರದಮ್ಮನ ಗಂಡ ರಾಮಾಂಜಿನಪ್ಪ!

ಬೆಂಗಳೂರು ಉದ್ಧಾರಕ್ಕೆ ಬಿಜೆಪಿ ಕೊಡುಗೆ!

ಎಲ್ಲೆಲ್ಲಿ ದಲಿತರ ಇನಾಮ್ತಿ ಜಮೀನಿತ್ತೋ ಅದನ್ನು ಪತ್ತೆ ಹಚ್ಚಿ ನಕಲಿ ದಾಖಲೆ ಸೃಷ್ಟಿಸಿ ಕಾಟಕೊಟ್ಟು ಕಬಳಿಸುವುದನ್ನೇ ತನ್ನ ಫುಲ್‌ಟೈಮ್ ಕಾಯಕವನ್ನಾಗಿಸಿಕೊಂಡಿದ್ದ ರಾಮಾಂಜಿನಪ್ಪ ಆಗಿನ್ನೂ ಲ್ಯಾಂಡ್ ಬ್ರೋಕರಿಕೆ ಮಾಡಿಕೊಂಡೇ ಇದ್ದ ಮುನಿರಾಜುಗೆ ಉಪಬ್ರೋಕರ್ ಆಗಿದ್ದ, ಹುಟ್ಟುಕುಡುಕ. ಬೆಳ್ಳಂಬೆಳಗ್ಗೆಯೇ ವೈನ್‌ಸ್ಟೋರಿಗೆ ಮುಗಿಬಿದ್ದು ಮುನಿರಾಜು ಮನೆ ಬಾಗಿಲು ಕಾಯುತ್ತಿದ್ದ ರಾಮಾಂಜಿನಪ್ಪ, ಮೂಲತಃ ಅಬ್ಬಿಗೆರೆಯ ಪಿಳ್ಳಪ್ಪನ ಮಗ. ತಂದೆ ಪಿಳ್ಳಪ್ಪ, ಎಂಥಾ ಘಾತುಕನೆಂದರೆ ತನ್ನ ಒಡಹುಟ್ಟಿದ ಅಣ್ಣತಮ್ಮಂದಿರನ್ನೇ ಬೀದಿಗೆ ಹಾಕಿ ಪಿತ್ರಾರ್ಜಿತ ಆಸ್ತಿಯನ್ನು ನುಂಗಿಹಾಕಿದ್ದ. ಮಗ ರಾಮಾಂಜಿನಪ್ಪ ಅಪ್ಪನನ್ನೇ ಮೀರಿಸಿಬಿಟ್ಟ. ದೊಡ್ಡಪ್ಪ ಚೌಡಪ್ಪನ ಆಸ್ತಿಗೆ ಸಂಚಕಾರ ತಂದಿದ್ದೂ ಅಲ್ಲದೆ, ಚೌಡಪ್ಪನ ಮಗ ರಾಜ ಅಲಿಯಾಸ್ ಸೊಟ್ಟಾರಾಜ ಎಂಬ ರೌಡಿಯನ್ನು ಜೊತೆಹಾಕಿಕೊಂಡು ಅಬ್ಬಿಗೆರೆ, ಶೆಟ್ಟಿಹಳ್ಳಿ, ಕಮ್ಮಗೊಂಡನಹಳ್ಳಿಯ ದಲಿತರ ಆಸ್ತಿಗೆ ವಕ್ಕರಿಸಿದ.

ನಿರ್ಗತಿಕ ದಲಿತರ ಆಸ್ತಿ ಲಪಟಾಯಿಸುವ ರಾಮಾಂಜಿನಪ್ಪನ ದುರುಳತನಕ್ಕೆ ಕಮ್ಮಗೊಂಡನಹಳ್ಳಿಯ ಸಾರಾಯಿ ಆಂಜಿನಪ್ಪ ದೇವೇಗೌಡ ಉರ್ಫ್ ಕೆ.ಸಿ.ವೆಂಕಟೇಶ್, ಅಬ್ಬಿಗೆರೆ ಲೋಕೇಶ್ ಮುಂತಾದ ಭೂಕಂಟಕರೆಲ್ಲ ಜೊತೆಯಾದರು. ಅಬ್ಬಿಗೆರೆಯಲ್ಲಿ ಎರಡೆಕೆರೆ ದೇವಸ್ಥಾನದ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಿ ಯಾರೋ ಮಾರ್ವಾಡಿಯೊಬ್ಬನಿಗೆ ಮಾರಿಹಾಕಿದರು. ಶೆಟ್ಟಿಹಳ್ಳಿಯ ಎಂಟೆಕರೆ ಗೋಮಾಳವನ್ನು ನುಂಗಿ ಅದನ್ನು ಶಾಸಕ ಮುನಿರಾಜುವಿನ ಪಾದಕ್ಕರ್ಪಿಸಿದರು. ಇದಕ್ಕೆ ಪ್ರತಿಯಾಗಿ ಮುನಿರಾಜು 2005ರಲ್ಲಿ ರಾಮಾಂಜಿನಪ್ಪನ ಪತ್ನಿ ಶಾರದಮ್ಮನನ್ನು ತಾಲ್ಲೂಕು ಪಂಚಾಯತಿಗೆ ನಿಲ್ಲಿಸಿ ಬಿಜೆಪಿ ಟಿಕೆಟ್ ಕೊಡಿಸಿದ. ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸಿ.ಟಿ.ವಿಜಯಲಕ್ಷ್ಮಿಯ ವಿರುದ್ಧ ಕೆಲವೇ ನೂರು ಮತಗಳ ಅಂತರದಿಂದ ಗೆದ್ದ ಶಾರದಮ್ಮನನ್ನು ಮುಂದಿಟ್ಟುಕೊಂಡೇ ರಾಮಾಂಜಿನಪ್ಪ ಕಾಂಟ್ರ್ಯಾಕ್ಟ್ ದಂಧೆ ಆರಂಭಿಸಿದ.



ಅಂಜನೇಗೌಡ

ಪಾಲಿಕೆ ಎಲೆಕ್ಷನ್

ಮುಂದೆ ಕಮ್ಮಗೊಂಡನಹಳ್ಳಿಯಲ್ಲಿ ಶಾಲೆ ಮತ್ತು ಆಟದ ಮೈದಾನಕ್ಕೆಂದು ಮೀಸಲಿಟ್ಟಿದ್ದ ಆರೆಕರೆ ಸರ್ಕಾರಿ ಜಮೀನನ್ನು ಮುನಿರಾಜು ಮತ್ತು ರಾಮಾಂಜಿನಪ್ಪ ಸೇರಿಕೊಂಡು ಲಪಟಾಯಿಸಿದರು. ಶೆಟ್ಟಿಹಳ್ಳಿಯ ಮೂರು ಮತ್ತು ಅಬ್ಬಿಗೆರೆಯ ಐದು ದಲಿತ ಕುಟುಂಬಗಳ ಇನಾಮ್ತಿ ಆಸ್ತಿಯನ್ನು ಇದೇ ರಾಮಾಂಜಿನಪ್ಪನ ಗ್ಯಾಂಗ್ ನುಂಗಿಹಾಕಿತು. ಈ ರೀತಿ ಎಲ್ಲೆಲ್ಲಿ ದಲಿತರನ್ನು ವಂಚಿಸಿ ಅವರ ಆಸ್ತಿಯನ್ನು ರಾಮಾಂಜಿನಪ್ಪ ದೋಚುತ್ತಿದ್ದನೋ ಅಂಥ ಆಸ್ತಿಯನ್ನೆಲ್ಲ ತನ್ನ ಹೆಸರಿಗೆ ಬರೆಸಿಕೊಂಡು ಅದಕ್ಕೆ ಮತ್ತಷ್ಟು ದಾಖಲೆ ಹುಟ್ಟುಹಾಕಿ ದುಬಾರಿ ರೇಟಿಗೆ ಮಾರಿಕೊಂಡೇ ಮುನಿರಾಜು ಉದ್ಧಾರವಾದ.

ಇಂಥ ಭೂಡಕಾಯಿತಿಯ ದುಡ್ಡಿನಲ್ಲೇ ಮುನಿರಾಜು ಗೆದ್ದು ಶಾಸಕನಾದ. ಕಳೆದ ಬಿಬಿಎಂಪಿ ಚುನಾವಣೆಯಲ್ಲಿ ಚೇಲಾ ರಾಮಾಂಜಿನಪ್ಪನಿಗೆಂದೇ ಮುನಿರಾಜು ಶೆಟ್ಟಿಹಳ್ಳಿ ವಾರ್ಡನ್ನು ಪರಿಶಿಷ್ಟ ಮಹಿಳೆಗೆ ಮೀಸಲು ಮಾಡಿದ್ದ. ಕಾಂಗ್ರೆಸ್ ಕಾರ್ಯಕರ್ತ ಚಿನ್ನತಾತ ಎಂಬಾತನ ಪತ್ನಿ ವಿಜಯಲಕ್ಷ್ಮಿಯ ವಿರುದ್ಧ ಸರಿಸುಮಾರು ಸಾವಿರ ಮತಗಳ ಅಂತರದಿಂದ ಗೆದ್ದ ಶಾರದಮ್ಮನ ಹಿಂದಿದ್ದದ್ದು ಶಾಸಕ ಮುನಿರಾಜು. ಬೇರೆ ಯಾರಿಗಲ್ಲದಿದ್ದರೂ ಎಮ್ಮೆಲ್ಲೆ ಮುನಿರಾಜು ರಿಯಲ್ ಎಸ್ಟೇಟ್ ದಂಧೆಗೆ ಶಾರದಮ್ಮನಂಥ ಬಾಯಿಲ್ಲದ, ಓದು ಬಾರದ, ನೆಟ್ಟಗೆ ಮಾತಾಡಲೂ ಸಾಧ್ಯವಿಲ್ಲದ ಶಾರದಮ್ಮ ಗಂಡ ರಾಮಾಂಜಿನಪ್ಪನ ಕೈಗೊಂಬೆಯಾದರೆ ಎಮ್ಮೆಲ್ಲೆ ಮುನಿರಾಜು ಪಾಲಿಗೆ ರಾಮಾಂಜಿನಪ್ಪ ಅಕ್ಷರಶಃ ಜೀತದಾಳು. ಇನ್ನು ಮುನಿರಾಜು ಎಂಥ ಪರಾವಲಂಬಿಯೆಂದರೆ ಅಶೋಕ್ ಹಾಕಿದ ಗೆರೆಯನ್ನು ಕನಸಲ್ಲೂ ದಾಟುವವನಲ್ಲ.

ಬೆಂಗಳೂರಿನ ದುರಂತ

ಇಂಥದೊಂದು ಅಗಾಧ, ಆಘಾತಕಾರಿ ರಿಯಲ್ ಎಸ್ಟೇಟ್ ಜಾಲದ ನಿಸ್ತೇಜ ಪ್ರತಿನಿಧಿಯೇ ಮೇಯರ್ ಶಾರದಮ್ಮ. ಎಮ್ಮೆಲ್ಲೆ ಮುನಿರಾಜು ಮಾತೆಂದರೆ ಈಕೆಗದು ವೇದವಾಕ್ಯ, ಗಂಡ ರಾಮಾಂಜಿನಪ್ಪನ ಮಾತು ಬೇಕಿದ್ದರೆ ಧಿಕ್ಕರಿಸಿಯಾಳು ಮುನಿರಾಜು-ಅಶೋಕ್ ಅಂಕೆಯನ್ನು ಮಾತ್ರ ಮೀರುವವಳಲ್ಲ. ಇಂಥ ಅನಕ್ಷರಸ್ಥ, ರಬ್ಬರ್‌ಸ್ಟ್ಯಾಂಪ್ ಮೇಯರನ್ನು ಮುಂದಿಟ್ಟುಕೊಂಡೇ ಬೆಂಗಳೂರಿನ ಉದ್ಧಾರಕ್ಕೆ ನಿಂತ ಅಶೋಕ್ ಈಗಾಗಲೇ ಮುಖ್ಯಮಂತ್ರಿ ಯಡ್ಡಿಗೆ ತೆರಬೇಕಾದ ಕಮಿಷನ್ ತಲುಪಿಸಿದ್ದಾಗಿದೆಯಂತೆ. ಅದು ಐವತ್ತುಕೋಟಿಯಾ ಅಥವಾ ನೂರು ಕೋಟಿಯಾ ಬಲ್ಲವರ್‍ಯಾರು?

ದಾಸರಹಳ್ಳಿ, ಪೀಣ್ಯ, ತುಮಕೂರು ರಸ್ತೆ ಆಸುಪಾಸಿನ ಯಾವ ಪಾಲಿಕೆ ಆಸ್ತಿ ತಾನೇ ಉಳಿಯಲು ಸಾಧ್ಯ? ಕೋಟಿ ಲೆಕ್ಕದ ಯಾವ್ಯಾವ ಕಾಮಗಾರಿಗಳ ಹೆಸರಲ್ಲಿ ಯಾರ್‍ಯಾರು ಎಷ್ಟೆಷ್ಟು ಲಪಟಾಯಿಸಲು ಸಾಧ್ಯ? ಗಂಡ ರಾಮಾಂಜಿನಪ್ಪ ಬೆಳ್ಳಂಬೆಳಗ್ಗೆಯೇ ಕುಡಿದು ಮೇಯರ್ ಚೇಂಬರ್ ಹೊಕ್ಕನೆಂದರೆ ಏನೇನು ಅನಾಹುತ ಸೃಷ್ಟಿಸಿಯಾನು? ಬರುವ ವಿದೇಶಿ ಪ್ರತಿನಿಧಿಗಳ ಮುಂದೆ ಮೇಯರ್ ಶಾರದಮ್ಮ ಏನೆಲ್ಲಾ ಫಜೀತಿ ಪಡಬಹುದು? ಮೇಯರ್ ಹುದ್ದೆಯ ಪೂಜ್ಯತೆಯನ್ನು ನೆಲಗಳ್ಳ ಶಾಸಕ ಮುನಿರಾಜು ಹೇಗೆಲ್ಲಾ ಉಡಾಯಿಸಬಹುದು? ಮೇಯರ್ ಕಚೇರಿ ಎಂಬುದು ಕೇವಲ ಕಮಿಷನ್ ಎತ್ತುವಳಿಯ ಅಡ್ಡೆಯಲ್ಲದೇ ಮತ್ತೇನಾಗಲು ಸಾಧ್ಯ? ರಬ್ಬರ್ ಸ್ಟ್ಯಾಂಪ್ ಮೇಯರ್ ಶಾರದಮ್ಮ ಮತ್ತು ಆಕೆಯ ಭಟ್ಟಂಗಿಗಳಿಂದಾಗಿ ಬೆಂಗಳೂರಿನ ಜನ ಏನೆಲ್ಲಾ ತಾಪತ್ರಯಕ್ಕೆ ಸಿಲುಕಬಹುದು?

ಇದು ಬೆಂಗಳೂರಿನ ದೌರ್ಭಾಗ್ಯದ ಒಂದು ಮುಖ

ಗರ್ಭಿಣಿಯರ ಗರ್ಭಕ್ಕೂ ಬಿಜೆಪಿ ಕೈ

ಉಪಮೇಯರ್ ಹರೀಶ ಮತ್ತಾತನ ರೌಡಿಪಡೆಯ ಪಾಪದ ಕೊಡ ತುಂಬಿ ಬಂದಿದ್ದರ ಫಲವೇ ಸೃಷ್ಟಿ ಸೇವಾ ಕೇಂದ್ರದ ಈ ಗರ್ಭಿಣಿಯರ ಕಣ್ಣೀರು!

ಮಹಾಲಕ್ಷ್ಮಿ ಲೇಔಟಿನ ವಿಜಯಾನಂದ ನಗರದಲ್ಲಿ ಸೃಷ್ಟಿ ಚಾರಿಟೇಬಲ್ ಸಂಸ್ಥೆ ಬಾಡಿಗೆ ತಾಯಂದಿರಿಗೆಂದೇ ಸೇವಾ ಕೇಂದ್ರವೊಂದನ್ನು ನಡೆಸುತ್ತದೆ. ಕಮ್ಮಿಯೆಂದರೂ ಇಲ್ಲಿ ಒಂದು ಡಜನ್ ಗರ್ಭಿಣಿಯರಿದ್ದಾರೆ. ಈ ಸೇವಾ ಕೇಂದ್ರದ ಪಕ್ಕದಲ್ಲೇ ಲೋಕಲ್ ರೌಡಿಗಳಾದ ಅಂಜಿ ಉರ್ಫ್ ಅಂಜನ್‌ಗೌಡ, ದೀಪು, ಪ್ರಕಾಶ ಮುಂತಾದವರು ಅಡ್ಡೆ ಹಾಕುತ್ತಾರೆ. ಇವರೆಲ್ಲರೂ ಸದ್ಯ ಮಾರಪ್ಪನಪಾಳ್ಯ ವಾರ್ಡ್ ಬಿಜೆಪಿ ಅಧ್ಯಕ್ಷ ಮತ್ತು ಹಳೇ ರೌಡಿ ಆಟೋ ವೆಂಕಟೇಶ ಉರ್ಫ್ ಮರಾಠಿ ವೆಂಕಟೇಶನ ಶಿಷ್ಯರು. ವೆಂಕಟೇಶ ಉಪಮೇಯರ್ ಹರೀಶನ ಬಲಗೈ ಬಂಟ.

ಬಾಡಿಗೆ ತಾಯಂದಿರು ನಡತೆಗೆಟ್ಟವರೆಂದೋ, ವ್ಯಭಿಚಾರಿಗಳೆಂದೋ ಲೆಕ್ಕಹಾಕಿದ ಈ ರೌಡಿಗಳು ಮೊದಮೊದಲು ಚುಡಾಯಿಸಲಾರಂಭಿಸಿದರು. ಸೇವಾ ಕೇಂದ್ರದ ಮುಖ್ಯಸ್ಥ ಗುರುಮೂರ್ತಿ ಶುರುವಿನಲ್ಲಿ ಕಾಟ ತಪ್ಪಲಿ ಎಂದು ಅಷ್ಟಿಷ್ಟು ಕಾಸನ್ನೂ ಕೊಟ್ಟರು. ಬರುಬರುತ್ತ ಬೇಡಿಕೆ ಹೆಚ್ಚಾಯಿತು. ಹರೀಶ್‌ನ ಛೇಲಾ ವೆಂಕಟೇಶ್ ಗುರುಮೂರ್ತಿಯನ್ನು ಕರೆದು ಹತ್ತು ಲಕ್ಷ ಕೊಡು ಎಂದ. ಎಲ್ಲಿಂದ ತಂದು ಕೊಡಲು ಸಾಧ್ಯ?


ಗರ್ಭಿಣಿಯರೇ ಬಂದು ವೆಂಕಟೇಶನ ಮುಂದೆ ಕಣ್ಣೀರಿಟ್ಟರು. ಕೌನ್ಸಿಲರ್ ಹರೀಶನ ಮನೆಗೇ ಬಂದು ಕಾಲಿಗೆ ಬಿದ್ದರು. ಇದ್ಯಾವುದಕ್ಕೂ ಬಿಜೆಪಿಯ ಅಧಿಪತಿಗಳ ಮನಸ್ಸು ಕರಗಲಿಲ್ಲ. "ಏನೋ ಕೆಟ್ಟ ಕೆಲಸ ನಡೆಯುತ್ತಿದೆ. ನಮಗೆ ಜನರಿಂದ ಕಂಪ್ಲೇಂಟು ಬಂದಿದೆ. ನೋಡಿ.... ಏನೂ ಆಗಬಾರ್‍ದು ಅಂದ್ರೆ ನಮ್ಮವರನ್ನು ಚೆನ್ನಾಗಿಟ್ಟುಕೊಳ್ಳೀ... "ಎಂದೇ ಹರೀಶ ಸಾಗ ಹಾಕಿದ್ದ. ಯಾವತ್ತು ದುಡ್ಡು ಹುಟ್ಟಲಿಲ್ಲವೋ 2010 ರ ಡಿಸೆಂಬರ್ 25 ರಂದು ರೌಡಿ ದೀಪು ಉದ್ದುದ್ದ ಲಾಂಗ್ ಕೈಗೆತ್ತಿಕೊಂಡಿದ್ದ. ಸೇವಾ ಕೇಂದ್ರದ ಕಾರ್ಯಕರ್ತರನ್ನು ಹಿಡಿದು ಬಡಿದ. ಇದು ಸೇವಾಕೇಂದ್ರದ ಸೀಸಿ ಟೀವಿಯಲ್ಲಿ ದಾಖಲಾಯಿತು. ಮಹಾಲಕ್ಷ್ಮಿ ಲೇಔಟ್ ಎಸಿಪಿ ಅಜ್ಜಪ್ಪ ದೂರು ಪಡೆದು ರೌಡಿ ದೀಪುನನ್ನು ಜೈಲಿಗೆ ದಬ್ಬಿದರು.

ಇದರಿಂದ ಕೆರಳಿದ ವೆಂಕಟೇಶ ಮತ್ತೊಬ್ಬ ರೌಡಿ ಅಂಜನ್‌ಗೌಡ ಅಲಿಯಾಸ್ ಅಂಜಿಯನ್ನು ಛೂಬಿಟ್ಟ. ಅಂಜಿ ಸೇವಾ ಕೇಂದ್ರಕ್ಕೇ ನುಗ್ಗಿ ಮುಖ್ಯಸ್ಥ ಗುರುಮೂರ್ತಿಯ ಹೊಟ್ಟೆಗೆ ಇರಿದ. ಬಿಡಿಸಲು ಬಂದ ವ್ಯವಸ್ಥಾಪಕಿ ಮೀನಾಕ್ಷಿಯ ತಲೆ ಒಡೆದ. ಈ ಬಗ್ಗೆ ರಕ್ತ ಸುರಿಸಿಕೊಂಡು ನಂದಿನಿ ಲೇಔಟ್ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟರೆ ಪೊಲೀಸರು ಗದರಿಸಿ ಓಡಿಸಿಬಿಟ್ಟರು. ಆನಂತರ ರೌಡಿ ದೀಪುನ ಹೆಂಡತಿ, ಮತ್ತೊಬ್ಬ ರೌಡಿ ಆನಂದನ ಅಕ್ಕ ಮುಂತಾದವರೆಲ್ಲ ಸೇರಿಕೊಂಡು ಮತ್ತೆ ಸೇವಾ ಕೇಂದ್ರಕ್ಕೆ ನುಗ್ಗಿ ದಾಂಧಲೆಯೆಬ್ಬಿಸಿದರು.

ಈ ಬಗ್ಗೆಯೂ ನಂದಿನಿ ಲೇಔಟ್ ಠಾಣೆಗೆ ಗರ್ಭಿಣಿ ಹೆಂಗಸರು ಬಂದು ದೂರು ಕೊಟ್ಟರೆ ಪೊಲೀಸರು ಮುಖ್ಯಸ್ಥ ಗುರುಮೂರ್ತಿಯನ್ನೇ ಬಂಧಿಸಿದರು. ಇದಾಗಿ ವಾರಕ್ಕೆ ಅಂಜಿ, ಪ್ರಕಾಶ, ಆನಂದ ಸೇರಿಕೊಂಡು ಮತ್ತೆ ಸೇವಾ ಕೇಂದ್ರಕ್ಕೆ ನುಗ್ಗಿ ಸಿಕ್ಕಸಿಕ್ಕವರನ್ನು ಬಡಿದರು. ಇದೇ ಹೊತ್ತಿಗೆ ವೆಂಕಟೇಶ ತನ್ನ ಬಿಜೆಪಿ ಲೆಟರ್ ಹೆಡ್ ಬಳಸಿ ಇಲ್ಲಿ ಅನೈತಿಕ ಚಟುವಟಿಕೆ ನಡೆಯುತ್ತಿದೆ ಎಂದು ಪಾಲಿಕೆಗೆ ದೂರು ಕೊಟ್ಟ. ಜೊತೆಗೆ ಕಟ್ಟಡದ ನಕ್ಷೆಯೇ ಸರಿ ಇಲ್ಲ ಎಂದು ಮತ್ತೊಂದು ದೂರು ಕೊಟ್ಟ. ರೌಡಿಗಳು, ಪೊಲೀಸರ ಕಾಟ ಸಾಲದೇ ಪಾಲಿಕೆ ಅಧಿಕಾರಿಗಳೂ ಪೀಡಿಸಲಾರಂಭಿಸಿದಾಗ ರೋಸತ್ತ ವ್ಯವಸ್ಥಾಪಕಿ ಮೀನಾಕ್ಷಿ ನೇರವಾಗಿ ಹರೀಶ್ ಕಾಲಿಗೇ ಬಿದ್ದು ಕಾಪಾಡುವಂತೆ ಪ್ರಾರ್ಥಿಸಲು ಹೋದದ್ದು ಮೊನ್ನೆ ಅಂದರೆ ಏಪ್ರಿಲ್ 27 ರ ಬೆಳಿಗ್ಗೆ.

ಪಾಲಿಕೆ ಸದಸ್ಯರ ಅಧಿಕೃತ ವಾರ್ಡ್ ಕಚೇರಿಯಲ್ಲೇ ರೌಡಿ ಪಡೆ ಅಡ್ಡೆ ಹಾಕಿತ್ತಲ್ಲ; ಮೀನಾಕ್ಷಿ ಮತ್ತು ಜೊತೆಗಿದ್ದ ಇಬ್ಬರು ಹುಡುಗರನ್ನು ಕಂಡಿದ್ದೇ ವೆಂಕಟೇಶನ ಗ್ಯಾಂಗ್‌ನ ಪಿತ್ಥ ಕೆರಳಿದೆ. ಇಬ್ಬರೂ ಹುಡುಗರನ್ನು ಕೌನ್ಸಿಲರ್ ಛೇಂಬರಿಗೆ ಎಳೆದೊಯ್ದು ಎರಡು ಗಂಟೆ ಕಾಲ ಕೂಡಿಟ್ಟು ಹಿಂಸಿಸಿದ್ದಾರೆ. ಈ ಬಗ್ಗೆ ಮಹಾಲಕ್ಷ್ಮಿ ಲೇಔಟ್ ಪೊಲೀಸ್ ಠಾಣೆಗೆ ದೂರು ಕೊಟ್ಟರೆ ಉಪಮೇಯರ್ ಹರೀಶ ನೂರೈವತ್ತು ಮಂದಿ ಬಿಜೆಪಿ ಪುಂಡರ ಗ್ಯಾಂಗ್ ಕಟ್ಟಿಕೊಂಡು ಪೊಲೀಸ್ ಠಾಣೆಗೇ ನುಗ್ಗಿ ಸೇವಾ ಕೇಂದ್ರದ ಮುಖ್ಯಸ್ಥರಿಗೆ ಧಮಕಿ ಹಾಕಿದ್ದಾನೆ.


ಪೊಲೀಸರ ಎದುರೇ ಬೆದರಿಕೆ ಹಾಕಿದರೂ ಗರ್ಭಿಣಿಯರ ಕಣ್ಣೀರಿಗೆ ಪೊಲೀಸರು ಸ್ಪಂದಿಸುತ್ತಿಲ್ಲ. ಉಪಮೇಯರ್ ವಿರುದ್ಧ ಪೊಲೀಸ್ ಕಮೀಷನರ್‌ಗೇ ದೂರು ಕೊಟ್ಟರೂ ಪ್ರಯೋಜನವಾಗಿಲ್ಲ. ಬಹುಶಃ ಬಿಹಾರದಲ್ಲೂ ಕೂಡ ಇಂಥ ದೌರ್ಜನ್ಯ ನಡೆದಿರಲಿಕ್ಕಿಲ್ಲ. ನಿರ್ಗತಿಕ ಗರ್ಭಿಣಿಯರ ಗರ್ಭಕ್ಕೇ ಕೈಹಾಕಿದ ಬಿಜೆಪಿ ರಕ್ಕಸರಿಗೆ ಬಹುಶಃ ರಾಮರಾಜ್ಯದ ಅರ್ಥ ಗೊತ್ತಿರಲಿಕ್ಕಿಲ್ಲ. ಯಾವ ರೌಡಿಗಳು, ಹಂತಕರು ತಾನೇ ಈ ಮಟ್ಟದ ಸುಲಿಗೆಗಿಳಿಯಲು ಸಾಧ್ಯ? ಬಿಜೆಪಿ ನಾಶಕ್ಕೆ ಈ ಗರ್ಭಿಣಿಯರ ಕಣ್ಣೀರೇ ಸಾಕಲ್ಲವೇ? ●




ದರೆ ನಾಗಪುರ ವಾರ್ಡಿನ ಕೇಡಿ ಕೌನ್ಸಿಲರ್ ರೀಶ್ ಉಪಮೇಯರ್ ಹುದ್ದೆಗೆ ಬಂದಿದ್ದೇ ಮತ್ತೊಂದು ದುರಂತ. ಶಾರದಮ್ಮನಂಥ ಚೆಟ್ಟಿಟ್ಟನ್ನು ಮೇಯರ್ ಮಾಡಿದ್ದಕ್ಕೆ ಪಾಲದೆಯೆಂಬಂತೆ ಕ್ರಿಮಿನಲ್ ಹರೀಶನಿಗೆ ಉಪಮೇಯರ್‌ಗಿರಿ ಒಲಿದು ಬಂದಿದೆ. ಈತ ಅನಂತ್‌ಕುಮಾರ್ ಚೇಲಾ ಮತ್ತು ಸದ್ಯ ನಗರ ಬಿಜೆಪಿಗೆ ಅಧ್ಯಕ್ಷನಾಗಿರುವ ಸುಬ್ಬಣ್ಣನ ವಸೂಲಿ ದಂಧೆಯ ಪಾಲುದಾರ. ಮೂಲತಃ ತಮಿಳು ನಾಡಿನ ದೆಂಕಣಿಕೋಟೆಯ ಶ್ರೀರಾಮುಲು ಎಂಬ ಖದೀಮ ಕಂಟ್ರಾಕ್ಟರ್‌ನ ಮಗನೇ ಎಸ್.ಹರೀಶ. ಕರ್ಪಿ ಹರೀಶ, ನಾಯಿ ಹರೀಶ ಇತ್ಯಾದಿ ಅಡ್ಡಹೆಸರಲ್ಲೇ ಕುಖ್ಯಾತಿಗೆ ಬಂದ ಹರೀಶ ಶುರುವಿನಲ್ಲಿ ತನ್ನ ತಂದೆ ನಡೆಸುತ್ತಿದ್ದ ಮೀಟರ್ ಬಡ್ಡಿ ದಂಧೆಯನ್ನೇ ಕಸುಬನ್ನಾಗಿಸಿಕೊಂಡ.

ಹರೀಶನ ಕ್ರೌರ್ಯ


ರಾಜಕೀಯವಾಗಿ ಅನಂತ್‌ಕುಮಾರ್ ಅನುಯಾಯಿಯಾದರೂ ಪಡ್ಡಕಸುಬಿನಲ್ಲಿ ಈತ ಬಾಂಬ್ ಮಟ್ಟಣ್ಣನವರ್‌ನ ಚೇಲಾ. ಲೋಕಬಳಿಕೆಯಲ್ಲಿ ಕಟ್ಟಾ ನಾಯ್ಡು ಈತನ ಗುರು. ಮಟ್ಟಣ್ಣನವರ್ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷನಾಗಿದ್ದಾಗ ಈತ ಬೆಂಗಳೂರು ನಗರ ಮೋರ್ಚಾಕ್ಕೆ ಅಧ್ಯಕ್ಷನಾಗಿದ್ದ. ಮಾಜಿ ಮೇಯರ್ ಎಂ.ನಾಗರಾಜ್ ಪಾಲಿಕೆ ಎಲೆಕ್ಷನ್‌ಗೆ ನಿಂತಿದ್ದಾಗ ಗ್ಯಾಂಗ್ ಹಿಡಿದು ಭೂತ್ ಕ್ಯಾಪ್ಚರ್ ಮಾಡಲು ಹೋಗಿ ಸಾರ್ವಜನಿಕರಿಂದ ಒದೆ ತಿಂದ. ನವರಂಗ್ ಸಮೀಪದ ಮಸೀದಿಯೊಂದಕ್ಕೆ ನುಗ್ಗಿ ದಾಂಧಲೆ ಮಾಡಿದ್ದ. 2007ರ ಜೂನ್ 15ರ ರಾತ್ರಿ ತನ್ನ ಹುಟ್ಟುಹಬ್ಬದ ನಿಮಿತ್ತ ಮಹಾಲಕ್ಷ್ಮಿ ಲೇಔಟಿನ ತನ್ನ ಮನೆಯಲ್ಲಿ ಪುಡಿ ರೌಡಿಗಳನ್ನೆಲ್ಲ ಸೇರಿಸಿ ಗುಂಡಿನ ಪಾರ್ಟಿ ಇಟ್ಟ. ನಡುರಾತ್ರಿ ಹೊತ್ತಿಗೆ ಕುಡಿದು ಚಿತ್ತಾಗಿದ್ದ ತನ್ನ ಪೋಲಿ ಪಟಾಲಂ ಅನ್ನು ರಸ್ತೆಗಿಳಿಸಿ ಪಕ್ಕದಲ್ಲೇ ತನ್ನ ಗುಡಿಗೆ ತಾನು ಮಲಗಿದ್ದ ಬೀದಿ ನಾಯಿಯೊಂದರ ಬಾಲಕ್ಕೆ ಪಟಾಕಿ ಸರಕಟ್ಟಿ ಬೆಂಕಿಯಿಟ್ಟ. ಭೀಕರ ಸದ್ದಿಗೆ ನಡುಗಿದ ನಾಯಿ ಘೋರವಾಗಿ ಚೀರಾಡಿ ನೆಲಕ್ಕೆ ಬಿದ್ದು ನರಳಾಡುತ್ತಿದ್ದರೆ ಹರೀಶ ತನ್ನ ಪುಂಡರ ಗ್ಯಾಂಗ್ ಸಮೇತ ಕೇಕೆ ಹಾಕಿ ಚಪ್ಪಾಳಿಸುತ್ತಿದ್ದ.



ಪಾಪದ ಪ್ರಾಣಿಯ ದುರ್ಗತಿ ಕಂಡ ಆಸು ಪಾಸಿನ ಒಂದಿಬ್ಬರು ಮಹಿಳೆಯರು ಧಾವಿಸಿಬಂದು ಹರೀಶನ ಅಟ್ಟಹಾಸವನ್ನು ಪ್ರಶ್ನಿಸಿದರೆ ಕೆರಳಿದ ಹರೀಶ ಅವರ ಮೇಲೆ ತನ್ನ ಪುಂಡ್ ಶಿಷ್ಯರನ್ನು ಛೂಬಿಟ್ಟ. ಮರುದಿನ ಆ ಇಬ್ಬರು ಹೆಂಗಸರ ಮನೆಗೆ ರೌಡಿಗಳನ್ನು ನುಗ್ಗಿಸಿ ಅವರ ಸಾಕುನಾಯಿಗಳನ್ನು ಹೊತ್ತೊಯ್ದಿದ್ದ. ಎರಡು ನಾಯಿಗಳ ಪೈಕಿ ಒಂದನ್ನು ಕಾರು ಹತ್ತಿಸಿ ಕೊಂದು, ಮತ್ತೊಂದನ್ನು ಇನ್ನೆಲ್ಲಿಗೋ ಸಾಗಿಸಿ ನಾಪತ್ತೆ ಮಾಡಿಬಿಟ್ಟ. ಹರೀಶನ ಕ್ರೌರ್ಯದ ವಿರುದ್ಧ ವರದಿ ಮಾಡಲೆಂದು ಹೋಗಿದ್ದ ಪತ್ರಿಕಾ ವರದಿಗಾರರೊಬ್ಬರನ್ನು ತನ್ನ ಚೇಲಾ ಅನಿಲ್ ರಂಗಣ್ಣ ಎಂಬ ಪುಡಿರೌಡಿಯನ್ನು ಬಿಟ್ಟು ಹೊಡೆಸಿದ. ಅವತ್ತು ಹರೀಶನ ಜೊತೆ ಲಾಂಗ್ ಹಿಡಿದು ಪತ್ರಕರ್ತರ ಮೇಲೆ ಹಲ್ಲೆ ನಡೆಸಿದ ಅನಿಲ್ ರಂಗಣ್ಣ ಸದ್ಯ ಕಾಮಾಕ್ಷಿ ಪಾಳ್ಯಕ್ಕೆ ಬಿಜೆಪಿ ಕೌನ್ಸಿಲರ್ ಆಗಿರುವ ರಂಗಣ್ಣನ ಮಗ!



ಇದು ಹರೀಶನ ಕ್ರೌರ್ಯ ಮತ್ತು ಕ್ರಿಮಿನಲ್ ಬುದ್ಧಿಗೆ ಸಣ್ಣ ಸ್ಯಾಂಪಲಷ್ಟೇ. ಮುಂದೆ ವಿಧಾನಸಭೆ ಚುನಾವಣೆ ಬಂದು ಆರ್.ವಿ.ಹರೀಶ್ ಮಹಾಲಕ್ಷ್ಮಿ ಲೇಔಟ್‌ಗೆ ಬಿಜೆಪಿ ಅಭ್ಯರ್ಥಿಯಾದಾಗ ಈ ಹರೀಶ ಪಾರ್ಟಿ ಫಂಡನ್ನೆಲ್ಲ ನುಂಗಿ ಹಾಕಿದ. ಆರ್.ವಿ.ಹರೀಶ್ ಕೇವಲ ಮೂರು ಸಾವಿರದ ಅಂತರದಲ್ಲಿ ಕಾಂಗ್ರೆಸ್‌ನ ನರೇಂದ್ರಬಾಬು ವಿರುದ್ಧ ಸೋತರು. ಮುಂದೊಮ್ಮೆ ತಾನೇ ಮಹಾಲಕ್ಷ್ಮಿ ಲೇಔಟ್‌ಗೆ ಎಮ್ಮೆಲ್ಲೆಯಾಗಬೇಕೆಂಬ ದುರ್ಬುದ್ಧಿ ಯಿಂದ ಪಕ್ಷದ ಟಿಕೆಟ್ ಗಿಟ್ಟಿಸಿದ ಆರ್.ವಿ. ಹರೀಶರನ್ನೇ ಸೋಲಿಸಿದ.



ಪಾಲಿಕೆ ಚುನಾವಣೆಯಲ್ಲಿ ನರೇಂದ್ರಬಾಬು ತಮ್ಮ ರವಿಶಂಕರ್ ವಿರುದ್ಧ ಬಿಜೆಪಿ ಅಭ್ಯರ್ಥಿಯಾದ ಹರೀಶ್ ಕೊನೆಯ ಎರಡು ದಿನ ಕೋಟಿಗಟ್ಟಲೇ ದುಡ್ಡು ಹಂಚಿಸಿ ಎಲ್ಲೆಲ್ಲಿಂದಲೋ ರೌಡಿಗಳನ್ನು ಕರೆಸಿ ಬೋಗಸ್ ಓಟು ಗುದ್ದಿಸಿದ. ಬಾಬು ತಮ್ಮ ರವಿಶಂಕರ್ ಕೇವಲ 300 ಮತಗಳ ಅಂತರದಿಂದ ಸೋತರು. ಕೌನ್ಸಿಲರಾಗಿ ಗೆದ್ದಿದ್ದೇ ಹರೀಶನ ಅಟ್ಟಹಾಸ ಯಾವ ಮಟ್ಟಕ್ಕೇರಿತೆಂದರೆ, ಆತನಕ ಯಾರ್‍ಯಾರು ಪಕ್ಷಕ್ಕಾಗಿ ದುಡಿದು ನಾಯಕರಂತಿದ್ದರೋ ಅಂಥವರನ್ನೆಲ್ಲ ಬದಿಗೊತ್ತಿ ಪುಂಡು ಪೋಕರಿಗಳನ್ನೆಲ್ಲ ತಂದು ಬಿಜೆಪಿ ಪದಾಧಿಕಾರಿಗಳನ್ನಾಗಿ ನೇಮಿಸಿದ.

ರೌಡಿ ಗ್ಯಾಂಗ್ ರೋಲ್‌ಕಾಲ್

ಈ ಪೈಕಿ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಅಧ್ಯಕ್ಷನಾಗಿ ನೇಮಕಗೊಂಡ ವೆಂಕಟಪ್ಪ ಹುಟ್ಟು ರೋಲ್‌ಕಾಲ್ ಗಿರಾಕಿ. ಮಂಡಲ ಕಾರ್ಯದರ್ಶಿಯಾಗಿ ಕುರುಬರಹಳ್ಳಿಯ ಶ್ರೀನಿವಾಸ್ ಎಂಬ ಪುಡಿರೌಡಿಯನ್ನು ನೇಮಿಸಿದ. ಮಾರಪ್ಪನ ಪಾಳ್ಯ ವಾರ್ಡ್‌ಗೆ ಅಧ್ಯಕ್ಷನಾದ ಆಟೋ ವೆಂಕಟೇಶ್ ಉರ್ಫ್ ಮರಾರಿ ವೆಂಕಟೇಶ್ ಹಳೆಯ ಪಾತಕಿ. ಶಂಕರಮಠ ವಾರ್ಡಿಗೂ ಸುಬ್ರಮ್ಹಣಿ ಎಂಬ ಪೋರ್ಕಿಯನ್ನು ಅಧ್ಯಕ್ಷನನ್ನಾಗಿಸಿ ಶಕ್ತಿ ಗಣಪತಿ ನಗರಕ್ಕೆ ಮನೋಹರ್ ಎಂಬ ಮತ್ತೊಬ್ಬ ರೌಡಿಯನ್ನು ನೇಮಿಸಿದ. ಹೀಗೆ ಇಡೀ ಮಹಾಲಕ್ಷ್ಮಿಲೇಔಟ್ ಬಿಜೆಪಿಯನ್ನು ಹರೀಶ ಕುಲಗೆಡಿಸುತ್ತಿದ್ದರೆ ಅದಕ್ಕೆ ಕುಮ್ಮಕ್ಕಾಗಿ ನಿಂತಿದ್ದು ನಗರ ಬಿಜೆಪಿ ಅಧ್ಯಕ್ಷ ಸುಬ್ಬಣ್ಣ.

ಸುಬ್ಬಣ್ಣನಿಗೂ ಹರೀಶನಂಥ ಪಾತಕಿಯೇ ಬೇಕಿತ್ತು. ಹರೀಶನ ಹೆಂಡತಿ ವಿನುತಾಳ ತಂಗಿ ಗಂಡ ರಘುವನ್ನು ಕಾಂಟ್ರಾಕ್ಟ್ ದಂಧೆಗೆ ಇಳಿಸಿ ಆತನಿಗೆ ಮಂತ್ರಾಲಯ ದಲ್ಲಿ ಪ್ರವಾಹ ಸಂತ್ರಸ್ತರ ಮನೆ ನಿರ್ಮಿಸುವ ಹತ್ತು ಕೋಟಿಯ ಗುತ್ತಿಗೆ ಕೊಡಿಸಿದ್ದೂ ಸುಬ್ಬಣ್ಣನೇ. ಹರೀಶ್ ಕೌನ್ಸಿಲರ್ ಆಗಿ ಗೆದ್ದಿದ್ದು ಯಾರಿಗೇನು ಲಾಭವಾಗದೇ ಹೋದರೂ ಷಡ್ಡಕ ರಘು ಮತ್ತು ಗುರು ಸುಬ್ಬಣ್ಣನ ಪಾಲಿಗೆ ಮಾತ್ರ ಬಿಟ್ಟಿ ಕಮಾಯಿಗೆ ದಾರಿಯಾಯಿತು. ಇಡೀ ನಾಗಪುರದ ಡಾಂಬರೀಕರಣಕ್ಕೊಂದು ಒಂದೂವರೆ ಕೋಟಿಯ ಕಾಮಗಾರಿ ಮಂಜೂರಾದರೆ ಹರೀಶ್ ಅದನ್ನು ಗಿಲಿಗಿಲಿ ವೆಂಕಟೇಶನೆಂಬ ಖದೀಮ ಕಂಟ್ರಾಕ್ಟರ್‌ಗೆ ಮಾರಿಕೊಂಡ. ಹೆಸರಿಗಷ್ಟೇ ಒಂದೂವರೆ ಕೋಟಿಯ ಕಾಮಗಾರಿ. ಅರ್ಧಕ್ಕರ್ಧ ಡಾಂಬರನ್ನು ಹಾಕಲಿಲ್ಲ, ಈ ಒಂದೇ ಗೋಲ್‌ಮಾಲ್‌ನಲ್ಲಿ ಹರೀಶ್ 70 ಲಕ್ಷ ಲಪಟಾಯಿಸಿದ ಇದೇ ದುಡ್ಡನ್ನು ಬಳಸಿ ರಾಜಾಜಿನಗರದ 'ಎನ್' ಬ್ಲಾಕ್‌ನಲ್ಲಿ ಕೇಕ್ ಪ್ಯಾಲೇಸ್ ಎದುರು ರಸ್ತೆಯಲ್ಲಿ ಐದಂತಸ್ತಿನ ಬಂಗಲೆಯೆಬ್ಬಿಸಿದ. ಹಕೀಕತ್ತೆಂದರೆ ಈ ಬಂಗಲೆಯೇ ಅನಧಿಕೃತ ಕಟ್ಟಡ. ಮಂಜೂರಾದ ನಕ್ಷೆಯೇ ಒಂದಾದರೆ ಪಾಲಿಕೆಯ ಯಾವ ನಿಯಮವನ್ನೂ ಪಾಲಿಸದೆ ಅನಧಿಕೃತ ಎರಡು ಅಂತಸ್ತುಗಳನ್ನು ಹರೀಶ್ ಉತ್ತರಿಸಿದ. ಈ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ಪಾಲಿಕೆಗೆ ದೂರು ಕೊಟ್ಟರು.

ಯಾರೋ ಜನಸಾಮಾನ್ಯರು ನಕ್ಷೆಗೆ ವ್ಯತಿರಿಕ್ತವಾಗಿ ಸಣ್ಣ ತಪ್ಪೆಸಗಿದ್ದರೂ ಬುಲ್ಡೋಜರ್ ನುಗ್ಗಿಸಿ ಕಟ್ಟಡ ಕೆಡಹುವ ಪಾಲಿಕೆ ಅಧಿಕಾರಿಗಳು ಈತನಕ ಉಪಮೇಯರ್ ಮಹಾಶಯನ ಅನಧಿಕೃತ ಕಟ್ಟಡದತ್ತ ತಲೆಹಾಕಿಲ್ಲ. ಗೆದ್ದ ಆರೇ ತಿಂಗಳಿಗೆ ಗಣೇಶ ಜ್ಯುವೆಲ್ಲರ್ಸ್‌ನವರ ಕಟ್ಟಡಕ್ಕೆ ವಕ್ಕರಿಸಿದ ಹರೀಶ್ 10 ಲಕ್ಷ ಕಿತ್ತ, ನವರಂಗ್ ಸರ್ಕಲ್‌ನ ಕದಂಬ ರೆಸ್ಟೋರೆಂಟ್‌ನ ಬಿಲ್ಡಿಂಗಿಗೂ ಕೈಯಿಟ್ಟು ಮತ್ತೆ 15 ಲಕ್ಷ ಸುಲಿದ. ಇಸ್ಕಾನ್ ಪಕ್ಕದ ಡೆಕ್ಕನ್ ಮ್ಯಾನ್ಸ್‌ನ ಅಪಾರ್ಟ್‌ಮೆಂಟಿಗೂ ವಕ್ಕರಿಸಿ 20 ಲಕ್ಷ ಕಿತ್ತ, ಬರುಬರುತ್ತಾ ಹರೀಶ್ ಮತ್ತಾತನ ಪುಂಡರ ಪಡೆಯ ವಸೂಲಿ ಎಂಥ ಅಸಹ್ಯಕ್ಕೆ ಇಳಿಯಿತೆಂದರೆ ಗರ್ಭಿಣಿ ಹೆಂಗಸರಿಗೆಂದೇ ಸೃಷ್ಟಿ ಚಾರಿಟಬಲ್ ಟ್ರಸ್ಟ್ ನಡೆಸುತ್ತಿದ್ದ ಸೇವಾ ಕೇಂದ್ರಕ್ಕೂ ಕೈಯಿಟ್ಟರು. (ಬಾಕ್ಸ್ ನೋಡಿ) ಸದ್ಯ ಹರೀಶನ ಬಿಜೆಪಿ ಗ್ಯಾಂಗ್ ವಿರುದ್ಧ ಬಾಡಿಗೆ ತಾಯಂದಿರೆಲ್ಲ ಕಂಡಕಂಡ ಪೊಲೀಸರ ಕಾಲಿಗೆ ಬಿದ್ದು ಕಣ್ಣೀರಿಡುತ್ತಿದ್ದರೆ ಗೃಹಮಂತ್ರಿ ಅಶೋಕ್ ಸಾಹೇಬರೇ ಹರೀಶನ ಜೊತೆ ನಿಂತು ಪೋಜು ಕೊಡುತ್ತಿದ್ದಾರೆ.


ಒಂದೆಡೆ ಹೆಬ್ಬೆಟ್ಟು ಮೇಯರ್, ಮತ್ತೊಂದೆಡೆ ಕ್ರಿಮಿನಲ್ ಉಪಮೇಯರ್-ಬೆಂಗಳೂರಿಗೆ ಎಂಥಾ ಗತಿ ಬಂತು?

• ರಾ.ಸೋಮನಾಥ್

ಯಡ್ಡಿ ಬುಡಕ್ಕೆ ಹೆಡೆ ಮಡಗಿದ ಈಶ್ವರ ತಣ್ಣಗಾಗಿದ್ದ್ಯಾಕೆ?

ಮುಖ್ಯಮಂತ್ರಿ ಯಡಿಯೂರಪ್ಪ ಇದುವರೆಗೆ ನಡೆಸಿದ ಅಷ್ಟೂ ಪಾಪದ ಪರಿಣಾಮಗಳನ್ನು ಅರಗಿಸಿಕೊಂಡು ಕುರ್ಚಿಗಂಟಿದ್ದಾರೆ. ಇದು ಯಡ್ಡಿ ಅದೃಷ್ಟ ನೆಟ್ಟಗಿರುವ, ಕರ್ನಾಟಕದ ಜನರ ನಸೀಬು ಕೆಟ್ಟಿರುವ ಸ್ಪಷ್ಟ ಸೂಚನೆ. ಇದಕ್ಕೆ ಪೂರಕವಾಗಿ ಬಿಜೆಪಿಯೊಳಗಿನ ಬಂಡಾಯ, ಯಡ್ಡಿ ವಿರುದ್ಧದ ಬುಸುಗುಡುವಿಕೆಗಳೆಲ್ಲಾ ಪೂರ್ತಿ ಥಂಡಾ ಹೊಡೆದಿವೆ. ರೆಡ್ಡಿ ಪಡೆಯೂ ಯಡ್ಡಿಗೆ ಸಂಪೂರ್ಣ ಶರಣಾಗಿದೆ. ಇದೆಲ್ಲದರ ನಡುವೆಯೇ ಯಡ್ಡಿ ವಿರುದ್ಧ ಹೆನ್ನಾಗರದಂತೆ ಹೆಡೆಯೆತ್ತಿದ್ದ ಈಶ್ವರಪ್ಪ ಕೆರೆ ಹಾವಿಗಿಂತ ಕಡೆಯಾಗಿ ಬಲ ಸೇರಿರುವುದು ಮಾತ್ರ ಆಶ್ಚರ್ಯಕರ ಬೆಳವಣಿಗೆ. ಇದರ ಹಿಂದೆ ಯಡ್ಡಿಯ ಕ್ರಿಮಿನಲ್ ಮೈಂಡು ಕೆಲಸ ಮಾಡಿದ ರೀತಿಯಂತೂ ಬಲು ರೋಚಕವಾಗಿದೆ.

ಪಕ್ಷದೊಳಗೆ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳಿದ್ದರೂ ಎಲ್ಲವನ್ನೂ ಸರಿಪಡಿಸಿ ಒಗ್ಗೂಡಿಸುವ ಕೆಲಸ ಪಕ್ಷದ ಅಧ್ಯಕ್ಷನದ್ದು. ಬಿಜೆಪಿಯ ಮಟ್ಟಿಗೆ ಅಂತಹುದೊಂದು ಜವಾಬ್ದಾರಿ ಈಶ್ವರಪ್ಪನ ಹೆಗಲೇರುತ್ತಲೇ ಯಡ್ಡಿಗೆ ಕೇಡುಗಾಲ ಶುರುವಾಯ್ತು ಅಂದುಕೊಂಡವರಿದ್ದರು. ಲಾಗಾಯ್ತಿನಿಂದಲೂ ಇವರಿಬ್ಬರ ನಡುವಿದ್ದ ಗುದ್ದಾಟದ ಅರಿವಿರುವವರಿಗೆ ಹಾಗನ್ನಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ಇದ್ಯಾವುದನ್ನೂ ತೋರಿಸಿಕೊಳ್ಳದ ಈಶ್ವರಪ್ಪ ಯಡ್ಡಿ ಪರವಿರುವವರಂತೆಯೇ ಬಿಂಬಿಸಿಕೊಳ್ಳಲೆತ್ನಿಸುತ್ತಿದ್ದರು. ಇಂಥಾ ಈಶ್ವರಪ್ಪ ಏಕಾಏಕಿ ಯಡ್ಡಿ ವಿರುದ್ಧ ತಿರುಗಿಬಿದ್ದಾಗ ಈ ಸಾರಿ ಯಡಿಯೂರಪ್ಪ ಬಚಾವಾಗೋದು ಕಷ್ಟ ಅಂತಲೇ ಮಾತುಗಳು ಶುರುವಾಗಿದ್ದವು. ಒಂದಷ್ಟು ದಿನ ಕುತೂಹಲದ ಮೀಟರ್ ಏರಿಸಿದ ಈ ಕದನ ಬಹಿರಂಗ ಸಮಾರಂಭವೊಂದರಲ್ಲಿ ಇಬ್ಬರೂ ಕರಡಿಗಳಂತೆ ತಬ್ಬಿಕೊಂಡು ಹಲ್ಕಿರಿಯುವ ಮೂಲಕ ಸಮಾಪ್ತಿಗೊಂಡಿತ್ತು.



ಹಾಗಾದರೆ ಯಡಿಯೂರಪ್ಪನನ್ನು ಹಲವು ಕಾರಣಗಳಿಗಾಗಿ ವಿರೋಧಿಸುವ ಈಶ್ವರಪ್ಪ ಈ ಪರಿ ಥಂಡಾ ಹೊಡೆಯಲು ಕಾರಣವೇನು? ದೊಡ್ಡಮಟ್ಟದ ಡೀಲುಗಳೇನಾದರೂ ನಡೆಯಿತಾ? ಹೈಕಮಾಂಡ್ ಏನಾದರೂ ಒತ್ತಡ ಹೇರಿತಾ ಮುಂತಾದ ಹಲವಾರು ಪ್ರಶ್ನೆಗಳು ಎದುರಾಗುವುದು ಸಹಜ. ಆದರೆ ಈಶ್ವರಪ್ಪ ಬಾಲಮುದುರಿಕೊಂಡಿರುವುದಕ್ಕೆ ಮೇಲ್ನೋಡ ಯಾವ ವಿಚಾರಗಳೂ ಕಾರಣವಲ್ಲ. ಯಡ್ಡಿ ತಣ್ಣಗೆ ಹಾಕಿದ ಒಂದು ಧಮಕಿ ಹಾಗೂ ಬಿಜೆಪಿಯ ಒಂದು ಪಾಳೆಯ ಚಿಗುರಿಸಿದ ಮಹತ್ವಾಕಾಂಕ್ಷೆಯೇ ಈಶ್ವರಪ್ಪ ಥಂಡಾ ಆಗಲು ಪ್ರಮುಖ ಕಾರಣ!


ಜನಾರ್ದನ ರೆಡ್ಡಿಯಂಥ ಖತರ್‌ನಾಕ್ ಆಸಾಮಿಯನ್ನೇ ಬಡಿದು ಕೂರಿಸಿದ್ದ ಯಡ್ಡಿಗೆ ಈಶ್ವರಪ್ಪನ ಬಂಡಾಯ ಹೊಸಾ ತಲೆನೋವಾಗಿ ಸುತ್ತಿಕೊಂಡದ್ದೇ ಧಮಕಿ ಹಾಕಿ ತೆಪ್ಪಗಾಗಿಸುವ ಸ್ಕೆಚ್ಚು ಹಾಕಿದರು. ಹೋದಬಂದ ಕಡೆಯಲ್ಲೆಲ್ಲಾ ಕುಂಡೆಗೆ ಕಾರೆಮುಳ್ಳು ಚುಚ್ಚಿದವರಂತೆ ಅರಚಾಡುತ್ತಿದ್ದ ಈಶ್ವರನನ್ನು ಕರೆಸಿಕೊಂಡ ಯಡ್ಡಿ 'ಸುಮ್ಮನಾದ್ರೆ ಸರಿ,ಇಲ್ಲದಿದ್ರೆ ಒಂದೇ ಒಂದು ಲಿಂಗಾಯತರ ಓಟು ಬೀಳದಂತೆ ಮಾಡ್ತೀನಿ' ಅಂತೊಂದು ಧಮಕಿ ಬಿಟ್ಟರು. ಇದನ್ನು ಕೇಳುತ್ತಿದ್ದಂತೆಯೇ ಬೆವರಿ ಬೆಂಡಾದ ಈಶ್ವರಪ್ಪನಿಗೆ ಬಂಡಾಯದ ಪಿತ್ಥವೆಲ್ಲ ಜಗ್ಗನೆ ಇಳಿದುಹೋಗಿದೆ. ಇಂಥಾ ಸ್ಥಿತಿಯಲ್ಲಿ ಪ್ಯಾಪ್ಮೋರೆ ಹಾಕಿಕೊಂಡು ವಾಪಾಸಾಗುತ್ತಿದ್ದ ಈಶ್ವರಪ್ಪನನ್ನು ಕೂರಿಸಿಕೊಂಡ ಇನ್ನೊಂದು ಪಡೆ 'ಹೇಗೂ ಪಕ್ಷಕ್ಕಾಗಿ ದುಡಿದಿದ್ದೀರಿ. ಈಗ ಸುಮ್ನೆ ಬಂಡಾಯ ಅಂತೆಲ್ಲ ಮಾಡದೆ ಸುಮ್ಮನಿರಿ. ಯಡಿಯೂರಪ್ಪ ಇಳಿಯೋ ಸಂದರ್ಭ ಬಂದ್ರೆ ನೀವೇ ಸಿಎಂ' ಅಂತ ರೈಲು ಹತ್ತಿಸಿದ್ದಾರೆ. ಯಡ್ಡಿ ಬೆದರಿಕೆ ಹಾಕಿದರೂ ಈಶ್ವರಪ್ಪನ ಮುಖ ಹೊಳೆಯುತ್ತಿರುವುದಕ್ಕೆ ಆ ಆಕಾಂಕ್ಷೆಯೇ ಮೂಲ ಕಾರಣ!

ಅಷ್ಟಕ್ಕೂ ಯಡ್ಡಿ ಲಿಂಗಾಯತರ ಓಟು ಬೀಳದಿರುವಂತೆ ಮಾಡುವ ಧಮಕಿ ಹಾಕಿದ್ದಕ್ಕೆ ಈಶ್ವರಪ್ಪ ಬೆದರಲು ಸ್ಪಷ್ಟ ಕಾರಣಗಳಿವೆ. ಈತ ಇದೀಗ ಸ್ಪರ್ಧಿಸುತ್ತಿರುವ ಕ್ಷೇತ್ರದ ನಾಡಿಮಿಡಿತ ಗಮನಿಸಿದರೆ ಈಶ್ವರಪ್ಪ ಲಿಂಗಾಯತರ ಮತವಿಲ್ಲದೆ ತಿಪ್ಪರಲಾಗ ಹಾಕಿದರೂ ಬಚಾವಾಗುವ ಲಕ್ಷಣಗಳಿಲ್ಲ. ಕುರುಬ ಸಮುದಾಯದ ಈಶ್ವರಪ್ಪ 1989 ರಲ್ಲಿ ಕಾಂಗ್ರೆಸ್‌ನ ಶ್ರೀನಿವಾಸ್‌ನನ್ನು ಮಣಿಸಿ ಗೆದ್ದದ್ದು, 1999 ರಲ್ಲಿ ಗೆದ್ದದ್ದು, 2004 ಗೆದ್ದಿದ್ದೆಲ್ಲಾ ಕುರುಬರ ಮತದ ಬಲ, ಲಿಂಗಾಯತರ ಸಪೋರ್ಟುಗಳ ಮೂಲಕವೇ. ಆಗ ಎಲ್ಲಾ ಸಮುದಾಯಗಳ ಮತಗಳೂ ಹಂಚಿಕೊಂಡಿದ್ದುದರಿಂದ ಗೆಲುವು ಸಲೀಸಾಗಿತ್ತು, ಆದರೆ ಕಳೆದ ಚುನಾವಣೆಯ ಸಂದರ್ಭದಲ್ಲಿ ಈಶ್ವರಪ್ಪನ ಕ್ಷೇತ್ರ ಪುನರ್ವಿಂಗಡಣೆಯ ಹೆಸರಲ್ಲಿ ಗ್ರಾಮೀಣ ಹಾಗೂ ನಗರವೆಂದು ಹಂಚಿಹೋಯ್ತು, ಈಶ್ವರಪ್ಪ ನಗರ ಕ್ಷೇತ್ರಕ್ಕೆ ಕಚ್ಚಿಕೊಂಡರು.

ಈ ನಗರ ಕ್ಷೇತ್ರದಲ್ಲಿ ಬ್ರಾಹ್ಮಣ, ಮುಸ್ಲಿಮರು ಹಾಗೂ ಲಿಂಗಾಯತರ ಪ್ರಾಬಲ್ಯವಿದೆ. ಮುಸ್ಲಿಂ ಸಮುದಾಯ ಕಾಂಗ್ರೆಸ್ ಮುಂತಾದ ಪಕ್ಷಗಳತ್ತ ಒಲವು ತೋರಿದರೂ ಈಶ್ವರಪ್ಪ ಗೆಲುವಿಗೆ ಬ್ರಾಹ್ಮಣ-ಲಿಂಗಾಯತ ಮತಗಳು ಅತ್ಯವಶ್ಯಕ. ಇವೆರಡೂ ಸಮುದಾಯಗಳು ಆರೆಸ್ಸೆಸ್ ಮುಷ್ಠಿಯಲ್ಲಿರುವುದರಿಂದ ಅದೂ ಕೂಡಾ ಯಡ್ಡಿಯ ಇಷಾರೆಯಂತೆ ತಿರುಗಿಕೊಳ್ಳುವ ಸಾಧ್ಯತೆಯಿದೆ. ಒಂದು ವೇಳೆ ಯಡ್ಡಿ ತಿರುಗಿಬಿದ್ದು ಬರೀ ಲಿಂಗಾಯತ ಮತಗಳನ್ನಷ್ಟೇ ಚದುರಿಸಿದರೂ ಈಶ್ವರಪ್ಪ ತಿಪ್ಪರಲಾಗ ಹಾಕಿದರೂ ಗೆಲ್ಲುವುದು ಕಷ್ಟ.

ಒಂದು ವೇಳೆ ಯಡ್ಡಿ ಮೇಲಿನ ದ್ವೇಷಕ್ಕೆ ಈಶ್ವರಪ್ಪ ಬಂಡುಬಿದ್ದು ತಿರುಗಿ ನಿಂತರೆಂದಿಟ್ಟುಕೊಳ್ಳಿ. ಆ ಸಂದರ್ಭದಲ್ಲಿ ಯಡವಟ್ಟಾಗಿ ಈಶ್ವರ ಸೋತರೆ ಆತನ ಸಾಮ್ರಾಜ್ಯವನ್ನು ನಿಭಾಯಿಸುವುದೇ ಕಷ್ಟದಾಯವಾಗುತ್ತದೆ. ಇದೀಗ ಲೂಟಿ ಮಾಡಿಮಾಡಿ ಈಶ್ವರ-ಯಡ್ಡಿ ಅರ್ಧರ್ಧ ಶಿವಮೊಗ್ಗವನ್ನು ಹಂಚಿಕೊಂಡಿದ್ದಾರೆ. ಇದರಲ್ಲಿ ಯಡ್ಡಿಯ ಕೈ ಕೊಂಚ ಮೇಲಿದೆ. ಇಂಥಾ ಸಂದರ್ಭದಲ್ಲಿ ಈಶ್ವರಪ್ಪನೇನಾದರೂ ಸೋತರೆ-ಸಾಮ್ರಾಜ್ಯದ ಸಮೇತ ಯಡ್ಡಿಗೆ ಶರಣಾಗಬೇಕಾದ ಸಂದರ್ಭಗಳೂ ಸೃಷ್ಟಿಯಾಗಬಹುದು.

ಇಂಥ ಹತ್ತಾರು ಸಂಭಾವ್ಯ ಅನಾಹುತಗಳನ್ನು ನೆನೆದು ಬೆವರಿದ ಈಶ್ವರಪ್ಪ ಯಡ್ಡಿಗೆ ಶರಣಾದದ್ದು, ತಬ್ಬಿಕೊಂಡು ಕೊಂಡಾಡಿದ್ದು ಅಸಹ್ಯಕರ ಸತ್ಯ. ಇದು ಹೆನ್ನಾಗರನಾಗಿ ಯಡ್ಡಿಗೆ ಅಟಕಾಯಿಸಿಕೊಂಡ ಯಡ್ಡಿ ಕೆರೆ ಹಾವಿನಂತಾದುದರ ಹಿಂದಿನ ಅಸಲೀಯತ್ತು! •




ಮೈಸೂರು ಸಚಿವ ರಾಮದಾಸ್ ಭೂ ಅವ್ಯವಹಾರಕ್ಕೆ ವಿನಿವಿಂಕ್ ಶಾಸ್ತ್ರಿ ದುಡ್ಡು?

ಸಚಿವ ರಾಮದಾಸ್‌ನ ಭೂ ಅವ್ಯವಹಾರದ ಬಗ್ಗೆ ಮತ್ತೊಂದು ಆಘಾತಕಾರಿ ವಿಚಾರ ಹೊರಬಂದಿದೆ. ಅದು ಲಕ್ಷಾಂತರ ಜನರ ಹಣವನ್ನು ಡಬ್ಬಲ್ ಮಾಡುತ್ತೇನೆಂದು ಲಪಟಾಯಿಸಿದ ಬ್ಲೇಡ್ ಕಂಪನಿ ವಿನಿವಿಂಕ್‌ನ ಠೇವಣಿಯ ಹಣದ ರಖಮು. ಖದೀಮ ಶಾಸ್ತ್ರಿ ಲಪಟಾಯಿಸಿದ ಹಣವನ್ನು ರಾಮದಾಸನ ಮೂಲಕ ಮೈಸೂರಿನಲ್ಲಿ ನೂರಾರು ದಲಿತರ, ರೈತರ ಭೂಮಿ ಖರೀದಿಗೆ ಬಳಸಿರುವ ಅಂಶ!

ಕರ್ನಾಟಕದಲ್ಲಿ ಸಾವಿರಾರು ಜನರಿಂದ ಕೋಟ್ಯಾಂತರ ರೂ.ಗಳ ಠೇವಣಿ ಪಡೆದು, ಕೊನೆಗೆ ಠೇವಣಿದಾರರಿಗೆ ರಾತ್ರೋರಾತ್ರಿ ಕೈ ಎತ್ತಿದ ವಿನಿವಿಂಕ್ ಶ್ರೀನಿವಾಸ ಶಾಸ್ತ್ರಿ ಠೇವಣಿದಾರರ ಕೋಟ್ಯಾಂತರ ಹಣವನ್ನ ಮೈಸೂರಿನಲ್ಲಿ ಭೂಮಿಯ ಮೇಲೆ ಹೂಡಿದ್ದಾನೆ. ಅದು ಸಚಿವ ರಾಮದಾಸನ ಮೂಲಕ. ಶಾಸ್ತ್ರಿ ಜನರಿಗೆ ನಿಮ್ಮ ಹಣವನ್ನ ಕೆಲವೇ ವರ್ಷಗಳಲ್ಲಿ ಡಬ್ಬಲ್ ಆಗುತ್ತದೆಂಬ ಬಂಡಲ್ ಬಿಡುತ್ತಲೇ ವಿನಿವಿಂಕ್ ಎಂಬ ಬ್ಲೇಡ್ ಕಂಪನಿ ಸ್ಥಾಪಿಸಿ ಮುಂಡಾಮೋಚಿದ ಕತೆ ಕರ್ನಾಟಕದ ಜನರು ಮರೆತಿಲ್ಲ, ಅಂತಹ ಶಾಸ್ತ್ರಿಯ ಕಂಪನಿಯ ಉದ್ಘಾಟನೆ ಮಾಡಿದ್ದೇ ಆಗಿನ ಕೇಂದ್ರ ಸಚಿವ ಅನಂತ್‌ಕುಮಾರ್. ಮೈಸೂರಿನಲ್ಲಿ ಶಾಸ್ತ್ರಿ ಜೊತೆ ಡೀಲು ಕುದುರಿಸಿದ ಅನಂತ ಕುಮಾರ್ ಶಿಷ್ಯ ರಾಮದಾಸ್ ಮೈಸೂರಿನ ಸುತ್ತಾ ಮುತ್ತಾ ಭೂಮಿಯ ರೇಟು ಕಡಿಮೆ ಇದೆ, ಮುಂದಿನ ದಿನಗಳಲ್ಲಿ ಅದು ಹತ್ತಿಪ್ಪತ್ತು ಪಟ್ಟು ಭೂಮ್ ಆಗುತ್ತದೆ ಎಂದು ಶಾಸ್ತ್ರಿಯ ತಲೆ ಸವರಿ ಕೋಟಿಗಟ್ಟಲೆ ಹಣ ಕಿತ್ತಿದ್ದಾನೆ. ಇದು ಖದೀಮ ಶಾಸ್ತ್ರೀಗೂ ಸರಿ ಎನಿಸಿ ತಾನು ಜನರಿಂದ ಪಡೆದಿದ್ದ ಹಣವನ್ನ ನೀಡಿದ್ದಾನೆ. ಇದನ್ನ ಪಡೆದ ರಾಮದಾಸ್ ಬೋಗಾದಿ, ಹುಯಿಲಾಳು ಮತ್ತು ಶ್ರೀರಾಮಪುರಗಳಲ್ಲಿನ ರೈತರಿಗೆ ಮತ್ತು ದಲಿತರಿಗೆ ಚಿಲ್ಲರೆ ಹಣ ನೀಡಿ ಜಿಪಿಎ ಮಾಡಿಸಿಕೊಂಡಿದ್ದ. ನಂತರ ಶಾಸ್ತ್ರಿ 2005ರಲ್ಲಿ ಜೈಲು ಸೇರಿ ಸಿಓಡಿ ತನಿಖೆಯನ್ನೂ ಸಹ ಎದುರಿಸಬೇಕಾಯಿತು.



ಈ ಸಂದರ್ಭದಲ್ಲಿ ಮೈಸೂರಿನಲ್ಲಿ ಹೆಚ್ಚು ಠೇವಣಿದಾರರಿದ್ದರಿಂದ ಶಾಸ್ತ್ರಿಯ ಮೇಲೆ ಕೇಸುಗಳು ದಾಖಲಿಸಲು ಸಿದ್ದರಾಗುತ್ತಿದ್ದಂತೆಯೇ ಕೇಸುಗಳು ಬೀಳದಂತೆ ದಿಕ್ಕುತಪ್ಪಿಸಿದ್ದು ಇದೇ ರಾಮದಾಸ್. ಇದಕ್ಕೆ ಕಿರಣ್ ಎಂಬ ತನ್ನ ಚೇಲಾನೊಬ್ಬನ ಮೂಲಕ ರಾಮದಾಸ್ ಮಾಡಿದ ನಾಟಕ ಒಂದೆರಡಲ್ಲ, ಆತ ಈ ಮೂಲಕ ತನಗೆ ಭೂಮಿಯ ಮೇಲೆ ಬಂಡವಾಳ ಹೂಡಲು ದುಡ್ಡುಕೊಟ್ಟ ಶಾಸ್ತ್ರಿಯ ಋಣ ತೀರಿಸಿದ್ದ.



ಈ ವೇಳೆಯಲ್ಲಿ ರಾಮದಾಸ್ ಮತ್ತು ಚೇಲಾ ಕಿರಣ್ ಸೇರಿಕೊಂಡು ಮೈಸೂರಿನ ವಿನಿವಿಂಕ್ ಠೇವಣಿದಾರರಿಗೆ ಕೊಟ್ಟ ಕಿರುಕುಳ ಅಷ್ಟಿಷ್ಟಲ್ಲ. ಆ ದಾಖಲೆ ತನ್ನಿ, ಈ ರಶೀದಿ ತನ್ನಿ ಅಂತೆಲ್ಲಾ ಠೇವಣಿದಾರರು ಹೈರಾಣಾಗುವಂತೆ ಮಾಡಿಬಿಟ್ಟರು. ಇದರಲ್ಲಿ ಹಣ ಡಬ್ಬಲ್ ಆಗುವ ಆಸೆಯ ಬೆನ್ನೇರಿದ ಜನರು ಸಾಲಸೋಲ ಮಾಡಿ, ಚಿನ್ನ, ಒಡವೆಗಳನ್ನ ಗಿರವಿಯಿಟ್ಟು ಕಟ್ಟಿದ ಹಣವನ್ನ ಒಂದು ಕಡೆ ಶಾಸ್ತ್ರಿ ಧೋಖಾ ಮಾಡಿದ್ದರೆ, ಮತ್ತೊಂದು ಕಡೆ ನೊಂದ ಠೇವಣಿದಾರರಿಗೆ ಹಣ ಕೊಡಿಸುತ್ತೇನೆಂಬ ನಾಟಕವಾಡಿದ ರಾಮದಾಸ್ ಮತ್ತು ಪಟಾಲಂ ಮಹಾ ದ್ರೋಹ ಮಾಡಿತ್ತು. ಇದರಲ್ಲಿ ನೊಂದ ಬಹಳಷ್ಟು ಜನ ರಾಮದಾಸ್ ಮತ್ತು ಚೇಲಾ ಕಿರಣ್‌ಗೆ ಹಿಡಿಶಾಪ ಹಾಕುತ್ತಿದ್ದಾರೆ. ಇದರಲ್ಲಿ ಶಾಸ್ತ್ರಿಯ ಕೋಟ್ಯಾಂತರ ರೂಗಳನ್ನ ತಿಂದ ರಾಮದಾಸ್ ಅತ್ತ ಶಾಸ್ತ್ರಿಗೂ ಮೋಸ ಮಾಡಿದ, ಇತ್ತ ಮೋಸ ಹೋಗಿದ್ದ ಜನರಿಗೆ ಮತ್ತೊಂದು ರೌಂಡು ನಾಮ ತೀಡಿದ್ದ. ಈ ಬಗ್ಗೆ ಸರಿಯಾಗಿ ತನಿಖೆ ನಡೆದರೆ ರಾಮದಾಸ್ ಶಾಸ್ತ್ರಿಯೊಂದಿಗೆ ಭಜನೆ ನಡೆಸಬೇಕಾಗುವುದು ನಿಶ್ಚಿತ.


ಆಶ್ರಯದಲ್ಲೂ ಅವ್ಯವಹಾರ!


ಸಚಿವ ರಾಮದಾಸ್ ಎಂತಹ ಗೋಲ್‌ಮಾಲ್ ಗಿರಾಕಿ ಎಂಬುದಕ್ಕೆ ಇಲ್ಲೊಂದು ಸಣ್ಣ ಉದಾಹರಣೆಯಿದೆ. ಕೆಆರ್ ಕ್ಷೇತ್ರದಿಂದ ಮೊದಲ ಬಾರಿಗೆ ಶಾಸಕನಾದ ರಾಮದಾಸ್ ಆಶ್ರಯ ಸಮಿತಿಗೆ ಅಧ್ಯಕ್ಷನೂ ಆಗುತ್ತಾನೆ. ಆಗ ಮೈಸೂರು ಮಹಾನಗರಪಾಲಿಕೆಯಿಂದ ನಗರದ ಬಡವರಿಗೆ ಅತೀ ಕಡಿಮೆ ಬೆಲೆಯಲ್ಲಿ ನಗರದಲ್ಲಿ 15 ಸಾವಿರ ರೂಗಳಿಗೆ ಪುಟ್ಟ ಮನೆ ನಿರ್ಮಿಸಿಕೊಡುವ ಪ್ರಾಜೆಕ್ಟ್ ಒಂದು ಶುರುವಾಯಿತು. ಇಷ್ಟರಲ್ಲಾಗಲೇ 'ಭೂತಾಯಿಯ ಮಗ'ನಾಗಿದ್ದ ರಾಮದಾಸ್ ಇದೀ ಪ್ರಾಜೆಕ್ಟ್ ತನ್ನ ತಿಜೋರಿ ತುಂಬುವ ಪ್ರಾಜೆಕ್ಟನ್ನಾಗಿ ಮಾಡಿಕೊಂಡು ಈ ಆಶ್ರಯ ಪ್ರಾಜೆಕ್ಟ್ ಒಂದರಲ್ಲೇ ಕೋಟಿಗಟ್ಟಲೆ ಹಣ ಮಾಡಿದ.



ಬಡವರಿಗೆ ಆಶ್ರಯ ಯೋಜನೆಯಿಂದ ಮನೆಗಳನ್ನ ಕಟ್ಟಲು ಜಾಗಬೇಕಾಗಿದ್ದರಿಂದ ಅದನ್ನ ಖಾಸಗಿಯವರಿಂದ ಖರೀದಿಸಬೇಕಿತ್ತು. ಇದರ ವಾಸನೆ ಹಿಡಿದ ರಾಮದಾಸ್ ತನ್ನ ತಮ್ಮ ಶ್ರೀಕಾಂತನ ಮೂಲಕ ಮೈಸೂರಿನಿಂದ 15 ಕಿ.ಮಿ ದೂರವಿರುವ ಗೊರೂರು ಕಡೆ ಕಡಿಮೆ ಬೆಲೆಗೆ ಸಿಗುತ್ತಿದ್ದ ಭೂಮಿಯನ್ನ ಸರ್ಕಾರ ಕಡಿಮೆ ಬೆಲೆಗೆ ವಶಪಡಿಸಿಕೊಳ್ಳುತ್ತದೆಂದು ಸುಳ್ಳು ಹೇಳಿ ಮತ್ತು ಕೆಲವರನ್ನ ಬೆದರಿಸಿ ಎಕರೆಗೆ ಕೆಲವೇ ಸಾವಿರ ರೂ.ಗಳನ್ನ ನೀಡಿ ನೂರಾರು ಎಕರೆಯನ್ನ ಜಿಪಿಎ ಮಾಡಿಸಿಕೊಂಡಿದ್ದ. ಅಂತ ಜಮೀನುಗಳನ್ನು ಕೆಲವೇ ತಿಂಗಳಿಗೆ ಪಾಲಿಕೆಗೆ ಮಾರಾಟ ಮಾಡಿದ ರಾಮದಾಸ್ ಸಹೋದರರು ಕೋಟಿಗಟ್ಟಲೇ ಹಣ ಮಾಡಿದರು. ಈ ಬಗ್ಗೆ ಆಯುಕ್ತ ರಾಯ್ಕರ್‌ಗೆ ಮಾಹಿತಿ ಹಕ್ಕಿನಡಿ ಸಮಗ್ರ ಮಾಹಿತಿ ಕೇಳಿದರೆ ಅದು ಇದು ಸಬೂಬು ಹೇಳಿ ಮಾಹಿತಿ ನೀಡದೆ ನಿರಾಕರಿಸಲಾಯಿತು. ಈ ಆಶ್ರಯ ಬಡಾವಣೆಯಲ್ಲಿ ಬಡವರಿಗೆ ಸಿಗಬೇಕಾಗಿದ್ದ ಮನೆಗಳು ಮೈಸೂರಿನಿಂದ ಬಹಳ ದೂರವಿರುವುದರಿಂದ ಇಂದು ಇಲಿ, ಹೆಗ್ಗಣ, ಕಾಡುಪ್ರಾಣಿಗಳ ವಾಸಕ್ಕೆ ಅನುಕೂಲವಾಗಿ ನಿಜವಾದ ಮೈಸೂರಿನ ಬಡವರಿಗೆ ಸಿಗದಂತೆ ದ್ರೋಹಮಾಡಲಾಗಿದೆ!








ರಾಮದಾಸ್ ಶಿಷ್ಯರ ಹಾವಳಿ

ಮೈಸೂರು ಸುತ್ತಾ ಮುತ್ತಾ ರಾಮದಾಸ್ ಮತ್ತು ಶ್ರೀಕಾಂತ್ ತಮ್ಮ ಭೂ ಅವ್ಯವಹಾರಗಳಿಗೆ ಬಹಳಷ್ಟು ಜನರನ್ನ ಬೆಳೆಸಿದ್ದಾರೆ. ಅಂತವರಲ್ಲಿ ಪಾಲಿಕೆ ಸದಸ್ಯರಾದ ರಾಮ್‌ಪ್ರಸಾದ್ ಮತ್ತು ಪಾರ್ಥಸಾರಥಿ ಹಾಗೂ ವೀರೇಶ್, ಶಿವಶಂಕರ್, ಮಹೇಶ್, ಅರುಣ್ ಕುಮಾರ್ ಎಂಬ ನೆಲಗಳ್ಳರ ಹಾವಳಿ ಮೈಸೂರಿನ ಸುತ್ತಾ ಮಿತಿಮೀರಿವೆ.

ಪಾಲಿಕೆ ಸದಸ್ಯ ರಾಮ್‌ಪ್ರಸಾದ್ ರಾಮದಾಸ್‌ನ ಪಕ್ಕಾ ಚೇಲಾ. ಜೆಪಿನಗರ, ರಮಾಬಾಯಿ ನಗರ ಸುತ್ತಲೇ ಈತನ ಅವ್ಯವಹಾರ ಅಪರಿಮಿತ. ಆಶ್ರಯ ಹಗರಣದಲ್ಲಿ ಈತನದ್ದೂ ಪಾಲಿದೆ. ಒಂದೇ ನಿವೇಶನವನ್ನ ಹಲವರಿಗೆ ಮಾರಾಟ ಮಾಡುವ ಜಾತಿಯವನು. ಈತ ಅಭ್ಯುದಯ ಗೃಹನಿರ್ಮಾಣ ಸಹಕಾರ ಸಂಘದ ಹೆಸರಿನಲ್ಲಿ ಅವ್ಯವಹಾರ ನಡೆಸಿ ಹಲ ರೈತರಿಗೂ ಮತ್ತು ನಿವೇಶನ ಖರೀದಿದಾರರಿಗೂ ಟೋಪಿಹಾಕಿದ್ದಾನೆ.

ಪಾರ್ಥಸಾರಥಿಯೂ ಸಹ ಪಾಲಿಕೆ ಸದಸ್ಯ. 15 ವರ್ಷಗಳ ಹಿಂದೆ ಏನೇನೂ ಇಲ್ಲದ ಬಿಕಾರಿ ಈಗ ಕೋಟಿಕುಳ. ಈತ ತನ್ನ ಅಧಿಕಾರ ಮತ್ತು ರಾಮದಾಸ್ ಹೆಸರೇಳಿಕೊಂಡು ನಗರ ಪಾಲಿಕೆಯ ಆಸ್ತಿಗಳಿಗೆ ನಕಲಿ ದಾಖಲೆ ಸೃಷ್ಟಿಸಿ ಕನ್ನ ಕೊರೆಯುವ ಆಸಾಮಿ. ಈತನ ಬಗ್ಗೆ ಪಾಲಿಕೆಯಿಂದಲೇ ತನಿಖೆ ನಡೆದರೆ ಕೋಟಿಗಟ್ಟಲೆ ಬೆಲೆಬಾಳುವ ಹತ್ತಾರು ನಿವೇಶನಗಳನ್ನ ತನ್ನದಾಗಿಸಿಕೊಂಡಿರುವ ಹಗರಣ ಬೆಳಕಿಗೆ ಬರುತ್ತದೆ.

ಅರುಣ್‌ಕುಮಾರ್, ಮಹೇಶ್, ವೀರೇಶ್ ಮತ್ತು ಶಿವಶಂಕರ್ ಈ ನಾಲ್ವರು ಸರ್ಕಾರಿ ನೌಕರರು. ಆದರೆ ಸರ್ಕಾರದ ಕೆಲಸ ಮಾಡಿದ ಅನುಭವಕ್ಕಿಂತ ಭೂಗಳ್ಳತನದಲ್ಲಿ ಭಾರೀ ಅನುಭವಿಗಳು. ಸಚಿವ ರಾಮದಾಸ್ ಮತ್ತು ವಿಧಾನಪರಿಷತ್ ಸದಸ್ಯ ಗೋ ಮಧುಸೂದನರಿಗೆ ನಿಗದಿತ ಕಪ್ಪ ಸಲ್ಲಿಸಿ ತಮ್ಮ ಅವ್ಯವಹಾರ ಮುಂದುವರೆಸಿರುವ ಇವರು



ರಾಮದಾಸ್ ಅವಿವಾಹಿತ ಆದರೆ ಬ್ರಹ್ಮಚಾರಿಯಲ್ಲ!

“ಐವತ್ತೆರಡು ಹರೆಯದ ರಾಮದಾಸ್ ಅವಿವಾಹಿತ, ಆದರೆ ಬ್ರಹ್ಮಚಾರಿಯಲ್ಲ!” ಎಂದು ಮೈಸೂರಿನ ಹಲವಾರು ಬಡಾವಣೆಗಳು ಪಿಸುಗುಡುತ್ತಿವೆ. ಅಷ್ಟೇ ಅಲ್ಲ, ಈತ ಬಿಜೆಪಿ ಎಂಬ ಹಿಂದೂ ಮೂಲಭೂತವಾದಿ ಪಕ್ಷದ ನಾಯಕನಾಗಿದ್ದರೂ ಮೂಗುಬೊಟ್ಟು ವಿಚಾರದಲ್ಲಿ ಅಪ್ಪಟ ಸೆಕ್ಯೂಲರ್‌ವಾದಿ ಎಂಬ ಪುಕಾರೂ ಇದೆ!!

ಈತ ಮೊದಲ ಬಾರಿಗೆ ಎಮ್ಮೆಲ್ಲೆಯಾದಾಗ ಕೆಎಸ್‌ಆರ್‌ಟಿಸಿ ಶೂದ್ರ ನೌಕರರೊಬ್ಬರ ಪತ್ನಿಯ ಪರಿಚಯವಾಯಿತಂತೆ. ಈಗ ಆ ಕೆಎಸ್‌ಆರ್‌ಟಿಸಿ ನೌಕರ ದೂರದೂರಿನಲ್ಲಿ ಸರ್ಕಾರಿ ಸೇವೆ ಮಾಡುತ್ತಿದ್ದರೆ ಈ ರಾಮದಾಸ್ ಮೈಸೂರಿನ ಸಿದ್ದಾರ್ಥ ನಗರದಲ್ಲಿ ಆ ನೌಕರರ ಪತ್ನಿಯ ಸೇವೆ ಮಾಡುತ್ತಿದ್ದಾರೆಂಬ ರೂಮರ್ ಇದೆ.

ಎಷ್ಟೇ ಆದರೂ ಜಾತಿ ಪ್ರೇಮ ಬಿಟ್ಟುಕೊಡುವುದಕ್ಕಾಗುತ್ತದೆಯೇ? ಆ ಕಾರಣಕ್ಕೇ ಜಯನಗರದಲ್ಲಿ ಬ್ರಾಹ್ಮಣ ಶಿಕ್ಷಕಿಯೊಬ್ಬರಿಗೂ ಮನೆ ಮಾಡಿಕೊಟ್ಟಿದ್ದಾರಂತೆ. ಗಂಡನನ್ನು ತೊರೆದಿರುವ ಈಕೆ ಈಗ ರಾಮನ ದಾಸಿ ಆಗಿದ್ದಾಳಂತೆ. ಹಾಗೆಯೇ ವಿದ್ಯಾರಣ್ಯ ಪುರಂನಲ್ಲಿ ಲಿಂಗಾಯತ ಸಖಿಯೊಬ್ಬಳಿಗೆ ರಾಮದಾಸ್ ಮನೆ ಮಾಡಿಕೊಟ್ಟಿದ್ದಾರಂತೆ. ಇಷ್ಟು ಸಾಲದೆಂಬಂತೆ ತಾನು ಈ ವಿಷಯದಲ್ಲಾದರೂ ಪೂರಾ ಸೆಕ್ಯುಲರ್ ಆಗಿರಬೇಕೆಂದು ಮುಸ್ಲಿಮ್ ಮಹಿಳೆಯೊಬ್ಬರ ಜೊತೆಗೂ ಸಂಬಂಧ ಬೆಳೆಸಿಕೊಂಡಿದ್ದಾರಂತೆ.

ಅವಿವಾಹಿತ ರಾಮದಾಸ್‌ನ ಈ ಎಲ್ಲಾ ಸಂಬಂಧಗಳ ಬಗ್ಗೆ ಆರ್‌ಎಸ್‌ಎಸ್‌ನ ಕರ್ಮಠರಿಗೂ ಗೊತ್ತಾಗಿದ್ದು ಈ ಕುರಿತು ಕೆಲವು ಬಾರಿ ಪಂಚಾಯಿತಿಗಳೂ ಆಗಿವೆಯಂತೆ. “ಮುಂದೆ ತಿದ್ದಿಕೊಳ್ಳುತ್ತಾನೆ” ಎಂದುಕೊಂಡು ಚೆಡ್ಡಿ ನಾಯಕರೆಲ್ಲ ಸುಮ್ಮನಾಗಿದ್ದಾರಂತೆ.



ಆದರಲ್ಲೇನು ಹೊಸದಿಲ್ಲ ಬಿಡಿ. ಇಡೀ ಬಿಜೆಪಿ ನಾಯಕರ ಪುರಾಣವೇ ಅದಾಗಿರುವಾಗ, 'ಹಿಂದೂ' ಪುರಾಣಗಳಲ್ಲೂ ಇಂತಹ ರಾಸಲೀಲೆಗಳು ನೂರಾರಿರುವಾಗ ಇದು ಹೇಗೆ ಹೊಸದಾಗುತ್ತದೆ?!

ಕೇವಲ 20 ವರ್ಷಗಳ ಹಿಂದೆ 500 ರೂ. ಬಾಡಿಗೆ ಮನೆಯಲ್ಲಿದ್ದ ಬ್ರಹ್ಮಚಾರಿ ರಾಮದಾಸ್ ಈಗ 20 ಕೋಟಿ ಬೆಲೆಬಾಳುವ ಮನೆ ಕಟ್ಟಿಸಿದ್ದಾನೆ. ಗೋಕುಲಂ 3ನೇ ಹಂತದ ಕಾಂಟೂರ್ ರಸ್ತೆಯಲ್ಲಿರುವ ಈ ಮನೆಯ ನಂ. 434, ಮನೆಯ ಹೆಸರು ನಾದ ಬ್ರಹ್ಮ. ಇಂತಹ ಭಾರೀ ದೊಡ್ಡ ಬಂಗಲೆಗೆ ಹಣ ಎಲ್ಲಿಂದ ಬಂತು ಎಂದು ಕೇಳುವ ಅಗತ್ಯವೇನೂ ಇಲ್ಲ ಅಲ್ಲವೇ?



ಏರಾರು ಕೋಟಿಗಳ ಒಡೆಯರಾಗುವ ಹನಲ್ಲಿದ್ದಾರೆ. ಕನ್ನಡ ಸಂಘದ ಹೆಸರಿನಲ್ಲಿ ಹಣ ಡುವ ವಿದ್ಯೆಯನ್ನ ಕರಗತ ಮಾಡಿಕೊಂಡ ರು ಬರಬರುತ್ತಾ ಭೂ ಅವ್ಯವಹಾರಕ್ಕೂ ಮಿಟ್ಟಿದ್ದಾರೆ. ಇವರ ಭೂದಾಹಕ್ಕೆ ಯಾದವರಲ್ಲಿ ಅತೀ ಹೆಚ್ಚಿನವರು ದಲಿತ ತ್ತು ಹಿಂದುಳಿದ ರೈತರು.

ಇವರು ಮೈಸೂರಿನ ಕಸಬಾ ಹೋಬಳಿಯ ಚೆ ಗ್ರಾಮ ರಿಂಗ್‌ರೋಡ್‌ನ ಸುತ್ತ ಸುಮಾರು ನ್ನೂರು ಎಕರೆಗೂ ಹೆಚ್ಚು ಭೂಮಿಯನ್ನ ದುಳಿದ ಮತ್ತು ದಲಿತ ರೈತರಿಂದ ಕಡಿಮೆ ಕ್ಕೆ ಪಡೆದಿದ್ದಾರೆ. ಪ್ರಭಾವಿ ರಾಜಕಾರಣಿಗಳಾದ ಮದಾಸ್ ಮತ್ತು ಮಧುಸೂದನ್ ಹೆಸರು ಹಿ ಕೆಲ ರೈತರಿಗೆ ಬೆದರಿಕೆ ಹಾಕಿ ಭೂಮಿ ಳಿಸಿದ್ದಾರೆ. ಇದೇ ಅಂಚೆ ಗ್ರಾಮದ ಸಿದ್ದಯ್ಯ ಬು ದಲಿತ ಕುಡುಕನಾಗಿದ್ದರಿಂದ ಆತ ಕುಡಿದ ದರ್ಭದಲ್ಲಿ ಕಡಿಮೆ ರೇಟಿಗೆ ಜಿಪಿಎ ಪತ್ರಕ್ಕೆ ಮಾಡಿಸಿಕೊಂಡು ಸರ್ವೇ ನಂ 174, 176, 3 ಸೇರಿದಂತೆ 20 ಎಕರೆ ಜಮೀನನ್ನ ಳಿಸಿದ್ದಾರೆ. ವಾಸ್ತವದಲ್ಲಿ ಸಿದ್ದಯ್ಯ ಈ ಟುಂಬದ ಒಬ್ಬ ವ್ಯಕ್ತಿಯಷ್ಟೆ. ಆದರೆ ಈ ಮಿಯ ಮಾಲೀಕತ್ವ ಇದೇ ಕುಟುಂಬದ 20 ಸ್ಯರಿಗೆ ಸೇರಬೇಕು. ಈ ಮೋಸದ ಎಯನ್ನ ಮನಗಂಡ ಯುವ ಮುಖಂಡ ಯ್ಯ ಮತ್ತಿತರರು ಈ ಭೂಗಳ್ಳರು ಮತ್ತು ರಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಹೋರಾಟಕ್ಕಿಳಿದಿದ್ದಾರೆ.

ಒಂದು ಅಂದಾಜಿನ ಪ್ರಕಾರ ಮೈಸೂರಿನ 16 ಕಿ.ಮಿ.ನಲ್ಲಿ ಸುಮಾರು 56 ಸಾವಿರ ರೆ ದಲಿತ ಹಿಂದುಳಿದ ವರ್ಗದ ರೈತರ ಮಿ, ದರಖಾಸ್ತು, ಕಂದಾಯ ಭೂಮಿಯನ್ನ ಳಿಸಿ ಪ್ರಭಾವಿ, ಮರಿ ಭೂಗಳ್ಳರು ಟಿಸುತ್ತಿದ್ದಾರೆ. ಇದರಲ್ಲಿ ಸಚಿವ ರಾಮದಾಸ್ ತ್ತು ಶ್ರೀಕಾಂತ್ ಕಂಪನಿಯದ್ದು ಸಿಂಹಪಾಲು.


ರಳು ಮಾಫಿಯಾಕ್ಕೂ ಬಾಯಿ!

ರಾಮದಾಸ್ ವೈದ್ಯಕೀಯ ಸಚಿವನಾದ ಮೇಲೆ ದ್ಯಕೀಯ ಇಲಾಖೆಯ ಕೆಲಸ ಮಾಡಿದ್ದು ಮೆ. ಆದರೆ ಈತ ಗಣಿ ಮತ್ತು ಭೂ ವಿಜ್ಞಾನ ತೆಯನ್ನೇ ವಹಿಸಿಕೊಂಡವನಂತೆ ಮೈಸೂರು ಯಲ್ಲಿನ ಮರಳು ಜಾಡುಗಳಿಗೆ ತಾನೇ ರೈಡ್ ಡುವ ನಾಟಕವನ್ನ ಶುರುಹಚ್ಚಿಕೊಂಡಿದ್ದಾನೆ. ಳುನಾಡಿನಂತೆ ಕರ್ನಾಟಕದಲ್ಲೂ ಕಡಿಮೆ ದಲ್ಲಿ ಜನಸಾಮಾನ್ಯರಿಗೆ ಮರಳು ಸಿಗುವಂತೆ ಡುತ್ತೇನೆಂದು ಪುಂಗಿ ಊದುತ್ತಲೇ ಗಣಿ ತ್ತು ಭೂ ವಿಜ್ಞಾನ ಇಲಾಖೆಯ ಡೆಪ್ಯೂಟಿ ೆಕ್ಟರ್ ಆನಂದನ ಮೂಲಕ ಮರಳುಗಳ್ಳರಿಗೆ ತ್ತು ಮರಳು ಲಾರಿಗಳಿಗೆ ದಂಡ ವಿಧಿಸುವಂತೆ ಶ ಮಾಡಿದ್ದಾನೆ. ಆದರೆ ತನ್ನ ಚೇಲಾಗಳ ಲಕ ಅದೇ ಲಾರಿ ಮಾಲೀಕರಿಂದ ತಿಂಗಳಿಗೆ ಲಾರಿಗೆ 15000 ರೂಗಳನ್ನ ಫಿಕ್ಸ್ ಡಿದ್ದಾನೆ. ಮೈಸೂರಿನ 1700 ಲಾರಿಗಳಲ್ಲಿ 0 ಲಾರಿಗಳು ಮರಳು ಗಣಿಗಾರಿಕೆಯಲ್ಲಿವೆ. ಮದಾಸನ ಈ ನಾಟಕ ಕಂಡು ಸಿಡಿದೆದ್ದ ಲಾರಿ ಲೀಕರ ಸಂಘದವರು ಅಧ್ಯಕ್ಷ ದಂಡರಾಮು ನೇತೃತ್ವದಲ್ಲಿ ಪ್ರತಿಭಟನೆ ಡಿದರೂ ಪ್ರಯೋಜನವಾಗಿಲ್ಲ.

ಇಂತಹ ಸಕಲಕಲಾವಲ್ಲಭ ಮಂತ್ರಿ ಮದಾಸ್ ಉಸ್ತುವಾರಿಯಲ್ಲಿ ಮೈಸೂರಿನಲ್ಲಿ ಲುದರೋಡೆ ಹೆಚ್ಚಾಗಬಹುದೇ ಹೊರತು ವೃದ್ಧಿಯಾಗಲೀ, ಬೆಳವಣಿಗೆಯಾಗಲೀ ಕೇವಲ ರೀಚಿಕೆಯಷ್ಟೆ. ಇಂತಹದ್ದಕ್ಕೆ ಕಡಿವಾಣ ಕಬೇಕಿದ್ದ ಮುಖ್ಯಮಂತ್ರಿ ಇದರ ಸ್ತಂತಿರುವಾಗ ಇದಕ್ಕೆ ಕೊನೆಯಾಡುವುದು . ಮೈಸೂರಿನ ಪ್ರಜ್ಞಾವಂತ ಜನರು ುಗಿಳಿದು ರಾಮದಾಸ್‌ಗೆ ಮುಖ್ಯಮುಖಿಸಲು ಾಗುವರೇ?

• ಲಕ್ಷ್ಮಣ್ ಚೀರನಹಳ್ಳಿ

‘ಫವರ್’ಫುಲ್ ಹುಡುಗರು ಬಂದ್ರು



‘ಪೃಥ್ವಿ’ಯಲ್ಲಿ ಐಎಎಸ್ ಅಧಿಕಾರಿಯಾಗಿ, ‘ಜಾಕಿ’ಯಲ್ಲಿ ಪುಂಡ ಹುಡುಗನಾಗಿ ಅಭಿಮಾನಿಗಳನ್ನು ರಂಜಿಸಿದ್ದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಇದೀಗ ಬಿಡುಗಡೆಗೊಂಡಿರುವ ‘ಹುಡುಗರು’ ಚಿತ್ರದಲ್ಲಿ ಮತ್ತೊಂದು ರೀತಿಯಲ್ಲಿ ತಮ್ಮ ಅಭಿಮಾನಿಗಳನ್ನು ಚಕಿತಗೊಳಿಸಿದ್ದಾರೆ.

‘ಹುಡುಗರು’ ಚಿತ್ರದ ನಾಯಕ ನಟ ಪುನೀತ್ ರಾಜ್‌ಕುಮಾರ್ ಆದರೂ, ಇದೇ ಮೊದಲ ಬಾರಿಗೆ ಇನ್ನಿಬ್ಬರು ಸಮಕಾಲೀನ ನಾಯಕರೊಂದಿಗೆ ಬೆಳ್ಳಿತೆರೆಯನ್ನು ಅವರು ಹಂಚಿಕೊಂಡಿದ್ದಾರೆ. ಪುನೀತ್ ರಾಜ್‌ಕುಮಾರ್ ಜೊತೆಜೊತೆಗೆ ಅಷ್ಟೇ ಪವರ್‌ಫುಲ್ ಪಾತ್ರದಲ್ಲಿ ಕಾಣಿಸಿಕೊಂಡಿರುವವರು ಲೂಸ್ ಮಾದ ಯಾನೆ ಯೋಗೇಶ್ ಮತ್ತು ಶ್ರೀನಗರ ಕಿಟ್ಟಿ.

ಆಫ್‌ಕೋರ್ಸ್, ಇದು ತಮಿಳುನಾಡಿನ ಬಾಕ್ಸ್ ಆಫೀಸ್‌ನಲ್ಲಿ ದಾಖಲೆ ಸ್ಥಾಪಿಸಿದ ‘ನಾಡೋಡಿಗಳ್’ ಚಿತ್ರದ ಕನ್ನಡ ರೀಮೇಕ್.



ಅಲ್ಲಿ ಎಲ್ಲಾ ಹೊಸ ಕಲಾವಿದರನ್ನು ಹಾಕಿಕೊಂಡು ನಿರ್ದೇಶಕ ಸಮುದ್ರ ಕಿಣಿ ಚಿತ್ರವನ್ನು ನಿರೂಪಿಸಿದ್ದರು. ಯಾವುದೇ ತಾರಾ ವರ್ಚಸ್ಸು ಮತ್ತು ತಾರಾಮೌಲ್ಯ ಇಲ್ಲದ ಈ ಹುಡುಗರ ಚಿತ್ರ ಗೆದ್ದಿದ್ದಕ್ಕೆ ನಿರ್ದೇಶಕರ ನಾಮಬಲ ಮತ್ತು ಅವರ ಕ್ರಿಯಾಶೀಲತೆಯೇ ಕಾರಣ.


ತಮಿಳಿನಲ್ಲಿ ಈ ಚಿತ್ರ ಗೆದ್ದಿದ್ದೇ ತಡ, ಕೂಡಲೇ ಇದು ತೆಲುಗಿನಲ್ಲೂ ರಿಮೇಕ್ ಆಯಿತು. ತೆಲುಗಿನ ಸೂಪರ್ ಸ್ಟಾರ್ ರವಿತೇಜ ನಾಯಕನಾಗಿ ನಟಿಸಿದ ಈ ಚಿತ್ರದ ಹೆಸರು ‘ಶಂಭೋ ಶಿವ ಶಂಭೋ’. ಆಂಧ್ರದಲ್ಲೂ ಈ ಚಿತ್ರ ನಿರ್ಮಾಪಕರಿಗೆ ಭಾರಿ ಲಾಭವನ್ನು ತಂದುಕೊಟ್ಟಿತ್ತು.

ತಮಿಳು ಮತ್ತು ತೆಲುಗಿನಲ್ಲಿ ಜಯಭೇರಿ ಬಾರಿಸಿದ ನಂತರ ದಿವಂಗತ ರಾಜ್‌ಕುಮಾರ್ ಅವರ ವಜ್ರೇಶ್ವರಿ ಸಂಸ್ಥೆಯ ರಾಘವೇಂದ್ರ ರಾಜ್‌ಕುಮಾರ್ ಈ ಚಿತ್ರವನ್ನು ಅಪ್ಪುಗಾಗಿ ಕನ್ನಡದಲ್ಲಿ ನಿರ್ಮಿಸಲು ಉತ್ಸಾಹ ತೋರಿಸಿದರು. ಆರಂಭದಲ್ಲಿ ಕೆಲವರು ಈ ಚಿತ್ರ ಅಪ್ಪುಗೆ ಸರಿ ಹೊಂದುವುದಿಲ್ಲ ಎಂದು ಅಪಸ್ವರ ತೆಗೆದರೂ, ಅಪ್ಪು ಮತ್ತು ರಾಘಣ್ಣ ಮಾತ್ರ ಈ ಚಿತ್ರ ಮಾಡಲೇಬೇಕು ಎಂಬ ನಿರ್ಧಾರಕ್ಕೆ ಅಂಟಿಕೊಂಡರು. ರಾಜ್‌ಕುಮಾರ್ ಸಂಸ್ಥೆಯಲ್ಲಿ ಈತನಕ ಇಂತಹ ಮಲ್ಟಿಸ್ಟಾರ್ ಚಿತ್ರಗಳು ಬಂದ ಉದಾಹರಣೆಯೇ ಇಲ್ಲ. ಅವರ ಸಂಸ್ಥೆ ಯಾವುದೇ ಚಿತ್ರ ನಿರ್ಮಿಸಿದರೂ ಅದರಲಿ ರಾಜ್ ಮಕ್ಕಳಿಗೇ ಹೆಚ್ಚಿನ ಪ್ರಾಮುಖ್ಯತೆ ಇರುತ್ತದೆ. ಅಂತಹ ಒಂದು ಪರಿಪಾಠವನ್ನು ಬದಿಗಿಟ್ಟು ಒಂದು ಬಹುತಾರಾ ಚಿತ್ರವನ್ನು ಕೈಗೆತ್ತಿಕೊಂಡ ರಾಘವೇಂದ್ರ ರಾಜ್‌ಕುಮಾರ್ ಅವರ ಕ್ರಮ ಸ್ವಾಗತಾರ್ಹ.

ಹೀಗಾಗಿ ಪುನೀತ್ ಜೊತೆಗೆ ಮೊದಲ ಬಾರಿಗೆ ಇಬ್ಬರು ನಾಯಕ ನಟರು ಒಂದೇ ಚಿತ್ರದಲ್ಲಿ ನಟಿಸುವಂತಾಯಿತು. ಅಂದರೆ ಕನ್ನಡದಲ್ಲಿ ಈಗಾಗಲೇ ಅನೇಕ ಹೊಸ ಹೊಸ ಪ್ರಯೋಗಗಳಿಗೆ ತಮ್ಮನ್ನು ಒಡ್ಡಿಕೊಳ್ಳುತ್ತಿರುವ ಪುನೀತ್ ಈಗ ಮಾಮೂಲಿ ಸೂತ್ರದ ಪಾತ್ರಗಳ ಹೊರತಾಗಿ ಹೊಸತನಕ್ಕೆ ಮತ್ತೊಮ್ಮೆ ಸ್ಪಂದಿಸುತ್ತಿದ್ದಾರೆ ಎಂದಾಯಿತು. ಆದರೆ ಈ ಪುನೀತ್ ಅವರ ನೃತ್ಯ ಹೊಡೆದಾಟ ಮತ್ತು ಹಿರೋಯಿಸಂಯನ್ನು ಇಷ್ಟಪಡುವ ಅವರ ಅಭಿಮಾನಿಗಳಿಗೆ ಈ ಚಿತ್ರ ಸ್ವಲ್ಪ ನಿರಾಶ ಮಾಡಬಹುದು. ಏಕೆಂದರೆ ‘ಹುಡುಗರು’ ಚಿತ್ರದಲ್ಲಿ ಪುನೀತ್‌ಗಿಂತಲೂ ಎಷ್ಟೋ ಕಡೆ ಯೋಗೇಶ್ ಹೆಚ್ಚಿನ ಚಪ್ಪಾಳೆಯನ್ನು ಪಡೆಯುತ್ತಾರೆ. ಇದರ ಅರ್ಥ ಖಂಡಿತವಾಗಿಯೂ ಈ ಚಿತ್ರದಿಂದಾಗಿ ಪುನೀತ್‌ಗಿಂತ ಯೋಗೇಶ್‌ಗೆ ಹೆಚ್ಚು ಮೈಲೇಜು ಸಿಗುತ್ತದೆ. ಈ ತರಹ ತನ್ನ ಸಹನಟರಿಗೆ ವಿಜೃಂಭಿಸಲು ವಿಫುಲ ಅವಕಾಶ ಇರುವ ಕಥಾವಸ್ತುವನ್ನು ಆಯ್ಕೆ ಮಾಡಿದ ರಾಘಣ್ಣ ಮತ್ತು ಅಪ್ಪು ಮೆಚ್ಚುಗೆಗೆ ಒಳಗಾಗುತ್ತಾರೆ.

ರಿಮೇಕ್ ಚಿತ್ರಗಳನ್ನು ಮಾಡುವುದರಲ್ಲಿ ಎಕ್ಸ್‌ಪರ್ಟ್ ಎನಿಸಿರುವ ಮಾದೇಶ್ ಈ ಚಿತ್ರದ ನಿರ್ದೇಶಕರು. ಈ ಹಿಂದೆ ಅವರು ದರ್ಶನ್ ನಟಿಸಿದ ‘ಗಜ’, ಪುನೀತ್ ರಾಜ್‌ಕುಮಾರ್ ನಟಿಸಿದ ‘ರಾಮ್’, ಚಿರಂಜೀವಿ ಸರ್ಜಾ ನಟಿಸಿದ ‘ದಂಡಂ ದಶಗುಣಂ’ ಚಿತ್ರಗಳನ್ನು ಕನ್ನಡಕ್ಕೆ ಭಟ್ಟಿ ಇಳಿಸಿದ್ದಾರೆ. ಆ ಮೂರೂ ಚಿತ್ರಗಳನ್ನು ಜೆರಾಕ್ಸ್ ಕಾಪಿಯಂತೆ ಕನ್ನಡದ ಪ್ರೇಕ್ಷಕರಿಗೆ ನೀಡಿದ್ದ ಮಾದೇಶ್ ಈ ಚಿತ್ರದಲ್ಲಿ ಒಂದಿಷ್ಟು ಬದಲಾವಣೆ ಮಾಡಿರುವುದೇ ವಿಶೇಷ. ಉದಾಹರಣೆಗೆ ತಮಿಳಿನಲ್ಲಿ ಈ ಚಿತ್ರ 2 ಗಂಟೆ 45 ನಿಮಿಷಗಳಷ್ಟು ಕಾಲ ಸುದೀರ್ಘವಾಗಿತ್ತು. ಆದರೆ ಕನ್ನಡದಲ್ಲಿ ಅದನ್ನು ಭಟ್ಟಿ ಇಳಿಸುವಾಗ ಅನಗತ್ಯ ದೃಶ್ಯಗಳನ್ನು ಕತ್ತರಿಸಿ, ಇಡೀ ಸಿನಿಮಾವನ್ನು ಎರಡೂ ಕಾಲು ಗಂಟೆಗೆ ಇಳಿಸಿಬಿಟ್ಟಿದ್ದಾರೆ. ಇದಕ್ಕಾಗಿ ಮಾದೇಶ ಅವರನ್ನು ಅಭಿನಂದಿಸಬಹುದು.

ಹಾಗೆಯೇ ತಮಿಳು ಚಿತ್ರದಲ್ಲಿ ಬಹುತೇಕ ಹೊಸಬರೇ ನಟಿಸಿದ್ದರು. ಅಲ್ಲಿ ಚಿತ್ರಕತೆ ಬರೆಯುವಾಗ ಅಥವಾ ಸಂಭಾಷಣೆ ಬರೆಯುವಾಗ ತಾರಾ ವರ್ಚಸ್ಸು ಅಡ್ಡಿ ಬಂದಿರಲಿಲ್ಲ. ಆದರೆ ಇಲ್ಲಿ ‘ಜಾಕಿ’ ಖ್ಯಾತಿಯ ಪುನೀತ್, ‘ಸಂಜು ವೆಡ್ಸ್ ಗೀತಾ’ ಖ್ಯಾತಿಯ ಕಿಟ್ಟಿ ಮತ್ತು ‘ಧೂಳ್’ ಖ್ಯಾತಿಯ ಯೋಗೇಶ್ ಇರುವುದರಿಂದ ಮಾದೇಶ್ ಚಿತ್ರಕತೆಯಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿದ್ದಾರೆ. ‘ನಾಡೋಡಿಗಳ್’ ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಪ್ರೇಮಿಗಳನ್ನು ಈ ಮೂರು ಜನ ನಾಯಕರು ಯದ್ವಾತದ್ವ ಹೊಡೆಯುವ, ಹಿಂಸಿಸುವ ದೃಶ್ಯ ಇದೆ. ಆದರೆ ಅದನ್ನೆಲ್ಲಾ ಮಾದೇಶ್ ಸಂಪೂರ್ಣವಾಗಿ ಬಿಟ್ಟೇ ಬಿಟ್ಟಿದ್ದಾರೆ. ಅಂದರೆ ತಮಿಳು ಪ್ರೇಕ್ಷಕರು ಇಷ್ಟಪಡುವ ಅತಿರೇಕದ, ಅತೀ ರಂಜಿತ ದೃಶ್ಯಗಳನ್ನು ಇಲ್ಲಿ ಬಳಸದಿರುವ ಮುಖಾಂತರ ಮಾದೇಶ್ ಸ್ವಲ್ಪ ತನ್ನತನವನ್ನು ಪ್ರದರ್ಶಿಸಿದ್ದಾರೆ.



ಹಾಗೆಯೇ ತ್ರಿಮೂರ್ತಿ ನಾಯಕ ನಟರನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಭಾಷಣೆ ಬರೆದ ‘ಮಠ’ ಮತ್ತು ‘ಎದ್ದೇಳು ಮಂಜುನಾಥ’ ಖ್ಯಾತಿಯ ನಿರ್ದೇಶಕ ಗುರುಪ್ರಸಾದ್ ಸಂಪೂರ್ಣವಾಗಿ ಸ್ವಂತ ಸಂಭಾಷಣೆಯನ್ನೇ ಬರೆದು ಚಿತ್ರಕ್ಕೆ ಹೊಸತನ ತುಂಬಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸುತ್ತಾರೆ. ಈ ಬದಲಾವಣೆ ಕೂಡ ಸ್ವಾಗತಾರ್ಹ. ಛಾಯಾಗ್ರಹಕ ಸತ್ಯ ಹೆಗಡೆ ಎಂದಿನಂತೆ ತನ್ನದೇ ಶೈಲಿಯಲ್ಲಿ ಕಾರ್ಯವೆಸಗಿ ಶ್ರವಣಬೆಳಗೋಳದ ಸುತ್ತಮುತ್ತಲಿನ ಪರಿಸರವನ್ನು ಸುಂದರವಾಗಿ ಸೆರೆ ಹಿಡಿದು ಚಿತ್ರಕ್ಕೆ ಜೀವ ತುಂಬಿದ್ದಾರೆ.

ಚಿತ್ರದ ನಿಜವಾದ ಹೈಲೆಟ್ ಸಮುದ್ರಕಿಣಿ ಬರೆದಿರುವ ಚಿತ್ರಕತೆ. ಇದೇ ಈ ಚಿತ್ರದ ಜೀವಾಳ. ಮೂರು ಜನ ಉಂಡಾಡಿ ಪುಂಡರು ಪ್ರಾಣ ಸ್ನೇಹಿತರು. ಅವರು ತಮ್ಮ ಜೀವವನ್ನು ಒತ್ತೆಯಿಟ್ಟು ಮತ್ತೊಬ್ಬ ಸ್ನೇಹಿತನ ಪ್ರೇಮ ವಿವಾಹ ನಡೆಸಿಕೊಡುತ್ತಾರೆ. ಆ ಸಂದರ್ಭದಲ್ಲಿ ಈ ಮೂವರಲ್ಲಿ ಒಬ್ಬ ಕಿವುಡನಾಗುತ್ತಾನೆ, ಮತ್ತೊಬ್ಬ ಕುಂಟನಾಗುತ್ತಾನೆ. ಇದೇ ಸಂದರ್ಭದಲ್ಲಿ ಆ ಪ್ರೇಮ ಜೋಡಿ ಬೇರೆ ಬೇರೆಯಾಗುತ್ತಾರೆ. ಈ ವಿಷಯ ತಿಳಿದಾಕ್ಷಣ ಈ ತ್ರಿಮೂರ್ತಿಗಳು ಅವರನ್ನು ಸಂಪರ್ಕಿಸಲು ಹೋದಾಗ ಅವಮಾನಕ್ಕೆ ಒಳಗಾಗುತ್ತಾರೆ. ಅನಂತರ ಈ ಜೋಡಿ ಹೇಗೆ ಪರಿಸ್ಥಿತಿಯನ್ನು ನಿಭಾಯಿಸುತ್ತದೆ ಎಂಬುದೇ ಚಿತ್ರದ ಕ್ಲೈಮ್ಯಾಕ್ಸ್. ಇದು ಒಂದು ರೀತಿಯಲ್ಲಿ ಬಹಳ ಅಪರೂಪವಾದ, ಕುತೂಹಲಕಾರಿಯಾದ ಚಿತ್ರಕತೆ. ಹೀಗಾಗಿ ಆರಂಭದಿಂದಲೂ ನೋಡುಗರಿಗೆ ಈ ಚಿತ್ರ ಸಣ್ಣಪುಟ್ಟ ಶಾಕ್‌ಗಳನ್ನು ನೀಡುತ್ತಾ ಮುಂದೆ ಸಾಗುತ್ತದೆ. ಇದೊಂದು ಮಾಮೂಲಿ ಪ್ರೇಮ ಕಥಾವಸ್ತುವಿನ ಚಿತ್ರವಾದರೂ ಇಲ್ಲಿ ಪಡ್ಡೆ ಹುಡುಗರಿಗೆ ರೋಮಾಂಚನವಾಗುವ ದೃಶ್ಯಗಳಿವೆ. ಹಾಗೆಯೇ ಕಚಗುಳಿ ಇಡುವ ಹಾಸ್ಯ ಸಂಭಾಷಣೆಗಳಿವೆ. ಮನಮಿಡಿಯುವ ಸೆಂಟಿಮೆಂಟ್ ದೃಶ್ಯಗಳೂ ಇವೆ. ಎರಡು ಅದ್ಭುತವಾದ ಫೈಟಿಂಗ್ ದೃಶ್ಯಗಳೂ ಇವೆ.

ಬಹುಶಃ ಇಡೀ ಚಿತ್ರದ ಮೈನಸ್ ಪಾಯಿಂಟ್ ಎಂದರೆ ಹಾಡುಗಳು ಮತ್ತು ಅದರ ಚಿತ್ರೀಕರಣ. ಸಾಮಾನ್ಯವಾಗಿ ಅಪ್ಪು ನಾಯಕನಾಗಿ ನಟಿಸುವ ಚಿತ್ರಗಳ ಹಾಡುಗಳು ಮನಮೋಹಕವಾಗಿದ್ದು ಎಲ್ಲರೂ ಗುನುಗುನಿಸುವಂತಿರುತ್ತವೆ. ಆದರೆ ಅಂತಹ ಹಾಡುಗಳು ಈ ಚಿತ್ರದಲ್ಲಿ ಇಲ್ಲ ಎಂಬುದನ್ನು ಬಿಟ್ಟರೆ ಉಳಿದಂತೆ ಇದು ಅಪ್ಪು ಅಭಿಮಾನಿಗಳನ್ನು ರಂಜಿಸುವ ಚಿತ್ರ.

ನಾಯಕಿಯಾಗಿ ರಾಧಿಕಾ ಪಂಡಿತ್ ಸಣ್ಣ ಪಾತ್ರದಲ್ಲಿ ಕಾಣಿಸಿಕೊಂಡರೂ ತಮ್ಮ ಪಾತ್ರಕ್ಕೆ ಜೀವ ತುಂಬಿದ್ದಾರೆ. ಹಾಗೆಯೇ ಮತ್ತೊಬ್ಬ ಕನ್ನಡದ ನಾಯಕಿ ರಮ್ಯಾ ಭಾರ್ನಾ ಕೂಡಾ ಲವಲವಿಕೆಯಿಂದ ನಟಿಸಿದ್ದಾರೆ.

ರಾಘವೇಂದ್ರ ರಾಜ್‌ಕುಮಾರ್ ಅವರು ನಿರ್ಮಾಪಕರಾಗಿ ಮತ್ತೊಮ್ಮೆ ತಮ್ಮ ಜಾಣ್ಮೆಯನ್ನು ಪ್ರದರ್ಶಿಸಿದ್ದಾರೆ. ‘ಜಾಕಿ’ ಚಿತ್ರವನ್ನು 119 ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಿದ ರಾಘಣ್ಣ ‘ಹುಡುಗರು’ ಚಿತ್ರವನ್ನು 123 ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಿದ್ದಾರೆ. ‘ಜಾಕಿ’ ಸ್ವಮೇಕ್ ಚಿತ್ರವಾಗಿದ್ದು ವಿದೇಶಗಳಲ್ಲಿ ಚಿತ್ರೀಕರಣವಾಗಿದ್ದರಿಂದ ಅತ್ಯಂತ ದುಬಾರಿ ಚಿತ್ರವೆಂಬ ಹಣೆಪಟ್ಟಿಯನ್ನು ಹೊಂದಿತ್ತು. ಅಷ್ಟೇ ಅಲ್ಲ, ಆ ಚಿತ್ರದ ಕಥೆಯ ಎಳೆ ತುಂಬಾ ತೆಳುವಾಗಿದ್ದರಿಂದ ಜನತೆ ಇಷ್ಟಪಡುತ್ತಾರೋ ಇಲ್ಲವೋ ಎಂಬ ಭಯದಿಂದಲೇ ಅತ್ಯಂತ ಹೆಚ್ಚು ಚಿತ್ರಮಂದಿರಗಳಲ್ಲಿ ಅದನ್ನು ಬಿಡುಗಡೆ ಮಾಡಿದ್ದರು.

ಆದರೆ ‘ಹುಡುಗರು’ ಚಿತ್ರದಲ್ಲಿ ಸಾಕಷ್ಟು ಸೆಂಟಿಮೆಂಟ್, ತಮಾಷೆ, ಹೊಡೆದಾಟ ಮತ್ತು ಸಂದೇಶ ಇರುವುದರಿಂದ ಈ ಚಿತ್ರವನ್ನು ಕುಟುಂಬದ ಸದಸ್ಯರೆಲ್ಲ ನೋಡಿ ಆನಂದಪಡುವುದಕ್ಕೆ ಮೋಸವಿಲ್ಲ. ವಿದೇಶಕ್ಕೆ ಹೋಗದೇ ಶ್ರವಣಬೆಳಗೋಳದ ಸುತ್ತಮುತ್ತಲಿನ ಪರಿಸರದಲ್ಲಿ ಚಿತ್ರೀಕರಣಗೊಂಡಿರುವ ಕಡಿಮೆ ಬಜೆಟ್‌ನ ಈ ಚಿತ್ರ ಚಿತ್ರಮಂದಿರಗಳಲ್ಲಿ ಹೆಚ್ಚು ದಿನ ಕಾಣಿಸಿಕೊಂಡಷ್ಟೂ ರಾಘಣ್ಣ ದೊಡ್ಡ ಜಾಕ್‌ಪಾಟ್ ಹೊಡೆಯುವುದು ಗ್ಯಾರಂಟಿ.

ತಾನೊಬ್ಬ ಪಕ್ಕಾ ಕಮರ್ಷಿಯಲ್ ನಾಯಕ ನಟನಾದರೂ ನಾಯಕನ ಹೀರೋಯಿಸಂನ್ನು ಪ್ರದರ್ಶಿಸಲು ಅವಕಾಶವಿಲ್ಲದ ಮಾಮೂಲಿ ಪಾತ್ರಗಳಲ್ಲಿ ನಟಿಸುವ ಮುಖಾಂತರ ಅಪ್ಪು ತಾನು ಉಳಿದವರಿಗಿಂತ ವಿಭಿನ್ನ ಎಂಬುದನ್ನು ‘ಹುಡುಗರು’ ಚಿತ್ರದ ಮುಖಾಂತರ ತೋರಿಸಿಕೊಟ್ಟಿದ್ದಾರೆ. ಇಂತಹ ವಿಭಿನ್ನ ಪ್ರಯೋಗಶೀಲ ಮತ್ತು ನಾಯಕರುಗಳು ಸ್ವಮೇಕ್ ಚಿತ್ರಗಳಲ್ಲೂ ಪುನರಾವರ್ತನೆಯಾಗಲಿ ಎಂಬುದೇ ನಮ್ಮ ಆಶಯ.

• ತೇಜೆ

ಲಾಡೆನ್ ಕಲಿತದ್ದು-ಕನಲಿದ್ದು


ಅಫ್ಘಾನ್‌ನಲ್ಲಿ ಲಾಡೆನ್...

ಸೌದಿ ಅರೇಬಿಯಾದ ಕೋಟ್ಯಾಧೀಶ ಮೊಹಮದ್ ಬಿನ್ ಅವದ್ ಬಿನ್ ಲಾಡೆನ್‌ನ ಹತ್ತನೇ ಹೆಂಡತಿಯ ಮಗ ಒಸಾಮಾ ಬಿನ್ ಲಾಡೆನ್ ಹುಟ್ಟಿದ್ದು 1957 ರ ಮಾರ್ಚ್ 10ರಲ್ಲಿ, ಮೊನ್ನೆ ಅಬೋಟಾಬಾದ್‌ನಲ್ಲಿ ಲಾಡೆನ್‌ಗೆ ಗುಂಡೇಟು ಬಿದ್ದಾಗ ಅವನಿಗೆ ಐವತ್ನಾಲ್ಕು ವರ್ಷ.

ಸೌದಿಯ ಲಂಚುಟ ರಾಜ ಕುಟುಂಬಕ್ಕೆ ಹತ್ತಿರದವನಾಗಿದ್ದ ಲಾಡೆನ್‌ನ ತಂದೆ ದೊಡ್ಡ ಉದ್ಯಮವನ್ನೇ ಕಟ್ಟಿದ್ದ. ಒಬ್ಬ ವಹಾಬಿ ಮುಸ್ಲಿಮನಾಗಿ ಬೆಳೆದ ಲಾಡೆನ್ ಚಿಕ್ಕವನಾಗಿದ್ದಾಗ ರಿಯಾದ್‌ನ ಪ್ರಸಿದ್ಧ ಶ್ರೀಮಂತರ ಶಾಲೆಯಾಗಿದ್ದ ಅಲ್-ತುಬೀರ್ ಮಾಡೆಲ್ ಸ್ಕೂಲ್‌ನಲ್ಲಿ ಕಲಿತ. ನಂತರ ಲಾಡೆನ್ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಕಲಿತ ಅನ್ನುತ್ತಾರೆ. ಸಿವಿಲ್ ಇಂಜನಿಯರಿಂಗ್ ಡಿಗ್ರಿ ತಗೊಂಡಿದ್ದ ಎನ್ನುವವರೂ ಇದ್ದಾರೆ. ಲಾಡೆನ್ ಖುರಾನ್ ಹಾಗೂ ಜಿಹಾದ್ ಬಗ್ಗೆ ಜಾಸ್ತಿ ಆಕರ್ಷಣೆ ಬೆಳೆಸಿಕೊಂಡಿದ್ದ ಎಂತಲೂ ಇದೆ. ಇದೇನೇ ಇರಲಿ ಈ ಲಾಡೆನ್ ಪದ್ಯಗಳನ್ನೂ ಬರೆಯುತ್ತಿದ್ದನಂತೆ. ಲಾಡೆನ್ ಮಿತಭಾಷಿಯಾಗಿದ್ದ ಮತ್ತು ಹಾರ್ಡ್‌ವರ್ಕಿಂಗ್ ಎಂಬುದು ಹೌದು.

ಮುಸ್ಲಿಂ ಜಗತ್ತಿಗೆ ಪ್ರಜಾಪ್ರಭುತ್ವ ಸಮಾಜವಾದಿ, ಕಮ್ಯುನಿಸಂ ಅಥವಾ ಪ್ಯಾನ್ಸ್ ಅರೇಬಿಕ್ ಸಿದ್ಧಾಂತಗಳು ಸರಿಹೊಂದುವುದಿಲ್ಲವೆಂಬ ನಂಬಿಕೆ ಬೆಳೆಸಿಕೊಂಡ ಲಾಡೆನ್ ಷರಿಯತ್ ಅದಕ್ಕೆ ಸೂಕ್ತ ಪರಿಹಾರವೆಂದು ಭಾವಿಸಿದ್ದ.

ಅಮೆರಿಕಾ, ಇಸ್ರೇಲ್ ಹಾಗೂ ಶಿಯಾ ಮುಸ್ಲಿಮರೇ ತನ್ನ ಶತ್ರುಗಳೆಂದು ಭಾವಿಸಿದ್ದ. ಈ ಶತ್ರುಗಳನ್ನು ದೀರ್ಘಕಾಲದ ಸಂಘರ್ಷಕ್ಕೆಳೆದು ಆರ್ಥಿಕವಾಗಿ ದುರ್ಬಲಗೊಳಿಸಿ ಸೋಲಿಸಬಹುದೆಂಬ ಲೆಕ್ಕಾಚಾರ ಅವನದು. ಹಾಗೆ ನೋಡಿದರೆ ಅಮೆರಿಕಾ ಕಳೆದ ಹತ್ತು ವರ್ಷದಲ್ಲಿ ಅಲ್ ಕೈದಾ ವಿರುದ್ಧ ಹಾಗೂ ವಾರ್ ಆನ್ ಟೆರರಿಸಂ ಕಾರ್ಯಾಚರಣೆಗಳಿಗಾಗಿ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾ, ಸೈನಿಕರನ್ನು ಕಳೆದುಕೊಳ್ಳುವಂತಾಗಿದ್ದು ಸುಳ್ಳೇನಲ್ಲ.

1979 ರಲ್ಲಿ ಸೌದಿ ತೊರೆದು ಪಾಕಿಸ್ತಾನಕ್ಕೆ ಬಂದ ಲಾಡೆನ್ ಪಾಕ್‌ನ ಆಗಿನ ಐಎಸ್‌ಐ ಮುಖ್ಯಸ್ಥ ಹಮೀದ್ ಗುಲ್‌ನ ಗೆಳೆಯನಾದ. ಅಮೆರಿಕಾಗೆ ಆಗ ರಷ್ಯಾ ಬೆಂಬಲಿತ ಅಫ್ಘಾನ್ ಸರ್ಕಾರವನ್ನು ಕೆಡವಬೇಕಿತ್ತು, ಹಾಗಾಗಿ ಆಪರೇಷನ್ ಸೈಕ್ಲೋನ್ ಎಂಬ ಹೆಸರಿನ ಪಿತೂರಿ ಶುರುವಾಯಿತು. ಅಮೆರಿಕಾ ಒದಗಿಸಿದ ಲಕ್ಷಾಂತರ ಡಾಲರ್ ಹಣ, ಆಯುಧಗಳನ್ನು ಐಎಸ್‌ಐ ಮೂಲಕ ಪಡೆದ ಲಾಡೆನ್ ಪಾಕ್‌ನ ಅಬ್ದುಲ್ ಅಜಂ ಎಂಬುವನೊಡನೆ ಸೇರಿ ಮುಖ್ತಬಾ-ಅಲ್-ಖಿದಮತ್ ಎಂಬ ಮಿಲಿಟೆಂಟ್ ಗುಂಪು ಕಟ್ಟಿದ. ಅರಬ್ ಜಗತ್ತಿನ ಹತ್ತಾರು ದೇಶಗಳಿಂದ ಜಿಹಾದಿ ಹೋರಾಟಗಾರರನ್ನು ಕರೆಸಿ ಮಿಲಿಟರಿ ತರಬೇತಿ ಕೊಟ್ಟು ಅಫ್ಘಾನಿಸ್ತಾನಕ್ಕೆ ಕಳಿಸಿದ. ಮುಸ್ಲಿಂ ದೇಶವೊಂದರಲ್ಲಿ ಕಮ್ಯುನಿಸ್ಟರ ಆಡಳಿತವಿರುವುದು ಲಾಡೆನ್‌ಗೆ ಬೇಕಿರಲಿಲ್ಲ, ಹಾಗೆ ಸಮಾಜವಾದವನ್ನು ದ್ವೇಷಿಸುವ ಮಿಲಿಟೆಂಟ್ ಮುಸ್ಲಿಂ ನಾಯಕನೊಬ್ಬ ಅಮೆರಿಕಾಗೂ ಬೇಕಿದ್ದ. ಕೊನೆಗದು ರಷ್ಯಾ ಬೆಂಬಲಿತ ಅಫ್ಘಾನ್ ಅಧ್ಯಕ್ಷ ನಜೀಬುಲ್ಲಾನ ಸೋಲು ಹಾಗೂ ಸಾವಿನೊಂದಿಗೆ ಕೊನೆಯಾಯಿತು.

ಲಾಡೆನ್ ಅವತ್ತಿಗೂ ಆನಂತರವೂ ಅಮೆರಿಕಾದ ಗೆಳೆಯನೇ ಆಗಿದ್ದ. ಆದರೆ 1990 ರಂದು ಆಗಸ್ಟ್ 2 ರಲ್ಲಿ ಸದ್ದಾಂ ಹುಸೇನ್ ಕುವೈತ್ ಮೇಲೆ ದಾಳಿ ಮಾಡಿದಾಗ ಪರಿಸ್ಥಿತಿ ಬದಲಾಯಿತು. ಸೌದಿ ರಾಜ ಮನೆತನದ ಆಡಳಿತಗಾರರು ಸದ್ದಾಂ ವಿರುದ್ಧ ಅಮೆರಿಕಾ ಸಾರಿದ ಯುದ್ಧಕ್ಕೆ ಸೌದಿಯಲ್ಲಿ ನೆಲೆ ಒದಗಿಸಿಕೊಟ್ಟರು. ಲಾಡೆನ್ ಇಸ್ಲಾಂನ ಪವಿತ್ರ ನೆಲದಲ್ಲಿ ವಿದೇಶಿ ಸೇನೆ ಬರಕೂಡದೆಂದು ಎಚ್ಚರಿಸಿದ. ಆದರೆ ಸೌದಿ ರಾಜನಿಗೆ ಲಾಡೆನ್ ಮಾತು ಬೇಕಿರಲಿಲ್ಲ.

ಲಾಡೆನ್ ಏಕಕಾಲದಲ್ಲಿ ಅಮೆರಿಕಾ ಹಾಗೂ ಸೌದಿ ಸರ್ಕಾರದ ವಿರುದ್ಧ ತಿರುಗಿಬಿದ್ದ.

ಅಲ್ ಕೈದಾ ಅಸ್ತಿತ್ವಕ್ಕೆ ಬಂದು ಬಲಿಷ್ಠವಾಗಲು ಶುರುವಾಗಿದ್ದು ಆಗಲೆ. ಲಾಡೆನ್‌ನ ಅಲ್ ಕೈದಾ ನೆಟ್‌ವರ್ಕ್ ಅರಬ್ ದೇಶಗಳಲ್ಲಿ ಮಾತ್ರವಲ್ಲದೆ ಆಫ್ರಿಕಾದ ಸುಡಾನ್, ಲಿಬಿಯಾ, ತಾಂಜಾನಿಯಾ, ಇಥಿಯೋಪಿಯಾಗಳಲ್ಲಿ, ಯೂರೋಪ್‌ನ ಬೋಸ್ನಿಯಾ, ಸ್ಪೇನ್, ಇಂಗ್ಲೆಂಡ್‌ನಲ್ಲೂ ಹರಡಿಕೊಳ್ಳಲು ಶುರುವಾಗಿತ್ತು, ಮುಖ್ಯವಾಗಿ ಅಮೆರಿಕನ್ನರನ್ನೇ ಟಾರ್ಗೆಟ್ ಮಾಡಿಕೊಂಡು ಅಸಂಖ್ಯ ದಾಳಿಗಳಾದವು. ಈಜಿಪ್ಟ್‌ನ ಇಸ್ಲಾಮಿಕ್ ಸ್ಕಾಲರ್ ಅಲ್ ಜವಾಹಿರಿ ಅಷ್ಟರಲ್ಲಿ ಲಾಡೆನ್‌ನ ಅಲ್ ಕೈದಾ ಸೇರಿಕೊಂಡಿದ್ದ. ಇವರೆಲ್ಲಾ ಸೇರಿ ಅಲ್ ಕೈದಾಗೆ ಒಂದು ಸೈದ್ಧಾಂತಿಕ ಚೌಕಟ್ಟು, ಹೋರಾಟ, ಜಿಹಾದಿಗಳಿಗೆ ವ್ಯವಸ್ಥಿತ ತರಬೇತಿ, ಹಣ ಸಂಗ್ರಹಣೆ ನೆಟ್‌ವರ್ಕ್ ಕಟ್ಟುವ ಕೆಲಸ ಆರಂಭಿಸಿ ಬೆಳೆಸತೊಡಗಿದ್ದರು.



ವಿಶ್ವಾದ್ಯಂತ ಅಲ್ ಕೈದಾ ಹೆಸರೂ ಪರಿಚಯವಾಗುವಂತೆ ಅಮೆರಿಕಾದ ಮೇಲೆ 2001 ರ ಸೆಪ್ಟೆಂಬರ್ 9 ರಂದು ವೈಮಾನಿಕ ದಾಳಿ ಆಯಿತು. ಅಲ್ಲಿ ಸತ್ತ ದುರ್ದೈವಿಗಳ ಬಗ್ಗೆ ಅನುಕಂಪವಿರಬೇಕು ನಿಜ. ಆದರೆ ಆ ದಾಳಿ ನಡೆದ ರೀತಿ, ಮಾಡಿಕೊಂಡಿದ್ದ ತಯಾರಿಗಳು, ಪ್ರಾಣ ಕಳೆದುಕೊಳ್ಳಲು ರೆಡಿಯಾಗಿ ಹೊರಬಿದ್ದ ಜಿಹಾದಿಗಳ ಮನಸ್ಥಿತಿ ಹಾಗೂ ದೃಢನಿರ್ಧಾರಗಳು ಅಧ್ಯಯನ ಯೋಗ್ಯವಾಗಿದೆ.

ಆದರೆ ಆಗಲೇ ಲಾಡೆನ್ ಅಮೆರಿಕಾದ ನಂ ಒನ್ ಎನಿಮಿಯಾಗಿಹೋದ. ಹದಿನೈದು ವರ್ಷಗಳ ಲಾಡೆನ್-ಅಮೆರಿಕಾದ ಮಿಲಿಟರಿ ಪಿತೂರಿಗಳ ನಂಟು ಸಂಪೂರ್ಣವಾಗಿ ಕಿತ್ತುಹೋಯಿತು. ನಂತರ ಹತ್ತು ವರ್ಷ ಕಾಲ ಅಮೆರಿಕಾದಂತ ಅಮೆರಿಕಾವನ್ನೇ ಬಿಟ್ಟೂಬಿಡದೆ ಕಾಡಿ, ಸತಾಯಿಸಿದ ಲಾಡೆನ್ ಈಗ ಸತ್ತಿದ್ದಾನೆ.

ಆದರೆ ಅಲ್ ಕೈದಾ ಅಷ್ಟು ಸುಲಭವಾಗಿ ನಿರ್ನಾಮವಾಗುವುದಿಲ್ಲ, ಅರಬ್ ದೇಶಗಳಲ್ಲಿ ಅಮೆರಿಕಾ ನಡೆಸುತ್ತಿರುವ ಅತ್ಯಾಚಾರ, ದಮನ ದಬ್ಬಾಳಿಕೆಗಳೇ ಇನ್ನಷ್ಟು ಲಾಡೆನ್‌ಗಳು, ಮಿಲಿಟೆಂಟ್‌ಗಳು ತಲೆ ಎತ್ತಲು ಕಾರಣವಾಗುತ್ತವೆ.

ಲಾಡೆನ್ ವಿವಾಹ ವೈಭವ

ಜಿಹಾದ್ ಹೆಸರಲ್ಲಿ ಭಯೋತ್ಪಾದನೆಯ ಹಾದಿಯಲ್ಲಿ ಮುಂದುವರೆದ ಲಾಡೆನ್ ಮದುವೆ-ಮಕ್ಕಳ ವಿಚಾರದಲ್ಲಿ ಹಿಂದೆ ಬಿದ್ದಿರಲಿಲ್ಲ, ಆತನ ಖಾಸಗೀ ಬದುಕನ್ನ ತಡಕಾಡಿದರೆ ಈ ವಿಚಾರ ಸ್ಪಷ್ಟವಾಗುತ್ತದೆ.

ಹದಿನೇಳನೇ ವಯಸ್ಸಿನಲ್ಲಿ ತನ್ನ ಸಂಬಂಧಿಯಾಗಿದ್ದ ಹದಿನೈದರ ಪ್ರಾಯದ ನಜ್ವಾಳನ್ನ ವರಿಸುವ ಮೂಲಕ ವೈವಾಹಿಕ ಯಾನ ಆರಂಭಿಸಿದ ಲಾಡೆನ್ ಆಕೆಯಿಂದ ಹನ್ನೊಂದು ಮಕ್ಕಳನ್ನು ಪಡೆದ. 1983ರ ಹೊತ್ತಿಗೆ ಖದೀಜಾ ಷರೀಫ್ ಎಂಬ ಪೈಗಂಬರ್ ವಂಶದ ಕುಡಿಯನ್ನ ವರಿಸಿದ. ಚೆಂದಗೆ ಓದಿಕೊಂಡಿದ್ದ ಈಕೆ ಲಾಡೆನ್‌ಗಿಂತ ಒಂಬತ್ತು ವರ್ಷ ದೊಡ್ಡವಳು. ಈಕೆಯಿಂದಲೂ ಮೂವರು ಮಕ್ಕಳನ್ನು ಪಡೆದ ಲಾಡೆನ್ ಸುಡಾನ್‌ನಲ್ಲಿ ನೆಲೆನಿಂತ. ಈ ಸಂದರ್ಭದಲ್ಲಿ ಲಾಡೆನ್‌ನ ಆರ್ಥಿಕತೆಯೂ ಸೇರಿದಂತೆ ಎಲ್ಲಾ ಪರಿಸ್ಥಿತಿಗಳು ಬಿಗಡಾಯಿಸಿದ್ದವು. ಖದೀಜಾ ಇಂಥ ಕಠಿಣ ಸ್ಥಿತಿಯಲ್ಲಿ ಬದುಕಲಾರದೆ ಲಾಡೆನ್‌ಗೆ ವಿಚ್ಛೇದನ ನೀಡಿ ಸೌದಿ ಅರೇಬಿಯಕ್ಕೆ ಹಿಂದಿರುಗಿದಳು.

1985ರಲ್ಲಿ ಖೆರ್ಯಾ ಸಬರ್ ಎಂಬಾಕೆ ಲಾಡೆನ್‌ನ ಮೂರನೇ ಹೆಂಡತಿಯಾಗಿ ಬಂದಳು. ಈಕೆ ಇಸ್ಲಾಮಿಕ್ ಷರಿಯತ್‌ನಲ್ಲಿ ಡಾಕ್ಟರೇಟ್ ಪಡೆದ ವಿದ್ಯಾವಂತೆ. ಈಕೆಗೂ ಒಂದು ಗಂಡು ಮಗುವಾಯಿತು. ಆದರೆ 2001ರಲ್ಲಿ ಅಫ್ಘಾನಿಸ್ತಾನದಲ್ಲಿ ಲಾಡೆನ್ ಅಡಗುದಾಣದ ಮೇಲೆ ಅಮೆರಿಕ ದಾಳಿ ಮಾಡಿದ ನಂತರ ಈಕೆಯ ಬಗ್ಗೆ ಯಾವುದೇ ಸುಳಿವು ಸಿಕ್ಕಿಲ್ಲವಾದ್ದರಿಂದ ಆಕೆ ಇನ್ನೂ ಬದುಕಿದ್ದಾಳೊ ಇಲ್ಲವೋ ಗೊತ್ತಿಲ್ಲ.

ಖೆರ್ಯಾ ಸಬರ್‌ಳೊಂದಿಗೆ ಸಂಸಾರ ನಡೆಸುತ್ತಲೇ ಲಾಡೆನ್ 1987ರಲ್ಲಿ 4ನೇ ಮದುವೆಯಾಗಿದ್ದ. ಹೊಸ ಹೆಂಡತಿಯ ಹೆಸರು ಸಿಹಾಂ ಸಬರ್. ಆಕೆಯ ಮಡಿಲಲ್ಲಿ ನಾಲ್ಕು ಮರಿ ಲಾಡೆನ್‌ಗಳು ಕಂಗೊಳಿಸಿದವು. ಈ ಸಂದರ್ಭದಲ್ಲೇ ಲಾಡೆನ್ ಅಮಲ್ ಅಲ್ ಸದಾ ಎಂಬಾಕೆಯನ್ನು 5ನೇ ಹೆಂಡತಿಯಾಗಿ ಸ್ವೀಕರಿಸಿದ.


ಮಗ ಅಲಿ ಜತೆ...

ಯಮೆನ್ ದೇಶದ ಅಮಲ್‌ಗೆ ಆಗ ಹದಿನೆಂಟರ ಹರೆಯ. ಲಾಡೆನ್‌ಗೆ 43. ಅಮಲ್‌ಳ ಗುರು ಸೈಯಿದ್ ಇಸ್ಮಾಯಿಲ್‌ನೇ ಮುಂದೆ ನಿಂತು ಈ ಮದುವೆ ಮಾಡಿದ್ದ, ಆಕೆ ಕೂಡಾ ಲಾಡೆನ್‌ನಂತೆಯೇ ಧರ್ಮಾಚರಣೆಗಳಲ್ಲಿ ಅತ್ಯಂತ ಶ್ರದ್ಧೆ ಹೊಂದಿದ್ದಳು. ಅಂದಹಾಗೆ ಈಕೆ ಲಾಡೆನ್‌ನ ಅತೀ ಮುದ್ದಿನ ಹೆಂಡತಿ. ಮೊನ್ನೆ ಆತ ಸಾಯೋ ಸಂದರ್ಭದಲ್ಲಿ ಜೊತೆಗಿದ್ದದ್ದು ಆಕೆಯೇ.

ಈಕೆಯನ್ನು ಮದುವೆಯಾಗಿ ವರ್ಷ ಕಳೆಯುವಷ್ಟರಲ್ಲೇ ಅಮೆರಿಕಾದ ಮೇಲೆ ಲಾಡೆನ್ ದಾಳಿ ನಡೆಸಿದ. ಇದಾದ ಕೆಲವು ದಿನಗಳ ನಂತರ ಕಂದಹಾರ್‌ನಲ್ಲಿ ಈ ದಂಪತಿಗೆ ಹೆಣ್ಣು ಮಗುವೊಂದು ಜನಿಸಿತು. ಅದಕ್ಕೆ ಲಾಡೆನ್ ಸಫಿಯಾ ಅಂತ ಹೆಸರಿಟ್ಟಿದ್ದ. ಈ ಬಗ್ಗೆ ಪತ್ರಿಕೆಯೊಂದಕ್ಕೆ ಕೊಟ್ಟ ಸಂದರ್ಶನದಲ್ಲಿ ಆತ 'ಪೈಗಂಬರರ ಕಾಲದಲ್ಲಿ ದಾಳಿ ನಡೆಸಿದ ಯಹೂದ್ಯರನ್ನು ಸಫಿಯಾ ಹೆಸರಿನ ಒಬ್ಬಾಕೆ ಕೊಂದು ಹಾಕಿದ್ದಳು. ಆದುದರಿಂದಲೇ ನನ್ನ ಮಗಳಿಗೆ ಆ ಹೆಸರನ್ನೇ ಇಟ್ಟಿದ್ದೇನೆ. ನನ್ನ ಮಗಳು ಕೂಡ ಮುಸ್ಲಿಂ ವಿರೋಧಿಗಳನ್ನು ಸದೆ ಬಡಿಯುವಂತಾಗಲಿ' ಅಂತೆಲ್ಲ ಹೇಳಿಕೊಂಡಿದ್ದ.

ಬಹುಶಃ ಅಮೆರಿಕ ದಾಳಿಯ ನಂತರ 'ನನ್ನಪ್ಪನನ್ನು ಬಂಧಿಸಿ ಹೊಡೆದು ಹಾಕಿ, ನನ್ನ ಕಣ್ಣೆದುರೇ ಎಳೆದುಕೊಂಡು ಹೋದರು' ಅಂತ ಹೇಳಿಕೆ ನೀಡಿದ ಎಳೆಯ ಬಾಲೆ ಈ ಶಫಿಯಾಳೇ ಇರಬಹುದು.

ನೇವಿ ಸೀಲ್ಸ್ ಪ್ರತಿ ಕಮಾಂಡೋಗೆ ಎರಡೂವರೆ ಕೋಟಿ ರೂಪಾಯಿ ಖರ್ಚು






'The only easy day was yesterday' ಎನ್ನುವ ಮಾತು ಅಮೆರಿಕಾದ ಈ ಕಮಾಂಡೋ ಪಡೆಯಲ್ಲಿ ಚಾಲ್ತಿಯಲ್ಲಿದೆ.

SEALS ಅಂದರೆ Sea, Air, Land ಈ ಮೂರು ಕಡೆ ಯುದ್ಧ ಕಾರ್ಯಾಚರಣೆ ನಡೆಸಬಲ್ಲ ಯೋಧರಿವರು. ಇದೆಷ್ಟು ಕಷ್ಟದ ತರಬೇತಿಯೆಂದರೆ ಸೀಲ್ಸ್ ಕಮಾಂಡೊ ಆಗಬಯಸುವವರಲ್ಲಿ ಶೇ. 80 ಮಂದಿ ತರಬೇತಿ ಪೂರ್ತಿಯಾಗುವ ಮೊದಲೇ ಬಿಟ್ಟುಹೋಗಿರುತ್ತಾರೆ ಅಥವಾ ಅನ್‌ಫಿಟ್ ಅನಿಸಿಕೊಂಡಿರುತ್ತಾರೆ. 1962 ರಲ್ಲಿ ಅಸ್ತಿತ್ವಕ್ಕೆ ಬಂದ ಈ ಕಮಾಂಡೋ ಪಡೆಗೆ ದಿನನಿತ್ಯ ಮಿಲಿಟರಿ ಕಾರ್ಯಾಚರಣೆಗಳೇನೂ ಇರುವುದಿಲ್ಲ; ಸೀಲ್ಸ್ ಪಡೆ ರಚನೆಯಾದ ವರ್ಷದಲ್ಲೇ ವಿಯಟ್ನಾಂನಲ್ಲಿ, ನಂತರ ಗ್ರೆನೇಡಾದಲ್ಲಿ 1986 ರ ಗಲ್ಫ್ ವಾರ್‌ನಲ್ಲಿ, ನಂತರ 1988 ರಲ್ಲಿ ಪನಾಮದಲ್ಲಿ, ಇತ್ತೀಚೆಗೆ ಇರಾಕ್ ಹಾಗೂ ಅಫಘಾನಿಸ್ತಾನದಲ್ಲಿ ಈ ಸೀಲ್ಸ್ ಕಮಾಂಡೋಗಳು ಕಾಣಿಸಿಕೊಂಡು ಮಿಂಚಿನ ಸಂಚಲನ ಮೂಡಿಸಿರುವುದು ನಿಜ. ಇವರ ಒಟ್ಟಾರೆ ಸಂಖ್ಯೆ ಎರಡೂವರೆ ಸಾವಿರದಿಂದ ಆರು ಸಾವಿರದತನಕ ಇರುತ್ತದೆ. ಒಬ್ಬ ಸೀಲ್ಸ್ ಕಮಾಂಡೋ ಕಾರ್ಯಾಚರಣೆಗೆ ಹೊರಟನೆಂದರೆ ಕನಿಷ್ಠ ಎರಡೂವರೆ ಕೋಟಿ ರೂಪಾಯಿ ಬೆಲೆಯಷ್ಟು ಆಯುಧಗಳು, ಬುಲೆಟ್ ಪ್ರೂಫ್ ಜಾಕೆಟ್‌ಗಳು, ಮತ್ತಿತರ ಸೂಕ್ಷ್ಮ ಮಿಲಿಟರಿ ಉಪಕರಣಗಳನ್ನು ಹೊತ್ತಿರುತ್ತಾನೆ. ಹೆಚ್ಚುಕಡಿಮೆ ಪ್ರತಿ ಕಮಾಂಡೋಗೂ ಸ್ಯಾಟಲೈಟ್ ಲಿಂಕ್‌ನ ಮೂಲಕ ಬಳಸಬಹುದಾದ ಸಂಪರ್ಕ ಸಾಧನ ನೀಡಿರುತ್ತಾರೆ. ಕಮಾಂಡೋಗಳ ಬೆಂಬಲಕ್ಕೆ ಅಕ್ಕಪಕ್ಕದಲ್ಲೇ ನೆರವಿನ ತುಕಡಿಗಳು ಮಾತ್ರವಲ್ಲದೆ ಸಾವಿರಾರು ಕಿಲೋಮೀಟರುಗಳ ದೂರದಲ್ಲಿರುವ ಯುದ್ಧ ಹಡಗುಗಳೊ ಯುದ್ಧ ವಿಮಾನಗಳೊ ಅಥವಾ ಮಿಲಿಟರಿ ಉಪಗ್ರಹಗಳೋ ಇದ್ದೇ ಇರುತ್ತವೆ.

ಸೀಲ್ಸ್ ಕಮಾಂಡೊಗಳ ಯುದ್ಧ ಪದ್ಧತಿ, ಧೈರ್ಯಸಾಹಸಗಳ ಬಗ್ಗೆ ಕತೆಗಳೇ ಇವೆ. ಅನೇಕ ಸಿನಿಮಾ, ಟಿವಿ ಧಾರಾವಾಹಿ, ಕಾರ್ಟೂನ್ ಪಾತ್ರಗಳೆಲ್ಲ ಸೃಷ್ಟಿಯಾಗಿವೆ. ಹಾಗೆಂದ ಮಾತ್ರಕ್ಕೆ ಇವರೇನೂ ನ್ಯಾಯದ ಪ್ರತಿಪಾದಕರೇನಲ್ಲ, ಬಹಳ ಮುಖ್ಯವಾಗಿ ಅಮೆರಿಕಾದ ಹಿತಾಸಕ್ತಿಗಳನ್ನು ಕಾಪಾಡುವ ಅಮೆರಿಕಾಗೆ ಸರಿ ಅನಿಸಿದ್ದನ್ನು ಜಾರಿ ಮಾಡುವ ಬೇಡ ಅನಿಸಿದವರನ್ನು ಮುಗಿಸಿಬಿಡುವ ಒಂದು ಕಮಾಂಡೋ ಪಡೆ ಇದು.



ಈ ಹಡಗಿನಿಂದ ಲಾಡೆನ್ ಜಲಸಮಾಧಿಯಾದ...

ಎಲ್ಲವೂ ರಹಸ್ಯ

ಅಖಂಡ ಹತ್ತು ವರ್ಷಗಳಿಂದ ಲಾಡೆನ್‌ಗಾಗಿ ಹುಡುಕಾಡಿ ಹೈರಾಣಾಗಿದ್ದ ಅಮೆರಿಕ ಈ ಬಾರಿ ಮಾತ್ರ ಪಕ್ಕಾ ಕಾರ್ಯಾಚರಣೆಗಿಳಿದಿತ್ತು, ಹೊರ ಜಗತ್ತಿಗಿರಲಿ, ತನ್ನದೇ ಪಡೆಯುವರಿಗೂ ಎಲ್ಲಾ ಗುಟ್ಟು ಬಿಟ್ಟುಕೊಡದ ಅಮೆರಿಕ ರಹಸ್ಯ ಕಾಯ್ದುಟ್ಟುಕೊಂಡಿತ್ತು.

ಆ ರಹಸ್ಯ ಹೇಗಿತ್ತೆಂಬುದಕ್ಕೆ ಪುಟ್ಟದೊಂದು ಸ್ಯಾಂಪಲ್ ಇಲ್ಲಿದೆ. ಲಾಡೆನ್ ಹತ್ಯೆಗೆ ಎರಡು ವಾರ ಮೊದಲೇ ಅಮೆರಿಕ ತನ್ನ ಒಂದು ಹಡಗನ್ನು ಅರಬ್ಬೀಸಮುದ್ರದಲ್ಲಿ ನಿಲ್ಲಿಸಿತ್ತು, ಆದರೆ ಅದರೊಳಗಿದ್ದ ಸಿಬ್ಬಂದಿಗೆ ತಾವೇತಕ್ಕೆ ಬಂದಿದ್ದೇವೆಂಬ ವಿಚಾರ ಗೊತ್ತಿರಲೇ ಇಲ್ಲ, ಅವರೆಲ್ಲ ಸಮುದ್ರಕ್ಕೆ ಹಾರಿ ಈಜು ಹೊಡೆಯುತ್ತಾ ಆರಾಮಾಗಿದ್ದರು.

ಮೇ 1ರಂದೇ ಇವರಿಗೆಲ್ಲ ತಾವು ಬಂದ ಕೆಲಸದ ಅರಿವಾದದ್ದು, ಅಂದಹಾಗೆ ಲಾಡೆನ್ ಶವವನ್ನು ಇವರು ಈಜಾಡುತ್ತಿದ್ದ ಜಾಗದಲ್ಲೇ ಜಲಸಮಾಧಿ ಮಾಡಲಾಗಿದೆ.



ಸಹೋದರ-ಸಹೋದರಿಯರೊಂದಿಗೆ ಲಾಡೆನ್....

ಡಿಎನ್‌ಎ ಟೆಸ್ಟ್ ನಡೆಸಿದ ಬಗೆ...

ಲಾಡೆನ್ ಹತನಾದ ಅಂತೊಂದು ಸುದ್ದಿ ಹರಡುತ್ತಲೇ ಬಹುತೇಕರು ಅದನ್ನು ನಂಬುವ ಸ್ಥಿತಿಯಲ್ಲಿರಲಿಲ್ಲ, ಅಮೆರಿಕದ ಕುತ್ಸಿತ ಬುದ್ಧಿ ಹಾಗೂ ಲಾಡೆನ್‌ನ ಚಾಣಾಕ್ಷತನಗಳ ಅರಿವಿರುವವರೆಲ್ಲ ಬಹಳ ಸಮಯದವರೆಗೆ ಈ ಬಗೆಗೊಂದು ಗುಮಾನಿಯಿಟ್ಟುಕೊಂಡಿದ್ದರು. ಅದನ್ನೆಲ್ಲಾ ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ ಪರಿಹರಿಸಿದ್ದು ಡಿಎನ್‌ಎ ಪರೀಕ್ಷೆ ನಡೆಸುವ ಮೂಲಕ!

ಈ ಸುದ್ದಿ ತಿಳಿಯುತ್ತಲೇ 'ಅದು ಹೇಗೆ ಡಿಎನ್‌ಎ ಪರೀಕ್ಷೆ ನಡೆಸಿದರು' ಅಂತೊಂದು ಪ್ರಶ್ನೆ ಹುಟ್ಟಿಕೊಂಡಿತ್ತು, ಈ ಬಗ್ಗೆ ತಲಾಶೆಗಿಳಿದರೆ ಇಂಟರೆಸ್ಟಿಂಗ್ ಆದುದೊಂದು ಕಥೆ ತೆರೆದುಕೊಳ್ಳುತ್ತದೆ.

2001ರ ತನಕವೂ ಲಾಡೆನ್ ಹತ್ತಿರತ್ತಿರ ಸಂಬಂಧಿಕರ ವಂಶವಾಹಿಂಗಾಗಿ ಅಮೆರಿಕ ಹುಡುಕಾಡಿತ್ತು, ಆದರದಕ್ಕೆ ಪ್ರತೀ ಬಾರಿ ಸೋಲೇ ಎದುರಾಗಿತ್ತು, ತದನಂತರ ಲಾಡೆನ್ ಅಮೆರಿಕದ ಪ್ರತಿಷ್ಠೆಯ ಸಂಕೇತವಾಗಿದ್ದ ಡಬ್ಲ್ಯೂಟಿಸಿ ಕಟ್ಟಡವನ್ನೇ ಹೊಡೆದುರುಳಿಸಿದ ಬಳಿಕವಂತೂ ಆತನ ವಂಶವಾಹಿ ಹುಡುಕಾಟ ತೀವ್ರಗೊಂಡಿತ್ತು.

ಇದಾಗಿ ಕೆಲ ವರ್ಷಗಳಲ್ಲಿ ಲಾಡೆನ್ ಸಹೋದರಿಯೊಬ್ಬಳು ಅಮೆರಿಕದ ಬಾಸ್ಟನ್ ಆಸ್ಪತ್ರೆಯೊಂದರಲ್ಲಿ ಮಿದುಳು ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಳು. ಈ ವಿಚಾರ ತಿಳಿದ ಅಮೆರಿಕದ ರಕ್ಷಣಾ ಇಲಾಖೆ ಕೋರ್ಟ್‌ನಿಂದ ಆದೇಶ ಪಡೆದುಕೊಂಡು ಆಕೆಯ ಮಿದುಳು, ಮಾಂಸ, ರಕ್ತಗಳ ಸ್ಯಾಂಪಲ್ ಅನ್ನು ಶೇಖರಿಸಿಟ್ಟುಕೊಂಡಿತ್ತು, ಲಾಡೆನ್ ಪತ್ತೆಗೆ ಮಹತ್ವದ ಕುರುಹು ಸಿಕ್ಕಿತ್ತೆಂದು ಬೀಗಿದ ಅಮೆರಿಕ ಪ್ರತೀ ಸಾರಿ ಲಾಡೆನ್ ಅಡಗುದಾಣಗಳ ಮೇಲೆ ದಾಳಿ ನಡೆದಾಗಲೂ ಶವಗಳ ಸ್ಯಾಂಪಲ್ ಅನ್ನು ಲಾಡೆನ್ ಸಹೋದರಿಯ ಡಿಎನ್‌ಎಯೊಂದಿಗೆ ಸಮೀಕರಿಸುವ ಕಸರತ್ತು ವ್ಯಾಪಕವಾಗಿ ನಡೆಸುತ್ತಿತ್ತು.

ಆದರೆ ಈ ಬಾರಿ ಮಾತ್ರ ಪಾಕ್‌ನಲ್ಲಿ ಸತ್ತ ಲಾಡೆನ್‌ನ ದೇಹದ ಸ್ಯಾಂಪಲ್‌ಗೂ ಆತನ ಸಹೋದರಿಯ ವಂಶವಾಹಿಂಗೂ ಮ್ಯಾಚ್ ಆಗಿದೆ. ಆದುದರಿಂದಲೇ ಒಬಾಮಾ ಲಾಡೆನ್ ಹತನಾಗಿರುವುದು ಕಟುಸತ್ಯ ಬಿನ್‌ಲಾಡೆನ್ ಮತ್ತೆ ಭೂಮಿ ಮೇಲೆ ನಡೆದಾಡಲಾರ ಅಂತ ಎದೆತಟ್ಟಿ ಹೇಳಿದ್ದಾನೆ.



ತನ್ನ ಹೆಸರಿನ ನೋಟಿನೊಂದಿಗೇ ಹೆಣವಾದ!


ಇದು ನಿಜಕ್ಕೂ ಕಾಕತಾಳೀಯ ಘಟನೆ.

ಅಮೆರಿಕ ಪಡೆಯ ದಾಳಿಗೆ ಸಿಕ್ಕು ಸತ್ತ ಲಾಡೆನ್ ಬಳಿ 500ರ ಯೂರೋ ನೋಟೊಂದಿತ್ತು ಅಂತ ಮಾಧ್ಯಮಗಳು ಸುದ್ದಿ ಮಾಡಿದ್ದವಲ್ಲ ಅದಕ್ಕೆ ಸಂಬಂಧಿಸಿದ ಕಾಕತಾಳೀಯ ಇದು.

ಐನೂರು ಯೂರೋ ಅಂದರೆ ಭಾರತೀಯ ಮೌಲ್ಯದ ಪ್ರಕಾರ ಹತ್ತರತ್ತಿರ ಇಪ್ಪತ್ತು ಸಾವಿರವಾಗಬಹುದು. ಇದನ್ನಿಟ್ಟುಕೊಂಡು ಲಾಡೆನ್ ಪಾಕ್ ಗಡಿಯವರೆಗೆ ಹೋಗಬಹುದಿತ್ತೇ ವಿನಃ ಬೇರೇನೂ ಮಾಡಲಾಗುತ್ತಿರಲಿಲ್ಲ, ಆದರೆ ಆತನ ಬಳಿ ಸಿಕ್ಕ 500ರ ಯೂರೋ ನೋಟಿನ ಹಿಂದೆ ರೋಚಕವಾದೊಂದು ಕಥೆಯೇ ಇದೆ.

ಯೂರೋಪ್ ರಾಷ್ಟ್ರಗಳಲ್ಲಿ ಈ 500ರ ಯೂರೋ ನೋಟು ಡ್ರಗ್ ಡೀಲರ್‌ಗಳು, ಕ್ರಿಮಿನಲ್‌ಗಳು ಹಾಗೂ ಭೂಗತರ ಕೈವಶವಾಗಿದೆ. ಆದುದರಿಂದಲೇ ಜನಸಾಮಾನ್ಯರ ಕೈಗೆ ಈ ನೋಟು ಸಿಗುತ್ತಿರಲಿಲ್ಲ, ಇಂಥಾ ಸ್ಥಿತಿಯಿಂದಾಗಿಯೇ ಆ ಭಾಗದ ಜನರು 500ರ ಯೂರೋ ನೋಟಿಗೆ 'ಬಿನ್‌ಲಾಡೆನ್' ಅಂತಲೆ ಹೆಸರಿಟ್ಟಿದ್ದರು. ಅವರ ಪಾಲಿಗೆ ಆ ನೋಟು ಅಕ್ಷರಶಃ ಲಾಡೆನ್‌ನಂತೆಯೇ. ಅದರ ಬಗ್ಗೆ ಕೇಳಿದ್ದರು, ಅದು ಹೇಗಿರುತ್ತದೆ ಎಂದು ನೋಡಿದ್ದರು. ಆದರದು ಕೈಗೆ ಸಿಗುತ್ತಿರಲಿಲ್ಲ!

ಸಂಗ್ರಹ : ಸಂತೋಷ್ ಬಾಗಿಲಗದ್ದೆ



ಅರಬ್ಬೀ ಸಮುದ್ರವೀಗ ಹುತಾತ್ಮ ಸಾಗರ!


ಅಮೆರಿಕ ಲಾಡೆನ್ ಶವವನ್ನು ಅರಬ್ಬಿ ಸಮುದ್ರಕ್ಕೆಸೆದು ಜಲಸಮಾಧಿ ಮಾಡಿದ್ದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೆ ಯಾವ ಕಾರಣಕ್ಕಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿತ್ತೋ, ಅದೀಗ ಸಂಪೂರ್ಣ ಉಲ್ಟಾ ಹೊಡೆದಿದೆ.

ಅಮೆರಿಕ ಲಾಡೆನ್ ಶವಕ್ಕೆ ಈ ರೀತಿಯ ಅಂತ್ಯ ಕಾಣಿಸಲು ನಿರ್ಧರಿಸಿದ್ದಕ್ಕೆ ಏನೇ ಕಾರಣ ನೀಡಿದರೂ ಕೂಡಾ, ಭೂಮಿ ಮೇಲೆ ಅಂತ್ಯಸಂಸ್ಕಾರ ನೆರವೇರಿಸಿದರೆ ಅದೇ ಕೆಲವರ ಪಾಲಿಗೆ ಪುಣ್ಯಭೂಮಿಯಾಗಿ ಬದಲಾಗಬಹುದೆಂಬ ಭೀತಿ- ಪ್ರಮುಖ ಕಾರಣ. ಆದರೀಗ ಹಲವಾರು ಮುಸ್ಲಿಂ ದೇಶಗಳ ಲಾಡೆನ್ ಅನುಯಾಯಿಗಳು ಆತನ ಶವ ಬಿಸಾಡಿದ ಅರಬ್ಬೀ ಸಮುದ್ರವನ್ನು 'ಹುತಾತ್ಮನ ಸಾಗರ' ಅಂತಲೇ ಕರೆಯಹತ್ತಿದ್ದಾರೆ!

ಇನ್ನೊಂದು ಕಡೆ ಅಬೋಟಾಬಾದ್‌ನಲ್ಲಿ ಲಾಡೆನ್ ಹತನಾದ ಮನೆಯೇ ಈಗ ಪ್ರವಾಸಿತಾಣವಾಗಿ ಬದಲಾಗಿದೆ. ಅಲ್ಲಿ ಕಿಕ್ಕಿರಿಯುವ ಜನಸಂದಣಿ ಇನ್ನೂ ಕರಗಿಲ್ಲ, ಅಮೆರಿಕ ತನ್ನದೇ ಹೆಲಿಕಾಪ್ಟರ್ ಕೆಟ್ಟಾಗ ಉಡಾಯಿಸಿತ್ತಲ್ಲ? ಅದರ ಅವಶೇಷಗಳನ್ನು ಸಂಗ್ರಹಿಸಿ ಅಮೂಲ್ಯವಸ್ತುಗಳಂತೆ ಮಾರಾಟ ಮಾಡುವ ಕೆಲಸವೂ ಶುರುವಾಗಿದೆ.

ಲಾಡೆನ್ ಹೆಂಡತಿಗಾಗಿ ಅಮೆರಿಕ-ಪಾಕ್ ಕದನ

ಲಾಡೆನ್ ಸಾಯುವಾಗ ಆತನ ಜೊತೆಗಿದ್ದು ಗಾಯಗೊಂಡಿರುವ ಮುದ್ದಿನ ಹೆಂಡತಿ ಅಮಲ್ ಅಲ್ ಸದಾಗಾಗಿ ಈಗ ಪಾಕ್-ಅಮೆರಿಕದ ನಡುವೆ ಕದನವೇ ಆರಂಭವಾಗಿದೆ.



ದಾಳಿ ಸಂದರ್ಭದಲ್ಲಿ ಅಮೆರಿಕ ಪಡೆಗಳು ಸಿಡಿಸಿದ ಗುಂಡು ಆಕೆಯ ಕಾಲು ಹೊಕ್ಕಿತ್ತು, ಕಮಾಂಡೋಗಳು ಈಕೆಯನ್ನು ವಿಚಾರಣೆಗೆ ಕರೆದುಕೊಂಡು ಹೋಗಬೇಕೆಂದು ಕೊಂಡಿದ್ದರು. ಆದರೆ ಒಂದು ಕಾಪ್ಟರ್ ಕೈಕೊಟ್ಟು ಇನ್ನೊಂದೇ ಉಳಿದಿತ್ತು ಅದರಲ್ಲಿ ಅಷ್ಟೂ ಜನ ಅಮೆರಿಕಾದ ಸೈನಿಕರು ಮತ್ತು ಲಾಡೆನ್‌ನ ಶವ ಸಂಚರಿಸುವುದು ಸಾಧ್ಯವಿರಲಿಲ್ಲ, ಆದುದರಿಂದ ಅಮಲ್‌ಳನ್ನು ಪಾಕ್‌ನಲ್ಲಿಯೇ ಬಿಟ್ಟು ಹೋಗಿದ್ದರು.


ಆಕೆಯೀಗ ರಾವಲ್ಪಿಂಡಿಯ ಆರ್ಮಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿದ್ದಾಳೆ. ಪಾಕ್ ಆಕೆಯನ್ನು ಆದಷ್ಟು ಬೇಗ ಬೇರೆ ದೇಶಕ್ಕೆ ಸಾಗಹಾಕಲು ಹವಣಿಸುತ್ತಿದೆ. ಯಾಕೆಂದರೆ ಅಮೆರಿಕವೇನಾದರೂ ಆಕೆಯ ವಿಚಾರಣೆ ನಡೆಸಿದರೆ ಪಾಕ್‌ಗೆ ಮುಜುಗರವಾಗುವಂಥ ಅನೇಕ ಸಂಗತಿಗಳು ಹೊರಬರುತ್ತವೆ. ಆದರೆ ಲಾಡೆನ್ ಬಗೆಗೆ ವಿಸ್ತೃತ ಮಾಹಿತಿ ಕಲೆಹಾಕಲು ಕಾತರಿಸುತ್ತಿರುವ ಅಮೆರಿಕ ಅಮಲ್‌ಳನ್ನು ತನ್ನ ಸುಪರ್ದಿಗೊಪ್ಪಿಸುವಂತೆ ಕೇಳುತ್ತಲೇ ಇದೆ. ಪಾಕ್ ನುಣುಚಿಕೊಳ್ಳುವ ದಾರಿ ಹುಡುಕುತ್ತಿದೆ.

ಅಮೆರಿಕಕ್ಕೆ ಅಮಲ್ ಅವಶ್ಯವಾಗಿ ಬೇಕಿರುವುದರಿಂದ ಪಾಕ್‌ನೊಂದಿಗಿನ ತನ್ನ ಬಾಂಧವ್ಯ ಹಾಳಾದರೂ ಆಶ್ಚರ್ಯವಿಲ್ಲ.











ಲಾಡೆನ್ ಸಾವಿನ ನಂತರ ಜಗತ್ತಿನ ಬಹುತೇಕ ಪ್ರತಿಷ್ಠಿತ ಪತ್ರಿಕೆಗಳ ಪುಟಗಳು ಆ ಸುದ್ದಿಯಿಂದಲೇ ತುಂಬಿಹೋಗಿದ್ದವು. ಅದರಲ್ಲಿ ಹೆಚ್ಚಿನವು ಲಾಡೆನ್ ಸಾವನ್ನ ಸ್ವಾಗತಿಸಿವೆ. ಅಮೆರಿಕವನ್ನು ಬೆಂಬಲಿಸಿವೆ. ಮುಸ್ಲಿಂ ರಾಷ್ಟ್ರಗಳ ಕೆಲವೇ ಕೆಲ ಪತ್ರಿಕೆಗಳು ಮಾತ್ರ ಲಾಡೆನನ್ನು ಹುತಾತ್ಮನಂತೆ ಬಣ್ಣಿಸಿವೆ. ಆ ಝಲಕುಗಳು ಇಲ್ಲಿವೆ....



















ಲಾಡೆನ್ ಹತ್ಯೆ ಯಾರ ಗೆಲುವು?

ಜನಸಾಮಾನ್ಯರಿಗೆ ನಿರಾಳತೆಯ ಭಾವನೆ!

ಸಾಮಾನ್ಯ ಅಮೆರಿಕನ್ನರಿಗೆ ಸೇಡು ತೀರಿಸಿದ ತೃಪ್ತಿ!!

ಬರಾಕ್ ಒಬಾಮಗೆ ಮುಂದಿನ ಎಲೆಕ್ಷನ್‌ನಲ್ಲಿ ಗೆಲುವು ಗ್ಯಾರಂಟಿಯಾದ ಖುಷಿ!!!

ಮೀಡಿಯಾಗಳಿಗೆ ಸಖತ್ ಸೆನ್ಸೇಷನಲ್ ಸುದ್ದಿ ಆಹಾರವಾಗಿ ಸಿಕ್ಕ ಸಂಭ್ರಮ. ಅವರಿಗೆ ಇನ್ನೊಂದು ವಾರ ಊಟದ ಯೋಚನೆ ಇರುವುದಿಲ್ಲ.

-ಹೀಗೆ ಅನೇಕರಿಗೆ ಒಂದಲ್ಲ ಒಂದು ತರದ **incentive** ಸಿಕ್ಕಂತಾಗಿದೆ ಲಾಡೆನ್ ಹತ್ಯೆ. ಐವತ್ತನಾಲ್ಕು ವರ್ಷದ ಒಸಾಮ ಬಿನ್ ಲಾಡೆನ್ ಕಳೆದ ಒಂದೂವರೆ ದಶಕದಿಂದ ಅಮೆರಿಕನ್ ಸರ್ಕಾರದ ನಿದ್ದೆಗೆಡಿಸಿದ್ದ. ಜಗತ್ತಿನ ಸೂಪರ್ ಪೊಲೀಸ್‌ನಂತೆ ವರ್ತಿಸುವ ಅಮೆರಿಕಾದ ಮಿಲಿಟರಿ ಶಕ್ತಿಯೆದುರು ಸವಾಲಿನಂತೆ ಬೆಳೆದಿದ್ದ. ಹಾಗೆ ನೋಡಿದರೆ ಅಮೆರಿಕಾವನ್ನು ವಿರೋಧಿಸುವ ಜನತೆ, ಸಂಘಟನೆಗಳು, ಹೋರಾಟಗಳು ಜಗತ್ತಿನೆಲ್ಲೆಡೆ ಇದ್ದೇ ಇವೆ. ಇರಾನ್, ಪಾಲೆಸ್ಟೀನ್, ವೆನೆಜುಲಾ, ಬೊಲಿವಿಯಾ, ಉತ್ತರ ಕೊರಿಯಾ ದೇಶಗಳ ಸರ್ಕಾರಗಳೇ ಅಮೆರಿಕಾ ವಿರುದ್ಧ ನಿತ್ಯ ಸೆಣಸಾಡುತ್ತಿವೆ. ಅಮೆರಿಕಾದ ಪಾದಸೇವೆ ಮಾಡುತ್ತಾ ತಮ್ಮ ಜನ್ಮ ಪಾವನವಾಯಿತೆಂದು ಹಿಗ್ಗುವ ಇಂಡಿಯಾದ ಗುಲಾಮಿ ಸರ್ಕಾರಗಳಂತವರೂ ಇಲ್ಲಿ ಅನೇಕರಿದ್ದಾರೆ. ಜಗತ್ತಿನಾದ್ಯಂತ ಕನಿಷ್ಠ ನೂರು ಕಡೆ ತನ್ನ ಮಿಲಿಟರಿ ಬೇಸ್‌ಗಳನ್ನು ನಿರ್ಮಿಸಿಕೊಂಡಿರುವ ಅಮೆರಿಕಾ ಸೇನೆಯು ಬಲ ಲಾಡೆನ್‌ನಂತಹ ಉಗ್ರರನ್ನು ಕೊಲ್ಲುವಷ್ಟೇ ಸಲೀಸಾಗಿ ನ್ಯಾಯವಂತ ನಾಯಕರನ್ನೂ ಕೊಂದು ಬಿಸಾಡುತ್ತಿವೆ. ತನ್ನ ಹಿತಾಸಕ್ತಿಗೆ ಅಡ್ಡಬರುವ ಆಯಾ ದೇಶಗಳ ಸರ್ಕಾರ ಹಾಗೂ ನಾಯಕರ ತಲೆ ತೆಗೆಯುವುದಿರಲಿ, ಅಮಾಯಕ ಜನರನ್ನು ಸುಟ್ಟು ಕರಕಲಾಗಿಸುತ್ತಿವೆ. ಆ ಲೆಕ್ಕದಲ್ಲಿ ಹೇಳಬೇಕೆಂದರೆ ಭಯೋತ್ಪಾದಕ ಲಾಡೆನ್ 9/11 ದಾಳಿಯಲ್ಲಿ ಅಮೆರಿಕಾದ ಮೂರು ಸಾವಿರ ಜನರ ಸಾವಿಗೆ ಹೊಣೆಯಾಗಿದ್ದ. ಆದರೆ ಅದೇ ಅಮೆರಿಕಾ 9/11 ನಂತರ ಇರಾಕ್, ಅಫ್ಘಾನಿಸ್ತಾನ ಹಾಗೂ ಪಾಕಿಸ್ತಾನಗಳಲ್ಲಿ ಕೊಂದು ಕೆಡವಿರುವ ಜನರ ಸಂಖ್ಯೆ ಹತ್ತು ಲಕ್ಷ ಮೀರುತ್ತದೆ.

ತಣ್ಣಗೆ ನಡೆದಿರುವ ಈಗಲೂ ನಡೆಯುತ್ತಿರುವ ಸಾಮೂಹಿಕ ಹತ್ಯಾಕಾಂಡ ಅದು.

ಲಾಡೆನ್ ಭಯೋತ್ಪಾದನೆಯ ಹೆಸರಿನಲ್ಲಿ ಏನು ಮಾಡಿದನೋ ಅದನ್ನೇ ಅಮೆರಿಕಾ ಸರ್ಕಾರ ಶಾಂತಿಗಾಗಿ ಯುದ್ಧದ ಹೆಸರಿನಲ್ಲಿ ಮಾಡಿ ಮುಗಿಸಿದೆ.

ಕಳೆದ ಹತ್ತು ವರ್ಷಗಳ ಲಾಡೆನ್‌ಗಾಗಿನ ಹುಡುಕಾಟ ಮೊನ್ನೆ ಮೇ 1-2 ರ ಮಧ್ಯರಾತ್ರಿ ಕೊನೆಗೊಳ್ಳುತ್ತಿರುವಾಗಲೂ ಸಾಮಾನ್ಯ ನಾಗರಿಕರ ಮೇಲಿನ ಅಮೆರಿಕನ್ ಸೈನ್ಯದ ದಾಳಿ ನಿಂತಿರಲಿಲ್ಲ. ಪೈಲೆಟ್ ರಹಿತ, ಕಂಪ್ಯೂಟರೈಸ್ಡ್ ಡ್ರೋಣ್ ವಿಮಾನದ ಮೂಲಕ ಮೇ 1 ರಂದೇ ಬಾಂಬ್ ದಾಳಿ ನಡೆಸಿ ತನ್ನ ಅಫ್ಘಾನ್ ಮಿತ್ರಪಡೆಯ ಹತ್ತು ಸೈನಿಕರನ್ನೇ ಅಮೆರಿಕನ್ನರು ಕೊಂದು ಕೆಡವಿದ್ದರು. ಆದರೆ ಅದ್ಯಾವುದೂ 'ಭಯ' ಉಂಟುಮಾಡುವ ಸುದ್ದಿಯೆಂಬಂತೆ ಬಿಂಬಿತವಾಗುವುದೇ ಇಲ್ಲ.

ಲಾಡೆನ್ ತಪ್ಪಿಸಿಕೊಂಡ ಸಾವುಗಳು

ಇಸ್ಲಾಮಾಬಾದಿನಿಂದ ಕೇವಲ 60 ಮೈಲು ದೂರದ ಅಬೋಟಾಬಾದ್‌ನಲ್ಲಿ ಸಿಕ್ಕಿಬೀಳುವ ಮುನ್ನ ಬಿನ್ ಲಾಡೆನ್ ಕನಿಷ್ಠ ಒಂದು ಡಜನ್ ಬಾರಿಯಾದರೂ ಸಾವಿನಿಂದ ಪಾರಾಗಿ ಹೋಗಿದ್ದ. 1853 ರಲ್ಲಿ ಬ್ರಿಟಿಷ್ ಸೈನ್ಯಾಧಿಕಾರಿ ಮೇಜರ್ ಜೇಮ್ಸ್ ಅಬೋಟ್ ಎನ್ನುವವನು ನಿರ್ಮಿಸಿದ್ದ ಚಿಕ್ಕ ಟೌನ್ ನಂತರ ಅಬೋಟಾಬಾದ್ ಆಗಿತ್ತು. ನಮ್ಮಲ್ಲಿಯ ಕಾಕ್ಸ್‌ಟೌನ್, ದಾಬಸ್‌ಪೇಟೆ ತರ. ಈ ಅಬೋಟಾಬಾದ್‌ನ ಒಟ್ಟು ಜನಸಂಖ್ಯೆ ಒಂದು ಲಕ್ಷವೂ ಇಲ್ಲ. ಜೊತೆಗೆ ಪಾಕಿಸ್ತಾನದ ಮಿಲಿಟರಿ ತರಬೇತಿ ಅಕಾಡಮಿಯೂ ಅಲ್ಲೇ ಇದೆ. ಅಷ್ಟೇ ಅಲ್ಲ, ಯಾವ ಮನೆಯಲ್ಲಿ ಲಾಡೆನ್ ಇದ್ದನೋ ಅದೇ ಮನೆಯನ್ನು ಅನುಮಾನದ ಕಾರಣಕ್ಕೆ ಪಾಕಿಸ್ತಾನಿ ಪೊಲೀಸರು 2003 ರಲ್ಲೊಮ್ಮೆ ತಲಾಶ್ ಮಾಡಿದ್ದರಂತೆ. ಆದರೂ ಲಾಡೆನ್ ಅಲ್ಲೇ ಐದು ವರ್ಷ ಕಾಲ ನಿರಾಳವಾಗಿದ್ದ ಎಂದರೆ ಆಶ್ಚರ್ಯವಾಗದಿರದು.

ಹಾಗೆ ನೋಡಿದರೆ ಸಾವೆಂಬುದು ಅನೇಕ ಸಾರಿ ಅವನ ಸನಿಹದಲ್ಲೇ ಹಾದು ಹೋಗಿತ್ತು. 2001 ರ ಸೆಪ್ಟೆಂಬರ್ 9 ರಂದು ಅಮೆರಿಕಾ ಮೇಲೆ ದಾಳಿ ಮಾಡಿಸಿದ ನಂತರ ಲಾಡೆನ್ ಅಫ್ಘಾನಿಸ್ತಾನದಲ್ಲಿದ್ದ. ಆದರೆ ಅದಕ್ಕೂ ಮೊದಲಿಂದಲೇ ಲಾಡೆನ್ ಕೊಲೆಗೆ ಅಮೆರಿಕನ್ನರು ಪ್ರಯತ್ನ ನಡೆಸಿದ್ದರು.



1998 ರ ಆಗಸ್ಟ್ 20 ರಂದು ಅರಬ್ಬೀ ಸಮುದ್ರದಲ್ಲಿದ್ದ ಅಮೆರಿಕನ್ ಯುದ್ಧ ನೌಕೆಯೊಂದು ನೂರಾರು ಕಿಲೋಮೀಟರ್ ದೂರದಲ್ಲಿದ್ದ ಅಫ್ಘಾನಿಸ್ತಾನದ ಖೋಸ್ತ್ ಪ್ರದೇಶಕ್ಕೆ ಕ್ಷಿಪಣಿಯೊಂದನ್ನು ಉಡಾಯಿಸಿತ್ತು. ಅವತ್ತು ಲಾಡೆನ್ ದಾಳಿ ಬರುವ ಕೆಲವೇ ಗಂಟೆಗಳ ಮೊದಲು ಆ ಸ್ಥಳದಿಂದ ಹೊರಟು ಹೋಗಿದ್ದನಂತೆ. 2000 ರಲ್ಲೊಮ್ಮೆ ಅಫ್ಘಾನಿಸ್ತಾನದ ಗುಡ್ಡಗಾಡಿನಲ್ಲಿ ಲಾಡೆನ್ ಮತ್ತವನ ಜೊತೆಗಾರರು ಕೆಲವು ಗಾಡಿಗಳಲ್ಲಿ ಪ್ರಯಾಣಿಸುತ್ತಿದ್ದಾಗಲೂ ಉಪಗ್ರಹದ ಮೂಲಕ ಪತ್ತೆಹಚ್ಚಿ ರಾಕೆಟ್ ಪ್ರೊಪೆಲ್ಡ್ ಗ್ರೆನೈಡ್ ಹಾರಿಸಿ ದಾಳಿ ನಡೆಸಿತ್ತು. ಆಗಲೂ ಲಾಡೆನ್ ಇದ್ದ ಕಾರ್‌ಗೆ ಪೆಟ್ಟು ತಾಕದೆ ಅವನು ಪಾರಾಗಿದ್ದ. 2001 ರಲ್ಲಂತೂ ಮತ್ತೆ ಅಫ್ಘಾನಿಸ್ತಾನದ ತೋರಾ-ಬೋರಾ ಗುಡ್ಡಗಾಡಿನಲ್ಲಿ ಯುದ್ಧ ಶುರುವಾದಾಗ ಲಾಡೆನ್ ಅದರಲ್ಲಿನ ಗುಹೆಗಳಲ್ಲಿ ಇರುತ್ತಿದ್ದ. ಒಮ್ಮೆ ಅವನು ಜೊತೆಗಾರರೊಂದಿಗೆ ಗುಹೆಯೊಂದರೊಳಗೆ ನುಸುಳುತ್ತಿದ್ದುದ್ದನ್ನು ಪತ್ತೆಹಚ್ಚಿ ಬಾಂಬ್ ಹಾಕಿದರಾದರೂ ಲಾಡೆನ್ ಬದುಕುಳಿದಿದ್ದ. ಅದಕ್ಕೂ ಮುನ್ನ ಅಫ್ಘಾನಿಸ್ತಾನದಲ್ಲಿದ್ದ ನ್ಯಾಟೋ ಸೈನಿಕರ ಪೈಕಿ ಫ್ರೆಂಚ್ ಸೈನಿಕರಿಗೆ ಎರಡು ಬಾರಿ ಲಾಡೆನ್‌ನನ್ನು ಬಂಧಿಸುವ ಅಥವಾ ಕೊಲ್ಲುವ ಅವಕಾಶ ಸಿಕ್ಕಿತ್ತು. ಆದರೆ ಅಮೆರಿಕಾದ ಸೇನಾ ಅಧಿಕಾರಿಗಳು ಅದಕ್ಕೆ ಅನುಮತಿ ನೀಡಿರಲಿಲ್ಲ. 2001 ರ ಜುಲೈನಲ್ಲಿ ಕಿಡ್ನಿ ತೊಂದರೆಯಿಂದ ಅಫ್ಘಾನಿಸ್ತಾನದ ಆಸ್ಪತ್ರೆಯಲ್ಲಿದ್ದ ಲಾಡೆನ್‌ನನ್ನು ಕಂಡು ಆರೋಗ್ಯ ವಿಚಾರಿಸಲು ಅಮೆರಿಕನ್ ಮಿಲಿಟರಿ ಆಫೀಸರ್‌ಗಳೇ ಬಂದುಹೋಗುತ್ತಿದ್ದ ವಿಚಾರ ಈಗ ಗುಟ್ಟಾಗೇನೂ ಉಳಿದಿಲ್ಲ. ಅಂದರೆ ಅಮೆರಿಕಾಗೆ ಲಾಡೆನ್ ತಮ್ಮ ನಿಯಂತ್ರಣದೊಳಗೆ ಇರುವುದಾಗಿದ್ದರೆ ಶತ್ರು ಎನಿಸಿಕೊಳ್ಳುತ್ತಿರಲಿಲ್ಲವೇನೋ. ಆದರೆ 9/11 ದಾಳಿ ಅವರ ಮಧ್ಯದ ಸಂಬಂಧವನ್ನು ತಿರುಗಾಮುರುಗಾಗಿಸಿತ್ತು.

ತಂತ್ರ ಪ್ರತಿತಂತ್ರ

ಲಾಡೆನ್ ಈ ಹತ್ತು ವರ್ಷ ಕಾಲ ತನ್ನ ಶತ್ರುಗಳ ಕೈಗೆ ಸಿಗದಂತೆ ಇರಲು ಸಾಧ್ಯವಾಗಿದ್ದೇ ಅವನು ಬಳಸಿದ ಯುದ್ಧ ತಂತ್ರಗಳಿಂದ. ಅವನೆಂದೂ ಮೊಬೈಲ್ ಅಥವಾ ಇಂಟರ್‌ನೆಟ್ ಬಳಸದೆ ಇರುವುದು ಅಮೆರಿಕನ್ನರಿಗೆ ಗೊತ್ತಾಗಿತ್ತು. ಅಕಸ್ಮಾತ್ ಲಾಡನ್ ಮೊಬೈಲ್ ಉಪಯೋಗಿಸುತ್ತಿತ್ತು. ಅವನ ಬಣದ ಯಾರಾದರೂ ಅರೆಸ್ಟಾದಾಗ ಆ ಫೋನ್ ನಂಬರ್ ಪತ್ತೆಯಾಗುವ ಚಾನ್ಸ್ ಇರುತ್ತಿತ್ತು. ಆದಾದ ಹತ್ತೇ ನಿಮಿಷದಲ್ಲಿ ಲಾಡೆನ್ ಇರುವ ಸ್ಥಳ ಪತ್ತೆಹಚ್ಚಿ ಬಾಂಬ್ ಹಾಕಿ ಕೊಲ್ಲುವಷ್ಟು ಟೆಕ್ನಾಲಜಿ ಇವತ್ತು ಲಭ್ಯವಿದೆ. ಹಾಗಾಗಿ ಲಾಡೆನ್ ಬಳಿ ಬಂದೂಕಿರುತ್ತಿತ್ತಾಗಲಿ ಮೊಬೈಲ್ ಅಲ್ಲ. ಆದರೆ ಮಾಹಿತಿ ವಿನಿಮಯಕ್ಕಾಗಿ ಲಾಡೆನ್ ಮತ್ತವರ ಬಂಟರು ಕೊರಿಯರ್ ಪದ್ಧತಿ ಬಳಸಲು ಶುರು ಮಾಡಿದ್ದರು.

ಇದೇ ಕೊರಿಯರ್‌ಗಳು ಅಂದರೆ ಮಾಹಿತಿ ರವಾನೆಗಾರರು ಕೊನೆಗೆ ಲಾಡೆನ್‌ಗೆ ಸಾವು ತಂದರು.

ಈ ಕತೆ ಇಂಟರೆಸ್ಟಿಂಗಾಗಿದೆ.

9/11 ನಂತರ ಅಮೆರಿಕನ್ನರು ನೂರಾರು ಶಂಕಿತ ಉಗ್ರರನ್ನು ಬಂಧಿಸಿ ಕ್ಯೂಬಾದ ಗ್ವಾಂಟನಮೋ ದ್ವೀಪ ಜೈಲಿನಲ್ಲಿರಿಸಿ ವಿಚಾರಣೆ ನಡೆಸುತ್ತಿದ್ದರು. ಅಂತ ಬಂಧಿತರ ಪೈಕಿ ಕೆಲವರು ಶೇಕ್ ಅಬು ಅಹಮದ್ ಅಲಿಯಾಸ್ ಆಲ್ ಕುವೈತಿ ಎಂಬುವನ ಬಗ್ಗೆ ಹೇಳಿದ್ದರು. ಅವನು ಅಲ್ ಕೈದಾ ನಾಯಕರ ನಡುವೆ ಮಾಹಿತಿ ವಿನಿಮಯ ಮಾಡುವ ಕೊರಿಯರ್ ಎಂಬುದು ತನಿಖಾಧಿಕಾರಿಗಳಿಗೆ ಗೊತ್ತಾಯಿತು. ನಂತರ 2004 ರಲ್ಲಿ ಹಸನ್ ಗುಲ್ ಎನ್ನುವ ಇನ್ನೊಬ್ಬ ಅಲ್ ಕೈದಾ ನಾಯಕ ಇರಾಕ್‌ನಲ್ಲಿ ಸೆರೆಸಿಕ್ಕ. ಈ ಹಸನ್ ಸಿಐಎಗೆ ಈ ಕುವೈತಿಯು ಅಲ್ ಕೈದಾದ ಕಮಾಂಡರ್ ಫರಾಜ್ ಕಮಾಂಡರ್ ಫರಾಜ್ ಆಲ್ ಲಿಬಿಗೆ ಹತ್ತಿರದವನೆಂದು ಬಾಯಿಬಿಟ್ಟ. ನಂತರ ಆಲ್ ಲಿಬಿಯಾ ಸೆರೆ ಸಿಕ್ಕಾಗ ತನಗೆ ಕೊರಿಯರ್‌ಗಳ ಮೂಲಕ ಉನ್ನತ ನಾಯಕರ ಆದೇಶಗಳು ತಲುಪುತ್ತಿದ್ದರೆಂದು ಒಪ್ಪಿಕೊಂಡಿದ್ದ. ಹಾಗೆ ಕೈದಾ ಲೀಡರ್‌ಗಳ ಆದೇಶಗಳನ್ನು ತಲುಪಿಸುತ್ತಿದ್ದವನೇ ಈ ಅಬು ಅಹಮದ್ ಅಲಿಯಾಸ್ ಆಲ್ ಕೂವೈತಿ.

ಈ ಸುದ್ದಿ ಖಚಿತವಾದ ತಕ್ಷಣ ನೂರಾರು ಅಮೆರಿಕನ್ ಏಜೆಂಟರು ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನದಲ್ಲಿ ಅಬು ಅಹ್ಮದ್‌ಗಾಗಿ ಹುಡುಕಾಡಲು ಪ್ರಾರಂಭಿಸಿದರು. ಅವನ ಕುವೈತ್ ದೇಶದಲ್ಲಿದ್ದ ಮನೆ ಹಾಗೂ ಕುಟುಂಬದವರ ಮೇಲೂ ನಿಗಾ ಇಟ್ಟರು. ಫೋನ್ ಕದ್ದಾಲಿಸಲು ಶುರು ಮಾಡಿದರು. ಅದು ಕೊನೆಗೂ ಫಲ ನೀಡಿತು. ಅಬು ಅಹಮದ್ ಪಾಕಿಸ್ತಾನದ ಪೇಶಾವರ್‌ನಲ್ಲೇ ಇದ್ದ. ಅವನನ್ನು ಪತ್ತೆಹಚ್ಚಿದ ಸಿಐಎ ಗೂಢಾಚಾರರು ಅಬುನ ಬಿಳಿಯ ಸುಝುಕಿ ಕಾರ್‌ನ ಓಡಾಟದ ಬಗ್ಗೆ ಕಣ್ಣಿಟ್ಟರು. ಒಮ್ಮೆ ಅಬು ಅದೇ ಕಾರ್‌ನಲ್ಲೇ ಅಬೋಟಾಬಾದ್‌ಗೆ ಹೋದ. ಕಾರ್ ನೇರ ಲಾಡೆನ್ ಅಡಗಿದ್ದ ಮನೆಯೊಳಗೇ ಹೋಯಿತು. ಹೊರಗೆ ಸಿಐಎ ಏಜೆಂಟರು ವಾಚ್ ಮಾಡುತ್ತಿರುವ ಪರಿವೆಯೇ ಇರದ ಅಬು ತನ್ನ ಕೆಲಸ ಮುಗಿಸಿ ಹೊರಟ.

ಅವತ್ತೇ ಸಿಐಎಗೆ ಅನುಮಾನ ಹೆಚ್ಚಾಯಿತು. ಅವರ ಅನುಮಾನಕ್ಕಿದ್ದ ಇನ್ನೊಂದು ಕಾರಣ ಏನೆಂದರೆ ಅಲ್ ಕೈದಾದ ಇನ್ನೊಬ್ಬ ನಾಯಕ ಆಲ್ ಲಿಬಿಯಾ ಅರೆಸ್ಟಾಗುವ ಮುನ್ನ ಅದೇ ಮನೆಯಲ್ಲಿದ್ದ ವಿಚಾರ ಅಮೆರಿಕನ್ನರಿಗೆ ಗೊತ್ತಾಗಿತ್ತು.

ಈಗ ಲಾಡೆನ್ ಅದೇ ಮನೆಯಲ್ಲಿದ್ದ.

ಗೆರೆನಿರೊ EKTAಗೆ ಮುನ್ನ

ಲಾಡೆನ್ ಮನೆಯ ಮೇಲಿನ ದಾಳಿಗೆ ಮೊದಲು ನಡೆದ ತಯಾರಿಗಳ ಕತೆ ಆಶ್ಚರ್ಯ ಮೂಡಿಸುವಂತಿದೆ. ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ನೇವಿ ಸೀಲ್ಸ್ ಎಂಬ ಅಮೆರಿಕನ್ ಕಮಾಂಡೋಗಳ ಬಗ್ಗೆ, ಸಿಐಎ ಬಗ್ಗೆ ಅಮೆರಿಕಾದ ಡ್ರೋಣ್ ವಿಮಾನಗಳ ಬಗ್ಗೆ ಬಹುತೇಕರಿಗೆ ಗೊತ್ತಿರುತ್ತದೆ. ಆದರೆ NCTC ಎಂಬ ಸಂಸ್ಥೆಯು ಮಾಡಿದ ಕೆ[illegible]ದ ಬಗ್ಗೆ ಹೆಚ್ಚು ಗೊತ್ತಾಗಿರಲಿಲ್ಲ. ವರ್ಜೀನಿಯಾ ರಾಜ್ಯದ ರೊಸಿಲಿಯಾನ್‌ನಲ್ಲಿರುವ ನ್ಯಾಷನಲ್ ಕೌಂಟರ್ ಟೆರರಿಸಂ ಸೆಂಟರ್ (NCTC) ಸಂಸ್ಥೆ ದಾಳಿಗೂ ಮುನ್ನ ಕಮಾಂಡೋಗಳಿಗೆ ಅನೇಕ ರೀತಿ ನೆರವಾಗಿತ್ತು. ಉಪಗ್ರಹಗಳ ನೆರವಿನಿಂದ ಲಾಡೆನ್‌ನ ಕೊರಿಯರ್ ಅಬು ಅಹ್ಮದ್‌ನ ಚಲನವಲನಗಳನ್ನು ತಿಳಿಯಲು, ಅವನ ಕಾರ್ ಎಲ್ಲಿದೆ, ಎಲ್ಲೆಲ್ಲಿಗೆ ಹೋಗುತ್ತದೆಯೆಂದು ನಿಗಾ ಇಡಲು NCTC ನೆರವಾಯಿತು. ಅಂತಿಮವಾಗಿ ಲಾಡೆನ್ ಮನೆಗೇ ಕಮಾಂಡೋಗಳು ನುಗ್ಗುವ ಗಳಿಗೆ ಹತ್ತಿರಾಗುತ್ತಿದ್ದಾಗ ಈ NCTC ಲಾಡೆನ್‌ನ ಮನೆಯ ಪ್ರತಿಕೃತಿಯೊಂದನ್ನೇ ರಚಿಸಿ ನೀಡಿತ್ತು. ಸ್ಯಾಟಲೈಟ್ ಮೂಲಕ ಅಬೋಟಾಬಾದ್‌ನ ಲಾಡೆನ್ ಮನೆಯ ಮೂಲೆಮೂಲೆಗಳ ಚಿತ್ರಗಳನ್ನು ತೆಗೆದು ಜೋಡಿಸಿ ಅಮೆರಿಕಾದಲ್ಲೇ ಮನೆಯ ರೂಪುರೇಷೆ ತಯಾರಿಸಲಾಗಿತ್ತು. ಸೀಲ್ಸ್ ಕಮಾಂಡೋಗಳು ದಾಳಿಯ ರಿಹರ್ಸಲ್ ನಡೆಸಲು ಅಂತದ್ದೇ ಕೃತಕ ಮನೆ ನಿರ್ಮಿಸಿ ತರಬೇತಿ ಪಡೆದಿದ್ದರು. ಕೊನೆಗೆ ಮೇ 1 ರ ರಾತ್ರಿ ಕಮಾಂಡೋಗಳು ಲಾಡೆನ್ ಮನೆ ಹೊಕ್ಕಾಗ ಅವರಿಗೆ ಆ ಮನೆಯ ಪ್ರತಿಯೊಂದ ಭಾಗವೂ ಪರಿಚಯವಿತ್ತೆಂಬಂತೆ ಎಲ್ಲವೂ ನಡೆದುಹೋಗಿದೆ.

2009 ರ ಆಗಸ್ಟ್‌ನಲ್ಲಿ ಪಾಕಿಸ್ತಾನದ ತಾಲಿಬಾನ್ ಲೀಡರ್ ಬೈತುಲ್ಲಾ ಮೊಹಸೂದ್‌ನ ಮನೆಯ ಮೇಲೆ ಬಾಂಬ್ ದಾಳಿ ನಡೆಸಿದಾಗಲೂ ಅಮೆರಿಕನ್ನರು ಈ NCTC ನೆರವು ಪಡೆದಿದ್ದರು. ತಾನು ಸಾಯುವ ದಿನವೇ





...ಗಿ ಮುಮುವೆಯಾಗಿದ್ದ ಮೊಹಸೂದ್ ...ಬರಿಗೆ ಮನೆಯಲ್ಲಿದ್ದಾಗಲೇ ಕೇವಲ ಆ ಒಂದು ...ನ್ನು ಮಾತ್ರ ಗುರಿಯಾಗಿಟ್ಟುಕೊಂಡು ಡ್ರೋಣ್ ...ಬಾಂಬ್ ಹಾಕಿತ್ತು, ಮೊಹಸೂದ್ ಸತ್ತ. ಈ ...ದಾಳಿಗೆ ಈಡಾಗಬೇಕಾದ ಟಾರ್ಗೆಟ್ ಅನ್ನು 15x15 ಚದರಡಿಯಲ್ಲಿ ನಿಖರವಾಗಿ ಗುರಿ ...ತೋರಿಸಬಲ್ಲಷ್ಟು ಆಧುನಿಕವಾಗಿದೆ. ಆದರೆ ...ಯ ಈ ನಿಖರತೆ ಲಾಡೆನ್ ತರದವರನ್ನು ...ಷ್ಟೆ ಮುಂದೆ ಅಮೆರಿಕಾವನ್ನು ವಿರೋಧಿಸುವ ...ಂತ ನಾಯಕರನ್ನು ಮುಗಿಸಬಲ್ಲದೆಂಬುದು ...ನಪಿಡಬೇಕಿದೆ.

ಲಾಡೆನ್-ಅಮೆರಿಕಾ ...ಂದಲೂ ಬಿಡುಗಡೆ ಕಷ್ಟಸಾಧ್ಯ

...ಡೆನ್ ಹತ್ಯೆಯು ಹಿಂಸಾಪೀಡಿತ ಜಗತ್ತಿಗೆ ...ಡುಗಡೆಯೆಂದು ಬಿಂಬಿಸಲಾಗುತ್ತಿದೆ. ಇದು ...ೀತಿಯಲ್ಲಿ ಸುಳ್ಳಾಗಲಿದೆ. ಏಕೆಂದರೆ ಲಾಡೆನ್‌ನ ...ಷ್ಟ ಇರದಿದ್ದಾಗಲೂ ಅಲ್ ಕೈದಾವಾಗಲಿ ಮುಜಾಹಿದ್ದೀನ್ ಉಗ್ರರಾಗಲಿ ತಮ್ಮ ...ಕ ಚಟುವಟಿಕೆ ಮುಂದುವರೆಸಿಕೊಂಡು ...ವುದು ಖಚಿತ. ಲಾಡೆನ್‌ನ ಅಮೆರಿಕನ್





...ಧಿ ನಿಲುವುಗಳು ಅವನೊಬ್ಬನಿಂದಾಗಿ ಅಸಹನೆಯಾಗಿಲ್ಲ. ಅದರ ಬದಲಾಗಿ ಸ್ವತಃ ...ವೇ ತನ್ನ ಲಾಭ-ಲೋಭದಿಂದಾಗಿ ಅಸಂಖ್ಯ ...ನ್ನು ಸೃಷ್ಟಿಸಿಕೊಂಡಿದೆ. ಅಲ್ ಕೈದಾ ...ಮಾಡಿರುವ ಅಮೆರಿಕನ್ ದ್ವೇಷ ಯಾವ ...ಟಿಯೆಂದರೆ ಲಾಡೆನ್ ಸತ್ತ ತಕ್ಷಣ ಅಲ್ ...ನಾಯಕನ ಸ್ಥಾನವೇನೂ ಖಾಲಿ ಬೀಳಲಿಲ್ಲ. ...ನ ಅಲ್ ಜವಾಹಿರಿ ಹೊಸ ನಾಯಕನಾಗಿ ...ದ್ದಾನೆ. ಜೀವನದಲ್ಲೆಂದೂ ಲಾಡೆನ್ ಮುಖ

ನೋಡಿರದಿದ್ದರೂ ಸೂಯಿಸೈಡ್ ಬಾಂಬರ್‌ಗಳಾಗಿ ತಾವೂ ಸತ್ತು ಇತರರನ್ನು ಕೊಲ್ಲಬಲ್ಲ ಜಿಹಾದಿ ಭಾವದ ಉಗ್ರಗಾಮಿಗಳು ಅಲ್ ಕೈದದಲ್ಲಿದ್ದಾರೆ. ಅಂತಹವರಿಗೆ ಲಾಡೆನ್ ಸತ್ತಿದ್ದಾನೋ ಬದುಕಿದ್ದಾನೊ ಎಂಬುದಕ್ಕಿಂತ ದಂಗೆ ಎದ್ದು ಎಲ್ಲವನ್ನು ಧ್ವಂಸ ಮಾಡುವುದೇ ಗುರಿಯಾಗಿರುತ್ತದೆ.

ಇವರಿಂದ ಸದ್ಯಕ್ಕೆ ಯಾರಿಗೂ ಬಿಡುಗಡೆ ಸಿಗದು.

ಮತ್ತೊಂದೆಡೆ ಅಮೆರಿಕಾ ಮುಸ್ಲಿಂ ದೇಶಗಳಲ್ಲಿ ನಿರಂತರವಾಗಿ ನಡೆಸುತ್ತಿರುವ ಕಗ್ಗೊಲೆಗಳೂ ಈ ಉಗ್ರ ಪ್ರತಿರೋಧಕ್ಕೆ, ಭಯೋತ್ಪಾದಕ ಚಟುವಟಿಕೆಗಳಿಗೆ ಪ್ರಚೋದನೆ ನೀಡುತ್ತಲೇ ಹೋಗಲಿದೆ. 'ವಾರ್ ಆನ್ ಟೆರರ್' ಎಂಬ ಘೋಷಣೆಯೊಂದಿಗೆ ಇರಾಕ್, ಅಫ್ಘಾನಿಸ್ತಾನ ಹಾಗೂ ಪಾಕಿಸ್ತಾನಕ್ಕೆ ತನ್ನ ಸೇನೆ ನುಗ್ಗಿಸಿರುವ ಅಮೆರಿಕಾ ಈಗ ಒಂದು ಹಂತದ ಗೆಲುವು ಸಾಧಿಸಿದೆ ಹೌದು.

ಅದರ ಪ್ರಥಮ ಶತ್ರು ಲಾಡೆನ್ ಸತ್ತಿದ್ದಾನೆ. ಹಾಗಾದರೆ ಈಗಲಾದರೂ ಅಮೆರಿಕನ್ ಸೈನ್ಯ ತನ್ನ ಆಕ್ರಮಣವನ್ನು ತೆರವುಗೊಳಿಸಿ ವಾಪಸ್ ಹೋಗಬೇಕು ತಾನೆ?

ಆದರೆ ಹಾಗಾಗುವುದಿಲ್ಲ. ಅಮೆರಿಕಾಗೆ ಭಯೋತ್ಪಾದನೆಯ ವಿರುದ್ಧ ಯುದ್ಧ ಎನ್ನುವುದು ಸಂಪತ್ಭರಿತ ದೇಶಗಳನ್ನು ಆಕ್ರಮಿಸಿಕೊಳ್ಳಲು ಒಂದು ನೆಪ ಅಷ್ಟೆ.

ಅವರು ಲಾಡೆನ್ ಇದ್ದಾನೆಂದು ಒಂದು ದೇಶಕ್ಕೆ ನುಗ್ಗುತ್ತಾರೆ. ಲಾಡೆನ್ ತರದವರು ಇಲ್ಲವಾದ ಮೇಲೂ ಜಾಗ ಖಾಲಿ ಮಾಡುವುದಿಲ್ಲ. ಹಾಗಿದ್ದ ಮೇಲೆ ಭಯವನ್ನು ಉತ್ಪಾದಿಸುವ ಈ ಕೆಲಸ ಎರಡೂ ಬಣಗಳಿಂದ ನಿಲ್ಲುವುದಿಲ್ಲ. ಮೂರು ಸಾವಿರ ಜನರನ್ನು ಕೊಂದನೆಂಬ ಆರೋಪಿ ಲಾಡೆನ್ ಹತ್ಯೆಯಾಗಿದೆ ಸರಿ. ಆದರೆ ಅಷ್ಟು ಮಾತ್ರಕ್ಕೇ, ಹತ್ತು ಲಕ್ಷ ಜನರನ್ನು ಕೊಲ್ಲಿಸಿರುವ ಅಮೆರಿಕಾ ಶಾಂತಿಯ ಪ್ರತಿಪಾದಕನಂತೆ ಪೋಸು ಕೊಟ್ಟರೆ ನಾವದನ್ನು ನಂಬುವ ಅಥವಾ ಬೆಂಬಲಿಸುವ ಅಗತ್ಯವಿಲ್ಲ ಅಷ್ಟೆ.

• ಪಾರ್ವತೀಶ

ನಿಗೂಢ ಬಂಗಲೆ





ಪಾಕ್‌ನ ಬೃಹತ್ ಬಂಗಲೆಯಲ್ಲಿ ಲಾಡೆನ್ ಐದಾರು ವರ್ಷಗಳಿಂದ ವಾಸಿಸುತ್ತಿದ್ದ. ಸ್ಥಳೀಯರು ಅದನ್ನು 'ವಜೀರಿಸ್ತಾನ್ ಬಂಗಲೆ' ಅಂತಲೇ ಕರೆಯುತ್ತಿದ್ದರು. ತೀರಾ ಮಾಮೂಲಿ ಸ್ಥಿತಿಯಲ್ಲಿದ್ದ ಈ ಬಂಗಲೆ ಸೈನ್ಯಾಧಿಕಾರಿಗಳ ಗಮನಕ್ಕೂ ಬಾರದಿದ್ದದ್ದು ಆಶ್ಚರ್ಯದ ಸಂಗತಿ. ಆದರೆ ಸ್ಥಳೀಯರ ಪಾಲಿಗದು ಹಲವಾರು ಕೌತುಕಗಳ, ಊಹಾಪೋಹಗಳ ಕೇಂದ್ರವಾಗಿತ್ತು. ಈಗ ಆ ಸ್ಥಳದಲ್ಲಿ ಲಾಡೆನ್ ವಾಸವಾಗಿದ್ದನೆಂಬುದು ಗೊತ್ತಾದ ಬಳಿಕ ಒಂದೊಮ್ಮೆ ಸ್ವಾರಸ್ಯಕರ ವಿಚಾರಗಳು ಹೊರಬರುತ್ತಿವೆ.

ಕೆಲವೇ ಕೆಲ ಸ್ಥಳೀಯ ಮಕ್ಕಳು ಲಾಡೆನ್ ಮಕ್ಕಳೊಂದಿಗೆ ಆಟವಾಡಲು ಹೋಗುತ್ತಿದ್ದರು. ಅವರಲ್ಲಿ ಹನ್ನೆರಡರ ಹರೆಯದ ಜವಾರ್ ಅಹ್ಮದ್ ಎಂಬ ಬಾಲಕನೂ ಒಬ್ಬ. ಆತನ ಪ್ರಕಾರ ಅಲ್ಲಿ ಇಬ್ಬರು ಮಹಿಳೆಯರಿದ್ದು ಒಬ್ಬಾಕೆ ಅರೇಬಿಕ್ ಹಾಗೂ ಒಮ್ಮೆ ಜವಾರ್ ಅಹ್ಮದ್‌ನಿಗೆ ಉರ್ದುವನ್ನು ಮಾತನಾಡುತ್ತಿದ್ದರು. ಅಲ್ಲಿ ಎರಡು ಗಂಡು, ಒಂದು ಹೆಣ್ಣುಮಗುವೂ ಇತ್ತು. ಈತನಿಗೆ ಲಾಡೆನ್ ಎರಡು ಮೊಲಗಳನ್ನು ಉಡುಗೊರೆಯಾಗಿ ಕೊಟ್ಟಿದ್ದ.





ಹಾಗಂತ ಈ ಬಂಗಲೆಯೊಳಗೆ ಸಿಕ್ಕಸಿಕ್ಕವರನ್ನೆಲ್ಲ ಸೇರಿಸಿಕೊಳ್ಳುತ್ತಿರಲಿಲ್ಲ. ಸುತ್ತಲ ಮಕ್ಕಳು ಈ ಮನೆ ಮುಂದೆ ಆಡುವಾಗ ಕೆಲ ಸಂದರ್ಭದಲ್ಲಿ ಬಾಲ್ ಕಾಂಪೌಂಡಿನೊಳಗೆ ಬೀಳುತ್ತಿತ್ತು. ಆ ಮನೆಯವರು ಬಾಲ್ ಅನ್ನು ಇಟ್ಟುಕೊಂಡು ನೂರೋ ನೂರೈವತ್ತೋ ರೂಪಾಯಿ ಕೊಟ್ಟು ಕಳಿಸುತ್ತಿದ್ದರು. ಇದರ ರುಚಿ ಹತ್ತಿಸಿಕೊಂಡ ಮಕ್ಕಳು ಬೇಕಂತಲೇ ಹಳೇ ಬಾಲುಗಳನ್ನು ಕಾಂಪೌಂಡಿನೊಳಗೆ ಎಸೆದು ಹಣ ಪಡೆದದ್ದೂ ಇದೆಯಂತೆ! ಈ ಮನೆಯಲ್ಲಿ ವಾಸವಿದ್ದ ಇಬ್ಬರು ಪುರುಷರು ವಾರಕ್ಕೆರಡು ಸಲ ಹೊರಬರುತ್ತಿದ್ದರು. ತೀರಾ ಸಾಮಾನ್ಯರಂತೆಯೇ ಮಾರ್ಕೆಟ್ಟಿಗೆ ತೆರಳಿ ಮನೆಗೆ ಬೇಕಾದ ಸಾಮಾನು, ಸರಂಜಾಮು, ಮಕ್ಕಳಿಗೆ ಐಸ್‌ಕ್ರೀಮ್‌ಗಳನ್ನೆಲ್ಲ ಖರೀದಿಸಿಕೊಂಡು ಹೋಗುತ್ತಿದ್ದರು. ಆಸುಪಾಸಿನವರೊಂದಿಗೆ ಬೆರೆಯುತ್ತಲೂ ಇದ್ದರು. ಆದರೆ ಪ್ರತೀ ಬಾರಿ ಹೊರಬಂದಾಗಲೂ ಸ್ಥಳೀಯರ ಬಳಿ 'ಹೊಸಬರ್‍ಯಾರಾದರೂ ಬಂದಿದ್ದಾರಾ?' ಅಂತ ತಪ್ಪದೇ ವಿಚಾರಿಸುತ್ತಿದ್ದರು!

ಈ ಮನೆಗೆ ಪ್ರತಿದಿನ ಹಾಲು-ಪೇಪರ್ ಸರಬರಾಜಾಗುತ್ತಿತ್ತು. ಇದಕ್ಕೆ ಸರಿಯಾದ ಹಣವನ್ನು ಮನೆಯವರು ಸಂದಾಯ ಮಾಡುತ್ತಿದ್ದರು. ಕೆಲಸಲ 20 ಮಕ್ಕಳು ಈ ಬಂಗಲೆಯಲ್ಲಿ ಕಾಣಿಸಿಕೊಂಡು ಪಕ್ಕದ ಧಾರ್ಮಿಕ ಶಾಲೆಗೂ ಹೋಗಿಬರುತ್ತಿದ್ದರು.

ಅದೊಂದು ಸಲ ಸ್ಥಳೀಯನಾದ ಶೇಖ್ ಮೊಹಮ್ಮದ್ ಖಾನ್ ಎಂಬಾತನ ತಂಗಿ ಸರ್ಕಾರಿ ಪ್ರಾಯೋಜಿತ ಪೋಲಿಯೋ ಹನಿ ಹಾಕುವ ಸಂಬಂಧ ಈ ಬಂಗಲೆಯೊಳಗೆ ಹೋಗಿದ್ದಳಂತೆ. ಆ ಸಂದರ್ಭದಲ್ಲಿ ಅಲ್ಲಿದ್ದ ದುಬಾರಿ ಎಸ್‌ಯುವಿ ವಾಹನಗಳು ಕಣ್ಣಿಗೆ ಬಿದ್ದು 'ಇದೆಲ್ಲ ಹೇಗೆ ಬಂತು' ಅಂತ ಆಶ್ಚರ್ಯದಿಂದ ಉದ್ಗರಿಸಿದಳಂತೆ. ಆಗ 'ಅದೆಲ್ಲ ನಿಂಗ್ಯಾಕೆ ಬಂದ ಕೆಲ್ಸ ಮುಗಿಸಿ ಹೋಗು' ಅಂತ ಮನೆಯೊಳಗಿನ ಪುರುಷರು ರೇಗಾಡಿದ್ದರಂತೆ.

ಆದರೆ ಆಸುಪಾಸಿನವರ್‍ಯಾರಿಗೂ ಲಾಡೆನ್ ಕಾಣಿಸಿಕೊಂಡಿರಲಿಲ್ಲ. ಆತ ಹೊರ ಬಂದಿರಲೂ ಇಲ್ಲ. ಆತ ಗಾಳಿ ಬೆಳಕಿಗೆ ಮೈಯೊಡ್ಡುವ ಸಲುವಾಗಿ ಎರಡನೇ ಮಹಡಿಯ ಬಾಲ್ಕನಿಗೆ 7 ಅಡಿ ಎತ್ತರದ ಕಾಂಪೌಂಡ್ ಕಟ್ಟಿಸಿದ್ದ. ಆದುದರಿಂದ ಆತ ಯಾರ ಕಣ್ಣಿಗೂ ಕಾಣಿಸಿರಲಿಲ್ಲ. ಸ್ಥಳೀಯರ ಪಾಲಿಗೆ ಸ್ವಲ್ಪ ನಿಗೂಢ, ಸ್ವಲ್ಪ ವಿಚಿತ್ರ ಹಾಗೂ ಕುತೂಹಲಕರವಾಗಿ ಕಾಣಿಸುತ್ತಿದ್ದ ಈ ಬಂಗಲೆ ಮೇಲೆ ಈಗ ಇಡೀ ವಿಶ್ವದ ಕಣ್ಣು ಕೀಲಿಸಿದೆ.

...ಕೋ ಜೈಶಂಕರ್ ಹೊಡೆದ ವಿಚಿತ್ರ ಡೈಲಾಗ್
...ೂತದ ಬಾಯಲ್ಲಿ ಭಗವದ್ಗೀತೆ

...ನುಷ್ಯ ಮನುಷ್ಯನನ್ನೇ ತಿನ್ನುವ ಈ ವ್ಯವಸ್ಥೆ ನಾಶವಾಗಬೇಕು ಅಂದ್ರೆ ... ಕುಲವನ್ನೇ ನಾಶಮಾಡಬೇಕು. ಆದಕ್ಕೇ ನಾನು ಮನುಷ್ಯನನ್ನು ...ರೋದು. ಮನುಷ್ಯ ಕುಲವನ್ನು ನಿರ್ನಾಮ ಮಾಡುವುದೇ ನನ್ನ ...!

...ೋಪಾತ್ ಜೈಶಂಕರ್‌ನ ಬಾಯಿಂದ ಹೊರಬಿದ್ದ ಈ ಮಾತುಗಳನ್ನು ...ತಡ, ಬಿಜಾಪುರದ ಪೊಲೀಸ್ ವರಿಷ್ಠ ಡಾ. ಡಿ.ಸಿ.ರಾಜಪ್ಪ ಕ್ಷಣ ...ಥಂಡಾ ಹೊಡೆದರಂತೆ.

...ತ ಕಾಮಿ ಉಮೇಶ್ ರೆಡ್ಡಿ, ಸೀರಿಯಲ್ ಕಿಲ್ಲರ್ ಶ್ಯಾಮ್, ಆತನ ... ರವಿ, ಇದಕ್ಕೂ ಮುನ್ನ ಬೀದಿ ವೇಶ್ಯೆಯರನ್ನು ಕರೆದೊಯ್ದು ...ಲಾಗಿ ಹೆಣವಾಗಿಸುತ್ತಿದ್ದ ನಾಗರಾಜ, ಕಬ್ಬನ್‌ಪಾರ್ಕ್‌ನಲ್ಲಿ ವೇಶ್ಯೆಯರ ... ಆಸಿಡ್ ಹಾಕುತ್ತಲೇ ಬಂದ ಆಸಿಡ್ ರಾಜ, ದಂಡುಪಾಳ್ಯದ ...ಬು- ಹೀಗೆ ಒಬ್ಬೊಬ್ಬರೇ ಪೈಶಾಚಿಕ ಹಂತಕರನ್ನು ...ತ್ತಲೇ ಬಂದವರಿಗೆ ಸೈಕೋ ಕಿಲ್ಲರ್ ಜೈಶಂಕರ್‌ನ ... ಮಾತುಗಳು ಕೊಂಚ ವಿಚಿತ್ರವಾಗಿ ಮತ್ತು ...ವಾಗಿ ಕಾಣಬಹುದು ಅಥವಾ ಜೈಶಂಕರ್ ಬೇರೆಲ್ಲ ...ಪಾತ್‌ಗಳಂತೆ ಹುಂಬನಾಗಿ ಕಾಣದೇ ...ಬಹುದು.


...ನುಷ್ಯ ಮನುಷ್ಯನನ್ನೇ ತಿನ್ನುವ ಈ ವ್ಯವಸ್ಥೆಯಲ್ಲಿ ...ಮನುಷ್ಯ ಕುಲವನ್ನೇ ನಿರ್ನಾಮ ಮಾಡುತ್ತೇನೆಂದು ... ಜೈಶಂಕರ್ ಈತನಕ ಮಾಡಿರುವುದಾದರೂ ...



... ಬಿಜಾಪುರದ ಝುಳಕಿ ಚೆಕ್‌ಪೋಸ್ಟ್ ಬಳಿ ...ಗಿ ಸೆರೆಸಿಕ್ಕ ಸೈಕೋಕಿಲ್ಲರ್ ಜೈಶಂಕರನನ್ನು ...ರದ ಎಸ್ಪಿ ಡಾ. ಡಿ.ಸಿ. ರಾಜಪ್ಪ ...ವಿಚಾರಣೆಗೊಳಪಡಿಸಲೆತ್ನಿಸಿದರು. ಸೈಕೋ ಓರ್ವ ಎಷ್ಟು ...ಸಬಲ್ಲ ಎಂಬುದಕ್ಕೆ ಈ ಮಾತುಗಳೇ ಸಾಕು. ...ಯೊಬ್ಬ ಪಾತಕಿಯೂ ತನ್ನ ಸಮರ್ಥನೆಗೆಂದು ತನ್ನದೇ ಆದ ...ಂದವನ್ನು ಸೃಷ್ಟಿಸಿಕೊಂಡಿರುತ್ತಾನಂತೆ. ಜೈಶಂಕರ್‌ನ ವಾದಕ್ಕೂ, ಆತನ ...ಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂಬುದಕ್ಕೆ ಆತನ ರಕ್ತ ...ನೇ ಪುರಾವೆಯಂತಿದೆ. ತಮಿಳುನಾಡಿನ ಸೇಲಂ ಜಿಲ್ಲೆಯ ಈಡಪ್ಪಾಡಿ ...ನ ಕನ್ನಂಪಟ್ಟಿಯ ಪಳನಿಯಪ್ಪನ್ ಮತ್ತು ಮಾರಿಯಮ್ಮ ದಂಪತಿಗಳ ... ಮಗ ಶಂಕರ್ ಉರ್ಫ್ ಜೈಶಂಕರ್‌ಗೆ ಮದುವೆಯಾಗಿದೆ.

ಹೆಂಡತಿ ಪರಮೇಶ್ವರಿಯಿಂದಾಗಿ ಜೈಶಂಕರ್ ಮೂವರು ಹೆಣ್ಣುಮಕ್ಕಳ ತಂದೆ. ತಂದೆಯೋರ್ವ ತನ್ನ ಹೆಣ್ಣುಮಕ್ಕಳ ಕಾರಣಕ್ಕಾದರೂ ವಿಕೃತಿ, ಲಾಲಸೆ, ಪುಂಡಾಟಿಕೆ, ಕಾಮುಕತೆಯಿಂದ ವಿಮುಖನಾಗುವುದು ಸರ್ವೇಸಾಧಾರಣ ತಾನೆ?

ಆದರೆ ಜೈಶಂಕರ್ 2003 ರಲ್ಲಿ ಕನ್ನಂಪಟ್ಟಿಯ ಪಂಚಾಯ್ತಿ ಅಧ್ಯಕ್ಷನ ಹೆಂಡತಿಯ ಜೊತೆ ಚಕ್ಕಂದಕ್ಕಿಳಿದ. ಇದು ಊರಿಗೆ ಗೊತ್ತಾಗಿ ಗ್ರಾಮಸ್ಥರು ಆತನನ್ನು ಥಳಿಸಿ ಹೊರಗಟ್ಟಿದ ಮೇಲಾದರೂ ತನ್ನ ಮೂವರು ಹೆಣ್ಣುಮಕ್ಕಳ ನೆನಪಾಗಬೇಕಿತ್ತು. ಲಾರಿ ಚಾಲಕನಾಗಿ ಬದುಕಿನ ಎರಡನೇ ಇನ್ನಿಂಗ್ಸ್ ಆರಂಭಿಸಿದ ಜೈಶಂಕರ್ 2005 ರ ಮೇ 19 ರಂದು ಪೊಲೀಸ್ ಠಾಣೆಯ ಮಹಿಳಾ ಮುಖ್ಯಪೇದೆ ಇಂದಿರಾಗಾಂಧಿ ಎಂಬಾಕೆಯನ್ನು ಡ್ರಾಪ್ ಕೊಡುತ್ತೇನೆಂದು ನಿರ್ಜನ ಪ್ರದೇಶಕ್ಕೊಯ್ದು ಅತ್ಯಾಚಾರವೆಸಗಿ ಕೊಂದ. ಆನಂತರ ತೋಪರಪಟ್ಟಿ ಎಂಬ ಹಳ್ಳಿಗೆ ನುಗ್ಗಿ ಜಯಲಕ್ಷ್ಮಿ ಎಂಬ ಮುದುಕಿಯನ್ನು ಕೊಂದು ಆಕೆಯ ಮೊಮ್ಮಗಳನ್ನೂ ರೇಪ್ ಮಾಡಿ ಕೊಂದ.



ಈ ಪ್ರಕರಣದಲ್ಲಿ ದಿಕ್ಕುತಪ್ಪಿದ ಪೊಲೀಸರು ಮುದುಕಿ ಜಯಲಕ್ಷ್ಮಿ ಜೊತೆ ಯಾವುದೋ ಕಾಲಕ್ಕೆ ಸಂಬಂಧ ಹೊಂದಿದ್ದ ಗೋವಿಂದರಾಜಲು ಎಂಬ ಮುದುಕನನ್ನು ಹಿಡಿದು ಜೈಲಿಗೆ ದಬ್ಬಿದರು. ಇದಾದನಂತರ ಲಕ್ಷ್ಮಿ, ಮಧು, ಮಹಿಳಾ ಪೊಲೀಸ್ ಪೇದೆ ಜಯಲಕ್ಷ್ಮಿಯರನ್ನೂ ಜೈಶಂಕರ್ ಕೊಂದು ಹಾಕಿದ್ದ. ಕೊಲ್ಲುವ ಮುನ್ನ ಅವರೆಲ್ಲರ ಮೇಲೂ ಪೈಶಾಚಿಕವಾಗಿ ಅತ್ಯಾಚಾರವೆಸಗಿದ್ದ. ಈರೋಡು, ಕೃಷ್ಣಗಿರಿ, ಧರ್ಮಪುರಿ, ಸೇಲಂ, ತಿರುಚ್ಚಿ, ತಿರುಪ್ಪೂರು ಮುಂತಾದ ತಮಿಳುನಾಡಿನ ಪಟ್ಟಣಗಳಲ್ಲಿ ಲಾರಿ ಓಡಿಸಿಕೊಂಡೇ ಅನಿತಾ, ರಮಾಮಣಿ, ತಂಗಮ್ಮ; ಹೀಗೆ 12 ಮಂದಿ ನಿಷ್ಪಾಪಿ ಹೆಂಗಸರನ್ನು ಅತ್ಯಾಚಾರವೆಸಗಿ ಕೊಂದು ಹಾಕಿದ್ದ.

2009 ರ ಅಕ್ಟೋಬರ್ 12 ಕ್ಕೆ ಸೇಲಂ ಪೊಲೀಸರು ಜೈಶಂಕರ್‌ನನ್ನು ಹಿಡಿದು ಬಾಯಿ ಬಿಡಿಸಿದಾಗ ತಮಿಳುನಾಡಿಗೆ ತಮಿಳುನಾಡೇ ದಂಗಾಗಿ ಹೋಗಿತ್ತು. ಜೈಲಿಂದ ಜೈಲಿಗೆ, ಊರಿಂದ ಊರಿಗೆ, ಪೊಲೀಸ್ ಠಾಣೆಯಿಂದ ಪೊಲೀಸ್ ಠಾಣೆಗೆ ವಿಚಾರಣೆ, ಕೇಸು, ಮಹಜರು ಎಂದು ಆತನನ್ನು ಸಾಗಾಣಿಕೆ ಮಾಡುವುದರಲ್ಲೇ ಪೊಲೀಸರು ಹೈರಾಣಾದರು.

ಮೊನ್ನೆ ಅಂದರೆ 2011 ರ ಮಾರ್ಚ್ 18 ರಂದು ಧರ್ಮಪುರಿ ಕೋರ್ಟಿಗೆಂದು ಆತನನ್ನು ಕರೆತಂದ ಪೊಲೀಸರು ವಾಪಸ್ಸು ಸೇಲಮ್‌ಗೆ ಕರೆತರುವಾಗ 'ಸ್ಲೀಪರ್ ಕೋಚ್ ಬಸ್ಸಲ್ಲಿ ಆರಾಮವಾಗಿ ಹೋಗೋಣ. ನಾನೇ ಟಿಕೆಟ್ ಖರೀದಿಸುತ್ತೇನೆ' ಎಂದು ಪೊಲೀಸರನ್ನು ಯಾಮಾರಿಸಿದ. ಪೊಲೀಸರು ಹಾಯಾಗಿ ಬಸ್ಸಿನಲ್ಲಿ ಮಲಗಿದ್ದರೆ ಸದ್ದಿಲ್ಲದೇ ಬಸ್ಸಿಳಿದು ಪರಾರಿಯಾದ. ಜೈಶಂಕರ್‌ನ ಈ ಎಸ್ಕೇಪ್‌ನಿಂದಾಗಿ ಆಘಾತಕ್ಕೊಳಗಾದ ಪೊಲೀಸ್ ಪೇದೆಯೊಬ್ಬ ತನ್ನ ತಲೆಗೇ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ.

ಹಾಗೇ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿದವ ಸೀದಾ ಬೆಂಗಳೂರಿಗೆ ಬಂದ. ಇದಾಗಿ 11 ನೇ ದಿನಕ್ಕೇ ತುಮಕೂರು ಗ್ರಾಮಾಂತರ ಕೋರಾಗ್ರಾಮದ ತೋಟವೊಂದಕ್ಕೆ ನುಗ್ಗಿ ಕಾವಲುಗಾರರಾದ ದೊಡ್ಡಯ್ಯ ಮತ್ತಾತನ ಪತ್ನಿ ಪುಟ್ಟಮ್ಮನನ್ನು ಕತ್ತರಿಸಿ ಕೊಂದು ಹಾಕಿ ಅವರ ಮಗಳು ರಾಜಮ್ಮನನ್ನು ರೇಪ್ ಮಾಡಿ ಕೊಂದು ಹಾಕಿದ. ಹೀಗೆ ಒಂದಲ್ಲ ಎರಡಲ್ಲ ತ್ರಿಬಲ್ ಮರ್ಡರ್ ಅಂಡ್ ರೇಪ್ ಮಾಡಿದ ತೋಟ ತುಮಕೂರಿನ ಪ್ರಜಾಪ್ರಗತಿ ಪತ್ರಿಕೆಯ ಮಾಲೀಕ ನಾಗಣ್ಣನ ತೋಟವಾಗಿತ್ತು.

ಇದಾಗಿ 4 ನೇ ದಿನಕ್ಕೆ ಅಂದರೆ ಏಪ್ರಿಲ್ 2 ಕ್ಕೆ ಹಿರಿಯೂರಿನ ಹಬೀಬ್ ಸಾಲ್ವೆಂಟ್ ಆಯಿಲ್ ಕಂಪೆನಿ ಸಮೀಪದ ಉಪ್ಪಾರಹಟ್ಟಿಯ ತೋಟಕ್ಕೆ ನುಗ್ಗಿ ಕಾವಲುಗಾರ ರಂಗಸ್ವಾಮಿಯನ್ನು ಗುಡಿಸಲು ಸಮೇತ ಸುಟ್ಟು ಹಾಕಿ ಆತನ ಪತ್ನಿ ಮಾರಕ್ಕನ ಮೇಲೆ ಅತ್ಯಾಚಾರವೆಸಗಿದ. ಸುದೈವವಶಾತ್ ಮಾರಕ್ಕನನ್ನು ಕೊಲ್ಲದೇ ಮರಕ್ಕೆ ಕಟ್ಟಿಹಾಕಿ ಹೋಗಿದ್ದ. ಇದಾಗಿ 8 ನೇ ದಿನಕ್ಕೆ ಅಂದರೆ ಏಪ್ರಿಲ್ 10 ರಂದು ಚಿತ್ರದುರ್ಗದ ರಾಂಪುರ ಸಮೀಪದ ತಮ್ಮನಹಳ್ಳಿಯ ಹೊರವಲಯದಲ್ಲಿ ವೃದ್ಧೆ ನಾಗಮ್ಮನನ್ನು ಕೊಂದು ಆಕೆಯ ಸೊಸೆ ನಿರ್ಮಲಾಳನ್ನು ರೇಪ್ ಮಾಡಿದ. ಇಲ್ಲೂ ಅಷ್ಟೇ ನಿರ್ಮಲಾಳನ್ನು ಕೊಲ್ಲದೇ ಬಿಟ್ಟಿದ್ದ. ಇದಾಗಿ 3 ನೇ ದಿನಕ್ಕೆ ಬಸಮ್ಮನನ್ನು ಹೊಲದಲ್ಲೇ ಅತ್ಯಾಚರವೆಸಗಿ ಕೊಂದು ಹಾಕಿದ.


ಈ ರೀತಿ ಎಲ್ಲೆಲ್ಲಿ ರೇಪ್ ಮಾಡಿದ ಹೆಂಗಸರನ್ನು ಕೊಲ್ಲುತ್ತಿದ್ದನೋ ಅಲ್ಲೆಲ್ಲ ಅವರ ಒಡವೆ, ದುಡ್ಡು ಮೊಬೈಲನ್ನು ದೋಚುತ್ತಿದ್ದ. ಹೀಗೆ ದೋಚಿದ್ದ ಮೊಬೈಲ್‌ನಿಂದಾಗಿಯೇ ಆತ ಸೈಕೋ ಕಿಲ್ಲರ್ ಜೈಶಂಕರ್ ಎಂಬುದನ್ನು ಹಿರಿಯೂರು ಇನ್ಸ್‌ಪೆಕ್ಟರ್ ರವಿ ಪತ್ತೆಹಚ್ಚಿದ್ದರು.

ಈಗ ಝುಳಕಿಯಲ್ಲಿ ಸಿಕ್ಕಿಬಿದ್ದಿದ್ದಾನೆ. ಮನುಷ್ಯ ಮನುಷ್ಯನನ್ನು ತಿನ್ನುವ ವ್ಯವಸ್ಥೆಯನ್ನು ನಿರ್ನಾಮ ಮಾಡಲು ತಾನೇ ಮನುಷ್ಯರನ್ನೇ ಸಂಹರಿಸುತ್ತೇನೆನ್ನುವ ಜೈಶಂಕರ್ ಏಕೆ ನಿಸ್ಸಹಾಯಕ ಹೆಂಗಸರನ್ನೇ ತನ್ನ ಟಾರ್ಗೆಟ್ ಮಾಡಿಕೊಂಡ? ಏಕೆ ಒಂಟಿ ಹೆಂಗಸರನ್ನೇ ಹುಡುಕಿ ರೇಪ್ ಮಾಡುತ್ತಿದ್ದ? ಮನುಷ್ಯರನ್ನೇ ನಿರ್ನಾಮ ಮಾಡುವುದಾದರೆ ಅಸಹಾಯಕ ಹೆಂಗಸರೇ ಏಕೆ? ಅಂಥವರನ್ನು ರೇಪ್ ಮಾಡಿಯೇ ಕೊಲ್ಲಬೇಕೆ? ರೌಡಿಗಳು, ಹಂತಕರು, ಪಾಪಿಗಳು, ಲೂಟಿಕೋರರು, ಭ್ರಷ್ಟರು, ದುಷ್ಟರನ್ನು ಬಿಟ್ಟು ಪಾಪದ ಹೆಂಗಸರನ್ನೇ ಅತ್ಯಾಚಾರವೆಸಗಿ ಕೊಲ್ಲುವುದು ವಿಕೃತ ಪೈಶಾಚಿಕತೆಯಲ್ಲದೇ ಯಾವ ಪುರುಷಾರ್ಥ?

ಭೂತದ ಬಾಯಲ್ಲಿ ಭಗವದ್ಗೀತೆ ಎಂಬಂತೆ ಸೈಕೋ ಜೈಶಂಕರ್ ತನ್ನ ವಿಕೃತಿಗೆಂದು ವಿಚಿತ್ರ ವಾದವೊಂದನ್ನು ಸೃಷ್ಟಿಸಿಕೊಂಡ ಸರಿ ಮಾತ್ರ. ಬೇರೆಲ್ಲಾ ಸೈಕೋಪಾತ್‌ಗಳಿಗಿಂತಲೂ ಈತನೇ ಅಪಾಯಕಾರಿ ಮತ್ತು ...

—[illegible]

ಉತ್ತರ ಕನ್ನಡದಲ್ಲಿ ಯಡ್ಡಿ 'ದಂಡ' ಯಾತ್ರೆ!



ಉತ್ತರ ಕಾಣದ ಜಿಲ್ಲೆಯಂತಾಗಿರುವ ಉತ್ತರ ಕನ್ನಡಕ್ಕೆ ಮೊನ್ನೆ ಸಿಎಂ ಯಡ್ಯೂರಿ ಬಂದುಹೋದ ಉದ್ದೇಶವಾದರೂ ಏನು? ಜಿಲ್ಲೆಯ ಉದ್ಧಾರವಾ? ತನ್ನ ಶತ್ರು ಪಾಳಯದಲ್ಲಿರುವ ಸ್ಥಳೀಯ ಬ್ರಾಹ್ಮಣ ಬೆಟಾಲಿಯನ್‌ಗೆ ಬಾಂಬ್ ಇಡುವ ರಾಜಕೀಯವಾ? ಜಿಲ್ಲೆಯ ಜ್ವಲಂತ ಸಮಸ್ಯೆ ಪರಿಹರಿಸುವ ಇಚ್ಛೆ ಯಡ್ಡಿಯಲ್ಲಿ ಇರಲಿಲ್ಲವೇಕೆ? ಮಂತ್ರಿ ಕಾಗೇರಿ-ಸಂಸದ ಅನಂತ್ಕಾಣಿಯ ಹಾರುವ ಗ್ಯಾಂಗ್‌ಗೆ ಸಾರ್ವಜನಿಕವಾಗೇ ಕಿಚಾಯಿಸಿದ್ದೇಕೆ?


ಉತ್ತರ ಕನ್ನಡದ ರಾಜಕೀಯ ಪಡಸಾಲೆಯಲ್ಲೀಗ ಇಂಥ ತರಹೇವಾರಿ ಪ್ರಶ್ನೆಗಳು ಎದ್ದೆದ್ದು ಕುಣಿಯುತ್ತಿವೆ. ಜಿಲ್ಲೆಯ ಪ್ರಗತಿ ಪರಿಶೀಲನೆ ನೆಪದಲ್ಲಿ ಬಿಜಯಂಗೈದಿದ್ದ ಯಡ್ಡಿ ಮಾಡಿದ್ದು ಮಾತ್ರ ಬಂಡಲ್ ಬಡಾಯಿದೂರ್ತಿಕೆಯಷ್ಟೇ! ಒಂದಿಷ್ಟು ಸರ್ಕಾರಿ ಕಾಮಗಾರಿ ಉದ್ಘಾಟನೆ, ಶಂಕುಸ್ಥಾಪನೆ, ಆತ್ಮರತಿ ಭಾಷಣ, ದೇವಸ್ಥಾನ ಪ್ರದಕ್ಷಿಣೆ ಮತ್ತು ರೆಸಾರ್ಟ್‌ನಲ್ಲಿ ರೆಸ್ಟ್ ಮಾಡಿದ ಯಡ್ಡಿ ಜಾಲಿ ಟ್ರಿಪ್‌ಗೆ ಬಂದಂತಿತ್ತು, ಸಿಎಂ ಸಾಹೇಬರ ಈ 'ದಂಡ'ಯಾತ್ರೆಯಿಂದ ಜಿಲ್ಲೆಗೆ ಪ್ರಯೋಜನವಂತೂ ಆಗಲಿಲ್ಲ.

ಜಿಲ್ಲೆಯ ಜನರ ಕಷ್ಟ-ನಷ್ಟ, ಬೇಕು-ಬೇಡಗಳ ಪರಿಕಲ್ಪನೆಯೊಂದೂ ಯಡ್ಡಿಯಲ್ಲಿ ಇರಲಿಲ್ಲ, ನೊಂದವರು ಅಳಲು ತೋಡಿಕೊಂಡರೂ ಅರ್ಥವಾಗುವ ಸ್ಥಿತಿಯಲ್ಲಿ ಸಿಎಂ ಇರಲಿಲ್ಲ, ಸ್ವಪಕ್ಷದೊಳಗಿನ ಬ್ರಾಹ್ಮಣ-ಅಬ್ರಾಹ್ಮಣ ಬಡಿದಾಟ ಮತ್ತು ಭಿನ್ನಮತೀಯ ಮಂತ್ರಿ ಕಾಗೇರಿಯನ್ನು ಆತನ ಕ್ಷೇತ್ರದಲ್ಲೇ ಹಣಿವ ಹವಣಿಕೆಯಷ್ಟೇ ಯಡ್ಡಿ ಮಹಾತ್ಮನ ತಲೆಬುರುಡೆಯಲ್ಲಿತ್ತು, ಮಂತ್ರಿ ಕಾಗೇರಿಯ ಶಿರಸಿ-ಸಿದ್ದಾಪುರ ಮತ್ತು ಬಿಜೆಪಿ ಶಾಸಕ ವಿ.ಎಸ್.ಪಾಟೀಲ್ ಎಂಬ ಭಾನ್ಗಡಿ ಭೂಪನ ಯಲ್ಲಾಪುರದಲ್ಲಷ್ಟೇ ಅಂಡಲೆದು ಹೋದ ಯಡ್ಡಿ ಅಲ್ಲೆಲ್ಲ ಕೋಟಿ-ಕೋಟಿಗಳ ಬೋಗಸ್ ಅನುದಾನ ಘೋಷಿಸಿದ್ದಾರೆ.

ಇದರಲ್ಲಿ ಗುಡಿ-ಗುಂಡಾರಕ್ಕೆ ಕೊಟ್ಟ ಕಾಸೇ ಜಾಸ್ತಿ; ದೀನನಿಗಿಂತ ದೇವ ಬಡವನೆಂಬ ದರಿದ್ರ ಧೋರಣೆಯ ಚೆಡ್ಡಿ ಯಡ್ಡಿಗೆ ಜನಸಾಮಾನ್ಯರ ಅವಶ್ಯಕತೆ ಹೇಗೆ ಗೊತ್ತಾಗಬೇಕು? ಈ ಯಡ್ಯೂರಿ ಐದು ತಿಂಗಳ ಹಿಂದೆ ಭಾಗ್ಯಲಕ್ಷ್ಮಿಯರ ಮಾತೆಯರಿಗೆ ಕಳಪೆ ಸೀರೆ ವಿತರಿಸಲು ಕಾರವಾರಕ್ಕೆ ಬಂದಾಗ ಬರೋಬ್ಬರಿ ನೂರು ಕೋಟಿಯ ವಿಶೇಷ ಅಭಿವೃದ್ಧಿ ಪ್ಯಾಕೇಜ್ ಜಿಲ್ಲೆಗೆ ಕೊಡುವುದಾಗಿ ಬೋಂಗು ಬಿಟ್ಟಿದ್ದರು. ಅಷ್ಟೇ ಅಲ್ಲ ನೂರು ಕೋಟಿಯನ್ನು ಮೂರೇ ದಿನದಲ್ಲಿ ಮಂಜೂರು ಮಾಡುತ್ತೇನೆ; ತಕ್ಷಣ ಕಾಮಗಾರಿಗಳ ನೀಲನಕ್ಷೆ ಕಳಿಸಿ ಎಂದು ಅಧಿಕಾರಿಗಳಿಗೆ ತಾಕೀತೂ ಮಾಡಿದ್ದರು. ಆದರೆ ನೂರು ಕೋಟಿ ಸಾಯಲಿ ನೂರು ಪೈಸೆಯೂ ಈವರೆಗೆ ಜಿಲ್ಲಾಭಿವೃದ್ಧಿಗೆ ಬಂದಿಲ್ಲ, ದೊರೆಯ 'ಕ್ರೂಯಲ್ ಜೋಕ್' ಇದೆಂದು ನತದೃಷ್ಟ ಉತ್ತರಕನ್ನಡದ ಮಂದಿ ಇವತ್ತಿಗೂ ಮಾತಾಡಿಕೊಳ್ಳುತ್ತಿದ್ದಾರೆ.

ಭ್ರಷ್ಟಾಚಾರದ ಹಗರಣಗಳು-ಭಂಡಾಟ ಮತ್ತು ರಸಿಕತೆಯ ರಂಗಿಲೂದಿಂದ 'ಶೇಪ್‌ಔಟ್' ಆಗಿರುವ ಯಡ್ಡಿ ಮೀಸೆ ಮಣ್ಣಾಗಲಿಲ್ಲವೆಂದು ತೋರಿಸಿಕೊಳ್ಳಲು ಸಾರ್ವಜನಿಕ ಭಾಷಣಗಳನ್ನು ಬಿಗಿದರು. ಮಾತಿನಲ್ಲಿ ನೈತಿಕ ದಮ್ ಇರಲಿಲ್ಲ, ಆತ್ಮರತಿ-ಸ್ವಾನುಕಂಪದ ಆಲಾಪವಿತ್ತು, ಕತ್ತಲಲ್ಲಿ ಕೋಲು ಕಳಕೊಂಡ ಕುರುಡನ ಆಕ್ರಂದನದಂತಿತ್ತು ಯಡ್ಡಿ ಬೊಬ್ಬೆ! ಜಿಲ್ಲೆಯೊಂದರ ನೆಲದಲ್ಲಿ ನಿಂತು ಮಾತಾಡುವಾಗ ಆ ಪ್ರದೇಶದ ಸಮಸ್ಯೆ-ಸಂಕಟ-ಸಂತೋಷಕ್ಕೆ ಸ್ಪಂದಿಸಬೇಕೆಂಬ ಕನಿಷ್ಠ ಪ್ರಜ್ಞೆಯೂ ಆತನಲ್ಲಿರಲಿಲ್ಲ.

ಅಭಿವೃದ್ಧಿ ಎಂಬುದು ಉತ್ತರ ಕನ್ನಡ ಕಂಡೇ ಇಲ್ಲ. ರಾಜಧಾನಿಯಿಂದ ಐದುನೂರು ಕಿ.ಮೀ. ದೂರದಲ್ಲಿರುವ ಜಿಲ್ಲೆಯ ಕೂಗು ವಿಧಾನಸೌಧಕ್ಕೆ ಮುಟ್ಟುತ್ತಲೇ ಇಲ್ಲ. ಜನರ ಋಣ ತೀರಿಸಬೇಕು-ವಿಧಾನಸೌಧದಲ್ಲಿ ಹೆತ್ತ ಜಿಲ್ಲೆಯ ಅಳಲು ಮಂಡಿಸಬೇಕೆಂಬ ಕೃತಜ್ಞತಾಭಾವ ಇಲ್ಲಿಂದ ಗೆದ್ದ ಸಂಸದ ಶಾಸಕರ್‍ಯಾರಿಗೂ ಇಲ್ಲ, ಅಕ್ಕಪಕ್ಕದ ಬೆಳಗಾವಿ-ಧಾರವಾಡ-ಅವಿಭಜಿತ ದಕ್ಷಿಣ ಕನ್ನಡಕ್ಕೆ ಹೋಲಿಸಿದರೆ ಉತ್ತರ ಕನ್ನಡ ಅಭಿವೃದ್ಧಿ ದಿಸೆಯಲ್ಲಿ ಶತಮಾನಗಳಷ್ಟು ಹಿಂದುಳಿದಿದೆ. ಜಿಲ್ಲೆಯಲ್ಲಿ ಕೈಗಾರಿಕೆಗಳಿಲ್ಲ, ನೀರಾವರಿ ಯೋಜನೆಗಳಿಲ್ಲ; ಅತೀ ಅವಶ್ಯವಿರುವ ಹುಬ್ಬಳ್ಳಿ-ಕಾರವಾರ ರೈಲು ಮಾರ್ಗಕ್ಕೆ ಬ್ರಾಹ್ಮಣ ಲಾಬಿ ಅಡ್ಡಗಾಲು ಹಾಕುತ್ತಿದೆ. ಬಂದರುಗಳು ಏದುಸಿರು ಬಿಡುತ್ತಿವೆ. ರೈತ-ತೋಟಿಗ-ಮೀನುಗಾರ ಕಂಗಾಲಾಗಿದ್ದಾನೆ. ಇದೆಲ್ಲ ಜಿಲ್ಲೆಗೆ ಬಂದ ದೊರೆಯೆದುರು ಬಿಜೆಪಿಯ ಮಂತ್ರಿ-ಶಾಸಕ-ಸಂಸದ-ನಿಗಮಗಳ ಅಧ್ಯಕ್ಷರು-ಚೆಡ್ಡಿಗಳು ಮಂಡಿಸಲಿಲ್ಲ. ಸಿಕ್ಕಷ್ಟು ಗೆಬರಿಕೊಳ್ಳುವ ಹಪಾಹಪಿಯಲ್ಲಿರುವ ಈ 'ದೇಶಭಕ್ತರಿಗೆ' ಜಿಲ್ಲಾಭಿವೃದ್ಧಿಯ ಉಸಾಬರಿ ಬೇಕಾಗೂ ಇಲ್ಲ, ಜನಪರವಾಗಿ ದೊರೆಯೆದುರು ಮಾತಾಡುವ ಯೋಗ್ಯತೆಯೂ ಈ ದಂಡಪಿಂಡಗಳಿಗಿಲ್ಲ, ಬಿಡಿ! ರಾಜಕೀಯ-ಸ್ವಪ್ರತಿಷ್ಠೆ ಪ್ರದರ್ಶನಕ್ಕಷ್ಟೇ ಬಂದಿದ್ದ ಸಿಎಂ ಯಡ್ಡಿಗೂ ಉತ್ತರ ಕನ್ನಡದ ಉದ್ಧಾರ ಬೇಕಿರಲಿಲ್ಲ!!



ಸಿಎಂ ಯಡ್ಡಿ ಅದೆಂಥ ಹೊಣೆಗೇಡಿ ಎಂದರೆ, ಸಾರ್ವಜನಿಕ ಭಾಷಣದಲ್ಲಾಗಲಿ, ಪ್ರಗತಿ ಪರಿಶೀಲನೆ ಸಭೆಯಲ್ಲಾಗಲಿ ಜಿಲ್ಲೆಯ ಗಂಭೀರ ಸಮಸ್ಯೆಯೊಂದನ್ನೂ ಪರಿಹರಿಸುವ ಮಾತೇ ಆಡಲಿಲ್ಲ, ಕದಂಬ ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಸಮಸ್ಯೆ ದಶಕಗಳಿಂದ ಹಾಗೇ ಇದೆ. ಅತ್ತ ಕೈಗಾ ಅಣುಸ್ಥಾವರದಿಂದ ಕ್ಯಾನ್ಸರ್ ಹರಡುತ್ತಿದೆ. ಬಡವರ ಅರಣ್ಯ ಭೂಮಿ ಸಕ್ರಮ ಸಂಕಟ ಪರಿಹಾರವಾಗಿಲ್ಲ, ಹುಬ್ಬಳ್ಳಿ-ಕಾರವಾರ ರೈಲು ಮಾರ್ಗ ಕೆಲಸ ಅರ್ಧಕ್ಕೆ ನಿಂತಿದೆ. ರೈತರ ಆತ್ಮಹತ್ಯೆಗಳಾಗುತ್ತಿವೆ. ಮೀನುಗಾರರು ಕಂಗೆಟ್ಟಿದ್ದಾರೆ. ಪ್ರವಾಸೋದ್ಯಮದ ಬಗ್ಗೆ ಬೊಗಳೆ ಮಾತುಗಳಷ್ಟೇ ಮೊಳಗುತ್ತಿವೆ. ಜಿಲ್ಲಾ ಆಸ್ಪತ್ರೆ ಯಮಪುರಿಯಂತಾಗಿದೆ. ಜಿಲ್ಲಾ ಮಂತ್ರಿ ಕಾಗೇರಿಯೇ ಘಟ್ಟದ ಮೇಲಿನ ಭಾಗ-ಕರಾವಳಿ ಏರಿಯಾ ಎಂಬ ತಾರತಮ್ಯ ನೀತಿ ಅನುಸರಿಸಿ ಜಿಲ್ಲೆಯನ್ನು ಬಂಜೆಯಾಗಿಸುತ್ತಿದ್ದಾನೆ. ... ಸಿಎಂ ಯಡ್ಡಿ ಗಮನಕ್ಕೆ ತಂದರೂ ಆತ ಪಂಚೇಂದ್ರಿಯ... ಇಂಗಿ ಹೋದಂತೆ 'ಪ್ರತಿಕ್ರಿಯಿಸಿದರು'. ಹೀಗೆ ... ಟಾಟಾ ಮಾಡುತ್ತ ಹಾಗೆ ಹೋದರು!!



ಜನಪರ ರಾಜಕೀಯ ಮಾಡ... ದಿದ್ದರೂ ಖಾಲಿಬರಡು ರಾಜಕ... ಮಾಡಲು ಯಡ್ಡಿ ಮರೆಯಲಿಲ್ಲ, ... ಬರುವಾಗಲೇ ತನ್ನ ವಿರೋಧಿ ಬ್ರಾ... ಬಳಗದಲ್ಲಿ ಮುಂಚೂಣಿಯಲ್ಲಿರುವ ... ಕಾಗೇರಿಯನ್ನು ಸಾರ್ವಜನಿಕವಾಗೇ ... ಮಾನಿಸಿ ಆತನ ಎದುರಾಳಿ ಮಾಜಿ ಮ... ಹಾಲಿ ಮಾರ್ಜಕ ಮಂಡಳಿ (ಕೆಎಸ್‌ಡಿ... ಅಧ್ಯಕ್ಷ ಶಿವಾನಂದ ನಾಯ್ಕರ ತಾ... ಮಾಡುವ ಸ್ಕೆಚ್ ಹಾಕಿಕೊಂಡು ಬಂದಿ... ಪಕ್ಕಾ ಚೆಡ್ಡಿ ಕೇಡರಿನ ಕಾಗೇರಿ ಈಗ ಯ... ಮಗ್ಗಲು ಮುಳ್ಳಾಗಿದ್ದಾರೆ. ಮೊದಲಿಂದ ಕಾಗೇರಿಯೆ... ಯಡ್ಡಿಗೆ ಆಗದು. ಆತನ ಮಂತ್ರಿ ಮಾಡುವ ಮ... ಯಡ್ಡಿಗಿರಲಿಲ್ಲ, ಶಿವಾನಂದ ನಾಯ್ಕರೇ ಯಡ್ಡಿಗೆ ಅಚ್ಚುಮೆ... ಯಡ್ಡಿ-ಶೋಭಾ-ಶಿವಣ್ಣರ ತ್ರಿಕೋನ ಸ್ನೇಹ-ಸಂಬ... 'ರಹಸ್ಯ' ಗೊತ್ತಾಗಿಯೇ ಬ್ರಾಹ್ಮಣರೆಲ್ಲ ಹೇಡಿ ಶಿವಾ... ನಾಯ್ಕನನ್ನು ಛಟ್ಕಳದಲ್ಲಿ [illegible] ಮಾಡಿದ್ದರು. ಆಗ ಅನಿವಾರ್ಯವಾಗಿ ... ಕಾಗೇರಿಯನ್ನು ಮಂತ್ರಿ ಮಾಡಬೇ... ಬಂತು.

ಮಂತ್ರಿಯಾದರೂ ಕಾಗೇರಿಗೆ ... ನೆಟ್‌ನಲ್ಲಾಗಲಿ, ಬೆಂಗಳೂರು ಮಟ್ಟ... ಗಲೀ ಕಿಮ್ಮತ್ತು ಇರಲಿಲ್ಲ, ಶೋಭಕ್ಕನ ... ಹಿಡಿದು ಯಡ್ಡಿ ಅಂತಃಪುರದಲ್ಲಿ ಓಡಾ... ತ್ತಿದ್ದ ಶಿವಾನಂದ ನಾಯ್ಕರ ಮಾತಿಗೇ ... ಜಾಸ್ತಿಯಾಗಿತ್ತು, ಇದು ಕಾಗೇರಿಯ... ಕೆರಳಿಸಿತ್ತು, ಯಡ್ಡಿಯೂ ಸೆಟೆದು ನಿಂ... ಕಾಗೇರಿ ಮೇಲಿನ ಅಸಮಾಧಾನ ... ನಾಯ್ಕರ ಮೇಲಿನ ವ್ಯಾಮೋಹ ಮೊನ್ನೆ ಯಡ್ಡಿ ಸಿದ್ದಾಪು... ಭಾಷಣ ಬಿಗಿವಾಗ ಪ್ರತಿಫಲಿಸಿತು! 'ಹಿಂದುಳಿದ ವ... ಧುರೀಣ ಶಿವಾನಂದ ನಾಯ್ಕರು ಕಳೆದ ಅಸೆಂಬ್ಲಿ ಎಲೆಕ್ಷನ್... ಗೆದ್ದಿದ್ದರೆ ಜಿಲ್ಲೆಯ ಕತೆಯೇ ಬೇರೆಯಾಗುತ್ತಿತ್ತು, ...

ಹುಬ್ಬಳ್ಳಿ: ಗೂಂಡಾ ಕಾರ್ಪೊರೇಟರ್ ಪಪ್ಪಿಯ ಪಾಖಡಾ ವೃತ್ತಾಂತ


ಹುಬ್ಬಳ್ಳಿ ನಗರ ಪಾಲಿಕೆಯ ಬಹುತೇಕ ಸದಸ್ಯರು ಗೂಂಡಾ ಹಿನ್ನೆಲೆಯಿರುವವರೆಂಬುದು ಪದೇಪದೆ ನಡೆಯುವ ಆಟಾಟೋಪಗಳಿಂದಲೇ ಸಾಬೀತಾಗುತ್ತಿದೆ. ಅಂಥವರ ಸಾಲಿನಲ್ಲಿ ಮೊದಲಿಗನಾಗಿ ನಿಲ್ಲುವ ಪಪ್ಪಿ ರಾಯನಗೌಡ್ರ ಬರೀ ಗೂಂಡಾ ಮಾತ್ರವಲ್ಲ, ಪಾಳೇಗಾರನೂ ಹೌದು. ಈ ಭಾಗದಲ್ಲಿ ಪಪ್ಪಿಯ ದಾಂಧಲೆಗಳು ಮಾಮೂಲು. ಆದರೆ ಈತ ಮೊನ್ನೆ ನಡೆಸಿದ್ದು ಮಾತ್ರ ಅಕ್ಷಮ್ಯ ಅಪರಾಧ.



ತನ್ನ ಮಗಳನ್ನು ರೇಗಿಸಿದರೆಂಬ ಕಾರಣ ಮುಂದಿಟ್ಟುಕೊಂಡು ಪಪ್ಪಿ ನಡೆಸಿದ ಅನಾಹುತ ಜನಸಾಮಾನ್ಯರನ್ನು ಬೆಚ್ಚಿಬೀಳಿಸಿದೆ. ಪಾಲಿಕೆ ಸದಸ್ಯನೆಂಬ ಜವಾಬ್ದಾರಿಯನ್ನೇ ಮರೆತ ಪಪ್ಪಿ ಮಗಳ ದೂರಿನ ಹಿಂದಿನ ಸತ್ಯಾಸತ್ಯತೆ ತಿಳಿಯುವ ಗೋಜಿಗೆ ಹೋಗದೆ ಆಕೆಯ ಸಹಪಾಠಿ ಹುಡುಗರನ್ನು ಹಿಗ್ಗಾಮುಗ್ಗಾ ಥಳಿಸಿದ್ದಾನೆ. ಇನ್ನೂ ಮುಂದುವರೆದ ಪಪ್ಪಿ ಆ ಹುಡುಗರ ಅಮಾಯಕ ಪೋಷಕರನ್ನೂ ಸಹ ಮನಬಂದಂತೆ ಆಟ್ಯಾಡಿಸಿದ್ದಾನೆ.

ಈ ಪಪ್ಪಿಯ ಮಗಳು ಐಶ್ವರ್ಯ ಹುಬ್ಬಳ್ಳಿಯ ವಿದ್ಯಾನಗರದಲ್ಲಿರುವ ಕೆಎಲ್‌ಇ ಪಾಲಿಟೆಕ್ನಿಕ್ ವಿದ್ಯಾರ್ಥಿನಿ. ಅಪ್ಪನ ಪಾಳೇಗಾರಿಕೆ, ಗೂಂಡಾಗಿರಿಯ ಪರಿಸರದಲ್ಲೇ ಉಸಿರಾಡುತ್ತಿರುವ ಈ ಹುಡುಗಿ ಅದೆಲ್ಲದರ ಅಪರಾವತಾರದಂತೆಯೇ ನಡೆದುಕೊಳ್ಳುತ್ತಾಳೆ. ತನಗೆ ಯಾವುದೇ ವಸ್ತುಬೇಕಾದರೂ ದರ್ಪದಿಂದಲೇ ಅಂಗಡಿಗಳಿಗೆ ದಾಂಗುಡಿಯಿಡುವ ಈಕೆ ಸ್ವಲ್ಪ ಹೆಚ್ಚುಕಡಿಮೆಯಾದರೂ 'ನಾ ಯಾರು ಗೊತ್ತಾ, ನಮ್ಮಪ್ಪ ಯಾರು ಗೊತ್ತಾ' ಅಂತಲೇ ಆವಾಜು ಹಾಕುತ್ತಾಳೆ. ಅಕ್ಷರಶಃ ಗೌಡಿಕೆ ಗತ್ತಿನ ಈಕೆಗೆ ತಾನು ತ್ರಿಪುರ ಸುಂದರಿ, ಜಗತ್ತಿನ ಗಂಡುಕುಲ ತನ್ನನ್ನೇ ದಿಟ್ಟಿಸುತ್ತದೆಂಬ ಭಯಂಕರ ಭ್ರಮೆ. ಯಾರಾದರೂ ಹುಡುಗ ಸಹಜವಾಗಿ ಇವಳತ್ತ ನೋಡಿದರೂ ಪಾಳೇಗಾರಿಕೆಯ ಪಟ್ಟುಗಳನ್ನು ಪೂರ್ತಿ ಪ್ರದರ್ಶಿಸಿಬಿಡುತ್ತಾಳೆ.

ಈಕೆ ಕಲಿಯುತ್ತಿರುವ ಕೆಎಲ್‌ಇ ಕಾಲೇಜಿನಲ್ಲಿ ಇತ್ತೀಚೆಗೆ ವಾರ್ಷಿಕೋತ್ಸವ ಕಾರ್ಯಕ್ರಮವಿತ್ತು, ಇದು ಪ್ರತೀ ವಿದ್ಯಾರ್ಥಿಗಳ ಪಾಲಿಗೂ ಹಬ್ಬ, ಪರಸ್ಪರ ಬಿಗುಮಾನ ಬಿಟ್ಟು ಕಲೆಯುವುದು, ರೇಗಿಸುವುದು, ರೇಗಿಸಿಕೊಳ್ಳುವುದೆಲ್ಲ ಸರ್ವೇಸಾಮಾನ್ಯ. ಹುಡುಗ ಹುಡುಗೀರ ನಡುವಲ್ಲೂ ಇಂಥ ಚೇಷ್ಟೆಗಳು ನಡೆಯುವುದೂ ಸಹಜ. ಈ ರೀತಿಯ ಎಲ್ಲಾ ವಿದ್ಯಮಾನಗಳೂ ಕೆಎಲ್‌ಇ ಕಾಲೇಜು ಕ್ಯಾಂಪಸ್ಸಿನ ರಂಗೇರಿಸಿದ್ದವು. ಇದೇ ಕಾಲೇಜಿನ ವಿದ್ಯಾರ್ಥಿಗಳಾದ ದೆಹಲಿ ಮೂಲದ ಗುರುಜೋತ್ ಸಿಂಗ್, ವಿಜಯ್ ನಾಯಕ್, ರತನ್ ಸಂಗೊಳ್ಳಿ ಮುಂತಾದವರು ಕೂಡಾ ವಾರ್ಷಿಕೋತ್ಸವದ ಸಂಭ್ರಮದಲ್ಲಿ ತೇಲಾಡುತ್ತಿದ್ದರು. ಈ ಸಂದರ್ಭದಲ್ಲೇ ಈ ಗುಂಪು ಗತ್ತಿನ ಗೌಡತಿ ಐಶ್ವರ್ಯಾಗೆದುರಾಯಿತು.





ಇದ್ದಕ್ಕಿದ್ದಂತೆ ಕ್ಯಾತೆ ತೆಗೆದ ಐಶ್ವರ್ಯ ಎಂದಿನಂತೆಯೇ ಪಾಳೇಗಾರಿಕೆಯ ತುಂಡಿನಂತಾಡಿದ್ದಾಳೆ. ಮಾಮೂಲಿನಂತೆಯೇ 'ನಾನ್ಯಾರು ಗೊತ್ತಾ, ನನ್ನಪ್ಪ ಯ... ಗೊತ್ತಾ' ಅಂತೆಲ್ಲ ಅರಚಾಡಿದ್ದಾಳೆ. ಅದಕ್ಕೆ ವಿಜಯ ನಾ... ಮತ್ತವನ ಗೆಳೆಯರು 'ನಿಮ್ಮಪ್ಪನ ತಲೆಯಲ್ಲೇನು ಕೋಡಿದ... ನಿನ್ನಪ್ಪ ಯಾರಾದರೆ ನಮಗೇನು' ಅಂತ ತಿರುಗ... ನೀಡಿದ್ದಾರೆ. ಉಗ್ರಾವತಾರ ತಾಳಿದ ಐಶ್ವ... ತಕ್ಷಣ ಫೋನೆತ್ತಿಕೊಂಡು ತನ್ನಪ್ಪ ಪಪ್ಪಿಗೆ ದ... ತಲುಪಿಸಿದ್ದಾಳೆ.

ತನ್ನ ಪುಂಡು ಪಟಾಲಂನೊಂದಿಗೆ ಇಸ್ಪೀಟೆಲೆ ತಟ್ಟುತ್ತಾ ಕೂತಿದ್ದ ಪಪ್ಪಿ ರಾಯನಗೌಡ ಮಗಳ ದೂರು ಕೇಳಿ ರಂಗಾದದ್ದೇ, ಪಾಲಿಕೆಯ ನಾಮ ನಿರ್ದೇ... ಸದಸ್ಯ ಚನ್ನಬಸಪ್ಪ ಹಳ್ಯಾಳ, ಕಲ್ಲಪ್ಪ ಎಲಿ... ಅನಿಲ ಪಾಟೀಲ, ಸುನೀಲ ಪಾಟೀಲನೊಂದಿಗೆ ಕಾರು ಹತ್ತಿ ಕಾಲೇಜಿ... ಬಂದಿಳಿದಿದ್ದಾನೆ. ಈ ದುಷ್ಟಕೂಟಕ್ಕೆ ಕಾಲೇಜಿನ ಆಡಳಿತ ಮಂಡಳಿ ನಿರ್ದೇಶಕ... ಶಂಕ್ರಣ್ಣ ಮುನವಳ್ಳಿಯ, ಸಹೋದರ ಸಂಬಂಧಿ ಸಂದೀಪ್ ಮುನವಳ್ಳಿ, ವಿಲ್ಸನ್... ಕಬೀರ ಮುಂತಾದವರೂ ಬೆಂಬಲಿಸಿದ್ದಾರೆ... ತದನಂತರ ವಿಜಯ ನಾಯಕ್, ಗುರುಜೋತ್ ಸಿ... ರತನ್ ಸಂಗೊಳ್ಳಿಗೆ ಕಾರಿಡಾರಿನ ತುಂಬಾ ಅಟ್ಯಾಡಿ... ಹೊಡೆದಿದ್ದಾರೆ.

ಇಷ್ಟಾಗುತ್ತಲೇ ಈ ಗ್ಯಾಂಗ್‌ನೊಂದಿಗೆ ಹೊಸ... ರೋಹಿತ್ ಹಿರೇಕೆರೂರನ ಪಡೆ ಸೇರಿಕೊಂಡಿತ್ತು, ವಿಜ... ಗುರುಜೋತ್ ಸಿಂಗ್ ಹಾಗೂ ರತನ್ ಸಂಗೊಳ್ಳಿಯ... ಕಾರಿನಲ್ಲಿ ತುಂಬಿಕೊಂಡು ಕಾಲೇಜಿನಿಂದ ಪಪ್ಪಿ ... ಕಣ್ಮರೆಯಾಗಿತ್ತು, ಹಾಗೆ ಹೊರಟ ಕಾರು ಸೀದಾ ಹ... ನಿಂತದ್ದು ವಿಜಯ ನಾಯಕನ ಮನೆ ಅಂಗಳದಲ್ಲಿ... ಬಳಿಕ ಮನೆಗೆ ನುಗ್ಗಿ ದಾಂಧಲೆಯೆಬ್ಬಿಸಿದ ಪಪ್ಪಿ ... ವಿಜಯನ ತಂದೆಯನ್ನು ಕಾರಿನ ಡಿಕ್ಕಿಗೆ ತುಂಬಿಕೊ... ಕೇಶ್ವಾಪುರದಾಚೆ ದೂರದ ನಿರ್ಜನ ಪ್ರದೇಶಕ್ಕೆ ತೆರ... ತೀರಾ ಅರಚಾಡಿದರೂ ಯಾರಿಗೂ ಕೇಳಿಸದಂಥ... ಪ್ರದೇಶದಲ್ಲಿ ಗುರುಜ್ಯೋತ್, ರತನ್ ಹಾಗೂ ವಿಜ...

ಪಪ್ಪಿಯ ಪಾತಕ ಪುರಾಣ

ಲಾಗಾಯ್ತಿನಿಂದಲೂ ದಾದಾಗಿರಿಯನ್ನೇ ಬಂಡವಾಳವಾಗಿಸಿಕೊಂಡಿರುವ ಪಪ್ಪಿ ರಾಯನಗೌಡ ಅಖಂಡ 20 ವರ್ಷಗಳಿಂದ ಗೋಪನಕೊಪ್ಪ ಕ್ಷೇತ್ರವನ್ನು ಕೈವಶ ಮಾಡಿಕೊಂಡಿದ್ದಾನೆ. ಇದು ಮಹಿಳಾ ಮೀಸಲಾದಾಗಲೂ ತನ್ನ ಕಡೆಯ ಹೆಂಗಸರನ್ನೇ ಕಣಕ್ಕಿಳಿಸಿ ಹಿಡಿತ ಸಾಧಿಸುತ್ತಾ ಬಂದಿದ್ದಾನೆ.


ಪಪ್ಪಿಯ ಹಾರಾಟಗಳು ಯಾವ ಪರಿಯಿದೆಯೆಂದರೆ, ದಿವಂಗತ ಎಸ್.ಆರ್. ಬೊಮ್ಮಾಯಿ ಕೂಡಾ ಈತನ ಕಾಟದಿಂದ ಕಂಗಾಲಾಗಿದ್ದರು! ಮೊದಲಿಗೆ ಬೊಮ್ಮಾಯಿ ಶಿಷ್ಯನಾಗಿಯೇ ಗುರುತಿಸಿಕೊಂಡಿದ್ದ ಪಪ್ಪಿ ಅದರ ಬಲದಿಂದಲೇ ಇಸ್ಪೀಟ್ ಅಡ್ಡೆ ನಡೆಸುತ್ತಿದ್ದ. ಇಂಥಾ ಹಡಬೆ ಹಣದ ಮದದಿಂದ ಗೌಡಿಕೆ ಗತ್ತಿನೊಂದಿಗೆ ಮೆರೆಯುತ್ತಿದ್ದ ಈತ ಅದು ಹೇಗೋ ಪಾಲಿಕೆ ಸದಸ್ಯನಾಗಿ ಆರಿಸಿಬಂದ. ಆನಂತರ ಘಟಿಂಗ ಪಪ್ಪಿಯ ಖದರ್ರೇ ಬದಲಾಗಿಹೋಯ್ತು, ತನಗೆ ಆಶ್ರಯ ನೀಡಿದ್ದ ಬೊಮ್ಮಾಯಿಯನ್ನೂ ಜಾಡಿಸಿ ಹೊರಬಂದ. ಆ ಬಳಿಕ ಎದುರಾದ ಚುನಾವಣೆಯಲ್ಲಿ ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಿಂದ ಸ್ಪರ್ಧಿಸಿದ ಬೊಮ್ಮಾಯಿ ನಿಷ್ಪಾಲಿಯಾದರು.

ತದನಂತರದ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಪಪ್ಪಿಯೇ ವಿಧಾನಸಭೆಗೆ ಸ್ಪರ್ಧಿಸಿದ. ಗೂಂಡಾಗಿರಿಯಿಂದಲೇ ಒಂದಷ್ಟು ಮತ ಪಡೆದನಾದರೂ ಹೀನಾಯವಾಗಿ ಸೋತ. ಈ ಚುನಾವಣೆಯಲ್ಲಿ ತನ್ನ ವಿರುದ್ಧ ಕೆಲಸ ಮಾಡಿದನೆಂಬ ಗುಮಾನಿಯ ಮೇಲೆ ಬೆಂಗೇರಿಯವನೊಬ್ಬನನ್ನು ಕೊಂದೇ ಹಾಕಿದ. ಈ ಕೇಸಿನಲ್ಲಿ ಖುಲಾಸೆಯಾದ ಪಪ್ಪಿ ಕಾಂಗ್ರೆಸ್ ಪಕ್ಷದಿಂದ ಪಾಲಿಕೆ ಸದಸ್ಯನಾಗಿ ಪುಂಡಾಟ ನಡೆಸುತ್ತಿದ್ದಾನೆ. ವಿಪರ್ಯಾಸವೆಂದರೆ ಈತನಿಗೆ ಬೇಕಾದಷ್ಟು ಪಾತಕ ಹಿನ್ನೆಲೆಯಿದ್ದರೂ ಪೊಲೀಸರಾಗಲಿ, ರಾಜಕಾರಣಿಗಳಾಗಲಿ ತುಟಿಪಿಟಕ್ಕೆನ್ನುತ್ತಿಲ್ಲ.

ಮಾನೇ ಬೇರೆಯಿತ್ತು..' ಎಂದು ಕಾಗೇರಿ ನ್ನು ಕೆಣಕಿಬಿಟ್ಟರು ಸಿಎಂ ಸಾಹೇಬರು.

ಇದರರ್ಥ ಇಷ್ಟೇ. ಶಿವಾನಂದ ಯ್ಕ ಶಾಸಕನಾಗಿದ್ದರೆ ಆತನನ್ನೇ ಂತ್ರಿ ಮಾಡುತ್ತಿದ್ದೆ; ಕಾಗೇರಿಗೆ ಆ ಾಗ ಬರುತ್ತಲೇ ಇರಲಿಲ್ಲ ಬುದೇ ಸಿಎಂ ಮಾತಿನ ಥಾರ್ಥ!! ಹೀಗೆ ಹೇಳುವ ಲಕ ಯಡ್ಡಿ ಉತ್ತರ ಕನ್ನಡಿಗರಿಗೆ ಟ್ಟ ಸಂದೇಶ ಹಲಕರವಾಗಿದೆ. "ಈ ಕಾಗೇರಿ ಾಭದ್ರ ಮಂತ್ರಿ' ... ಈತನೆಂದರೆ ಾಗದು... " ಎಂದು ಯಡ್ಡಿ ಬಹಿರಂಗವಾಗೇ ಹೋಗಿದ್ದಾರೆ. ಕಾಗೇರಿಯೂ ಅಷ್ಟೇ! ಭೌತಿಕ ವಿನಲ್ಲಿ ಆತ ಎಷ್ಟು ಎತ್ತರವಿದ್ದಾನೋ ಅಷ್ಟೇ ತನಗಳು ಆತನಲ್ಲಿದೆ. ಹೀಗಾಗಿ ಆತನಿಗೆ ಶಿವಾನಂದ ಯ್ಕನ ಅಂಗಾತ ಮಲಗಿಸಿದರೂ ಜಿಲ್ಲಾ ಮಟ್ಟದ ಮಹತ್ವ ಬೆಳೆಸಿಕೊಳ್ಳಲಾಗಲೇ ಇಲ್ಲ.

ಕುಮಾರಸ್ವಾಮಿ-ಯಡ್ಡಿಯ 'ಕೋ-ಜಾ' ಸರ್ಕಾರದಲ್ಲಿ ನಂದ ನಾಯ್ಕ ಮಂತ್ರಿಯಾದಾಗಲೇ ಜಿಲ್ಲೆಯ ಬ್ರಾಹ್ಮಣ ಆಕಾಶವೇ ಕಳಚಿಬಿದ್ದಂತೆ ಚಡಪಡಿಸಿದ್ದರು. ಈ ಯ್ಕ ಮತ್ತೆ ಶಾಸಕನಾದರೆ 'ಎಂಗ್ರ ಕಾಗೇರಿ ಮಾಣಿ ತ್ರಿ ಆಗ್ನಿಲ್ಲೆ' ಎಂದುಕೊಂಡು ಸಂಸದ ಅನಂತ್ಮಾಣಿ, ಣಿ, ಕರ್ಕಿ ಮುಂತಾದ ಜನಿವಾರಿಗಳೆಲ್ಲ ಸೇರಿ ಷಡ್ಯಂತ್ರ ಡಿದರು. ನಾಯ್ಕ ಸೋತರು. ಕಾಗೇರಿ ತ್ರಿಯಾದರು. ಆದರೆ ಯಡ್ಡಿ-ಶೋಭಕ್ಕ ಶಿವಣ್ಣನ ಕೈಬಿಡಲಿಲ್ಲ. ಫಲವತ್ತಾದ ಟಕ ಸಾಬೂನು ಮತ್ತು ಮಾರ್ಜಕ ರ್ಖಾನೆಯ ಅಧ್ಯಕ್ಷತೆ ಕರುಣಿಸಿದರು. ಬ್ರಾಹ್ಮಣ ಲಾಬಿಯೂ ಹಠಕ್ಕೆ ಬಿದ್ದು ಟುಗಳಿಗೆ ನಿಗಮ-ಮಂಡಳಿ ಕೊಡಿಸಿತು. ಪಶ್ಚಿಮಘಟ್ಟ ಕಾರ್ಯ ಕಾಡುಗಳ್ಳ ಅನಂತ ಆಪೀಸರ ಕ್ಷನಾದರೆ, ಮನುವಾದಿ ಸಚ್ಚಿದಾನಂದ ಡೆ ಪಾನ ಸಂಯಮ ಮಂಡಳಿಗೆ ಸಿದ; ಅತ್ತ ಕುಮಟೆಯ ಕೊಂಕಣಿ ಹ್ಮಣನೂ ಸಂಸದ ಅನಂತ್ಮಾಣಿಯ ಧಾರಿ ಗುಲಾಮನೂ ಆದ ವಿನೋದ ಪ್ರಭುಗೆ ಅಭಿವೃದ್ಧಿ ಮಂಡಳಿಯ ಭಾಗ್ಯ ಬಂತು. ಇವರೆಲ್ಲರ ಜತೆ ಸಂಸದ ಅನಂತ್ಮಾಣಿ ಕೊಂಡು ಶೂದ್ರ ಶಿವಾನಂದ ನಾಯ್ಕನ ಕಾಲು



ಎಳೆದೇಎಳೆದರು. ಈ ವಿಪ್ರರ ಕಿರುಕುಳ ವಿಪರೀತವಾದಂತೆ ಶಿವಣ್ಣ ಯಡ್ಡಿ-ಶೋಭಕ್ಕನಿಗೆ ಹತ್ತಿರತ್ತಿರ ಆಗುತ್ತಾ ಹೋದರು. ಬೆಂಗಳೂರು-ಹೊನ್ನಾವರದಲ್ಲಿ ಕೋಟಿಗಳ ಬಂಗಲೆ ಕಟ್ಟಿಸಿದರು. ಸಖತ್ ಆಸ್ತಿ ಮಾಡಿದರು. ಒಂದು ಕಾಲದಲ್ಲಿ ಲಾರಿ ಡ್ರೈವರ್ ಆಗಿದ್ದ ಅನ್‌ಪಡ್ ಶಿವಣ್ಣನ ಖದರು ಪ್ರಜಾಪ್ರಭುತ್ವದ ಪವಾಡದಿಂದ ಬದಲಾಯ್ತು. ಹಿಂದುಳಿದ ವರ್ಗಕ್ಕೆ ಈತನಿಂದ ಪ್ರಯೋಜನವೇನೂ ಆಗದಿದ್ದರೂ ಹಿಂದುಳಿದವರ ನಾಯಕನೆಂಬ ಗೆಟಪ್ ಬೇರೆ ಬಂತು. ಏನೆ ಇರಲಿ; ಈ ಹಿಂದುಳಿದ ನಾಯ್ಕ ವೈಯಕ್ತಿಕವಾಗಿ ಮುಂದೆ ಬಂದ; ಹಿಂದುಳಿದವರು ಇದ್ದಲ್ಲೇ ಇದ್ದಾರೆ ವಿಪರ್ಯಾಸವೆಂದರೆ ತಾನು 'ಬಂ'ಗೆ ಪರ್ಯಾಯವಾದ ಈಡಿಗರ ನಾಯಕನೆಂಬಂತೆ (ಯಡ್ಡಿ ಚಿತಾವಣೆಯಿಂದ) ಪೋಸು ಕೊಟ್ಟಿದ್ದ ಶಿವಾನಂದ ನಾಯ್ಕನಿಂದ ಕನಿಷ್ಠ ಆತನ 'ದೀವರ' ವಿಶ್ವಾಸವೂ ಗಳಿಸಲಾಗಲಿಲ್ಲ. ಮಂತ್ರಿಯಾದಾಗ ಮಾಡಿದ ನಖರಾಗಳಿಂದ ಸ್ವಜಾತಿ ಜನಗಳು ಈತನಿಂದ ದೂರಾಗುವಂತಾಗಿತ್ತು. ಇದೇ ಆತನ ವಿರೋಧಿ ಬ್ರಾಹ್ಮಣರಿಗೆ ವರವಾಯ್ತು.

ಕೊನೇ ಹನಿ

ಸಿಎಂ ಯಡ್ಡಿಯ ಉತ್ತರ ಕನ್ನಡ ಪ್ರವಾಸದಿಂದ ಬಿಜೆಪಿಯೊಳಗಿನ ಹುಳುಕು ಹೊರಬಂತೇ ಹೊರತು ಜಿಲ್ಲೆಗೆ ಮತ್ತಾವ ಭಾಗ್ಯ ಬರಲಿಲ್ಲ. ಯಡ್ಡಿ ಬಂದು ಹೋದನಂತರ ಜಿಲ್ಲೆಯ ಬಿಜೆಪಿ ವಲಯದಲ್ಲಿ ಒಂದು ರಂಗಿಲಾ ಸುದ್ದಿ ಹುಟ್ಟಿಕೊಂಡಿದೆ. ಯಡ್ಡಿ-ಶಿವಣ್ಣರ 'ಅನ್ಯೋನ್ಯ ಸಂಬಂಧ'ವನ್ನು ಆ ಸುದ್ದಿ ವಿಚಿತ್ರವಾಗಿ ವ್ಯಾಖ್ಯಾನಿಸುತ್ತಿದೆ. ಬೆಂಗಳೂರಿನಲ್ಲಿರುವ ಶಿವಣ್ಣನ ಬೇನಾಮಿ ಮನೆಯಲ್ಲಿ ಆಗಾಗ ಯಡ್ಡಿ-ಶೋಭಕ್ಕ 'ಬೈಠಕ್' ನಡೆಸುತ್ತಾರಂತೆ. ಎರಡು ಕೋಟಿಯ ಈ ಬಂಗಲೆಯ ಅರ್ಧ ದುಡ್ಡು ಯಡ್ಡಿ ಕಡೆಯವರೇ ಕೊಟ್ಟಿದ್ದಾರಂತೆ. ಭಯ-ಭಕ್ತಿಯಿಂದ ಬೈಠಕ್ ಅರೇಂಜ್ ಮಾಡುವ ಶಿವಣ್ಣನ ನಿಷ್ಠೆಯೇ ಯಡ್ಡಿ-ಶಿವಣ್ಣ-ಶೋಭಕ್ಕರ ಅಂಟಿದ ನಂಟಿನ ಗುಟ್ಟಂತೆ!!



-ನಹುಶ

ಯ ಮೇಲೆ ಮಾರಣಾಂತಿಕ ದಾಳಿ ನಡೆಸಿತು. ವಿಜಯ ಗಲೇ ತಲೆ ತಪ್ಪಿಸಿಕೊಂಡಿದ್ದರಿಂದ ಆತನನ್ನು ಕರೆಸದಿದ್ದರೆ ದೇ ಬಿಡುವ ಬೆದರಿಕೆಯನ್ನು ಆತನ ತಂದೆಗೆ ಲಾಯಿತು.

ದಾಗಿ ಸ್ವಲ್ಪ ಹೊತ್ತಿನ ಬಳಿಕ ಪಪ್ಪಿಯ ಪಡೆ ಎಲ್ಲರನ್ನೂ ಬಿಟ್ಟು ಪರಾರಿಯಾಯಿತು. ಅದಾಗಲೇ ಮಾಗಿ ಒದೆ ತಿಂದು ಹೈರಾಣಾಗಿದ್ದವರು ಹೇಗೋ ವಿದ್ಯಾನಗರ ಪೊಲೀಸ್ ಠಾಣೆಗೆ ಮ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿಯ ಮುಂದೆ ದ್ದೆಲ್ಲವನ್ನೂ ಹೇಳಿದರು. ಆದರೆ ಇನ್ಸ್‌ಪೆಕ್ಟರ್ ಾಶಯ ತನ್ನ ಮೇಲಧಿಕಾರಿಯ ನಂಬರು ಟ್ಟು ಅವರಿಗೇ ಹೇಳಿ ಅಂತ ನುಣುಚಿಕೊಂಡ. ಯಕರಾದ ಗುರುಜೋತ್ ಸಿಂಗ್ ಹಾಗೂ ಆ ನಂಬರಿಗೂ ಫೋನಾಯಿಸಿ ತಮ್ಮ ಅರುಹಿದ್ದಾರೆ. ಆದರೆ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿ ಮಾಡಿಸ್ತೀನಿ ಅಂತ ತಿಪ್ಪೆಸಾರಿಸಲೆತ್ನಿಸಿ ಮನೆಗೆ ಸಾಕಿದ. ದೂರು ಸ್ವೀಕರಿಸಲೇ ಇಲ್ಲ.

ಪುಟ್ಟಸ್ವಾಮಿ ಎಂಥಾ ಗಡವನೆಂದರೆ, ನಿಜವಾಗಿ ಗೊಳಗಾದ ಮಂದಿಯನ್ನು ಸಾಗಹಾಕಿದ ತಕ್ಷಣ ಪಪ್ಪಿ ಗನ್ನು ಕರೆಸಿಕೊಂಡಿದ್ದ. ತದನಂತರ ಐಶ್ವರ್ಯಳಿಂದ ಮು ಸ್ವೀಕರಿಸಿ ವಿಜಯ್, ಗುರುಜೋತ್ ರತನ್ ಮೇಲೆ ಕೇಸು ದಾಖಲಿಸಿ ರ್ಣನಾದ! ಈ ಪ್ರಕ್ರಿಯೆಯಲ್ಲಿ ತೀರಾ ಕುತನ ಪ್ರದರ್ಶಿಸಿದ ಇನ್ಸ್‌ಪೆಕ್ಟರ್ ಪುಟ್ಟ ಎಸಿಪಿ ಎನ್.ಎಸ್. ಪಾಟೀಲರ ಮಾರ್ಗ ನದಲ್ಲೇ ಈ ದೂರು ದಾಖಲಾಗುವಂತೆ ಡಿಕೊಂಡು ಬಚಾವಾದ.

ಪ್ಪರಲ್ಲಾಗಲೇ ಹಲ್ಲೆಗೊಳಗಾದ ಯುಕರಿಗೆ-ಪಪ್ಪಿಯ ಪಾಳೇಗಾರಿಕೆ ಟೆಂಬುದು ಅರ್ಥವಾಗಿತ್ತು. ಈ ವ್ಯವಸ್ಥೆಯಲ್ಲಿ ನ್ಯಾಯ ಸಿಗುವುದು ಕನಸಿನ ಮಾತೆಂಬುದೂ ಹೋಗಿತ್ತು. ಆದುದರಿಂದಲೇ ಪೊಲೀಸ್ ನರ್ ಡಾ. ರಾಮಚಂದ್ರ ರಾವ್‌ಗೆ ಟೆಲಿಗ್ರಾಂ ತರ ದೂರು ಸಲ್ಲಿಸಿದರು. ತದನಂತರ ಪಪ್ಪಿ ವಿರುದ್ಧ ಉಪನಗರ ಠಾಣೆಗೆ ಲಿಖಿತ ದೂರು ದರು. ಇನ್ಸ್‌ಪೆಕ್ಟರ್ ವೆಂಕಟಗೌಡ ದೂರು

ಇಂಗ್ಲಿಷ್‌ನಲ್ಲಿದೆ ಅಂತ ಕ್ಯಾತೆ ತೆಗೆದ. ಅವನ್ನೂ ಪರಿಹರಿಸಲಾಯಿತು. ಇದು ನಾಮಕಾವಾಸ್ಥೆಯೆಂಬಂತೆ ಸ್ವೀಕೃತವಾದರೂ ಯಾವುದೇ ಪ್ರಯೋಜನವಾಗಲಿಲ್ಲ. ಇದೆಲ್ಲದರಿಂದ ರತನ್ ಹಾಗೂ ಗುರುಜೋತ್ ಸಿಂಗ್‌ನ ತಂದೆತಾಯಿ ವಿಪರೀತ ರೋಸಿ ಹೋದರು.



ಇವರೆಲ್ಲರ ಅಪ್ಪಂದಿರು ದೊಡ್ಡ ಉದ್ಯಮಿಗಳು. ರಾಜಕೀಯ ನಂಟಿರುವವರು. ಆದುದರಿಂದಲೇ ಅಶೋಕ್ ಖೇಣಿ ಕಡೆಯಿಂದ ಯಡ್ಡಿ ಮೇಲೆ ಒತ್ತಡ ಹಾಕಿಸಿದರು. ಪೊಲೀಸ್ ಪಡೆ ಪಪ್ಪಿ ಸೇರಿದಂತೆ ಪ್ರಮುಖ ಆರೋಪಿಗಳನ್ನು ಬಿಟ್ಟು ಕೆಲವರನ್ನು ಬಂಧಿಸುವ ನಾಟಕವಾಡಿತು.

ಇದೆಲ್ಲದರ ನಡುವೆಯೂ ಪಪ್ಪಿ ಪಡೆ ಹುಬ್ಬಳ್ಳಿ ನಗರದಗುಂಟ ರಾಜಾರೋಷವಾಗಿ ತಿರುಗಾಡುತ್ತಲೇ ಇದೆ. ಇದೀಗ ಎಂಟು ಮಂದಿ ಆರೋಪಿಗಳಿಗೂ ನಿರೀಕ್ಷಣಾ ಜಾಮೀನು ಸಿಕ್ಕಿದೆ. ಆದರೆ ವಿನಾಕಾರಣ ಏಟು ತಿಂದ ಮಂದಿಗೆ ಈ ಕ್ಷಣಕ್ಕೂ ನ್ಯಾಯ ಮರೀಚಿಕೆಯಾಗಿದೆ. ಪತ್ರಿಕಾಗೋಷ್ಠಿ ನಡೆಸಿ ಪಪ್ಪಿ ಗ್ಯಾಂಗಿನ ವಿರುದ್ಧ ನಿಂತಿದ್ದಾರಾದರೂ ಸಾಕ್ಷಿಗಳನ್ನೇ ಇಲ್ಲವಾಗಿಸುವ ಪ್ರಯತ್ನಗಳು ಎಗ್ಗಿಲ್ಲದೆ ನಡೆಯುತ್ತಿವೆ.




ಶಂಕ್ರಣ್ಣ ಮುನವಳ್ಳಿ ಈ ಕಾಲೇಜಿನ ನಿರ್ದೇಶಕ. ಈತ ಜಗದೀಶ್ ಶೆಟ್ಟರನ ನೆಂಟಸ್ತಿಕೆಯ ದೆಸೆಯಿಂದ ಬಿಜೆಪಿಗೆ ಜಿಗಿದಾತ. ಈ ಪಪ್ಪಿಯ ಪುಂಡಾಟಿಕೆಯಲ್ಲಿ ಈತನ ಸಂಬಂಧಿಯೇ ಪಾಲ್ಗೊಂಡಿರುವುದರಿಂದ ಇಡೀ ದುಷ್ಟಕೂಟವನ್ನು ಸೇಫ್ ಮಾಡಲು ಶಂಕ್ರಣ್ಣ ಪಣತೊಟ್ಟು ನಿಂತಿದ್ದಾನೆ. ವಿಷಯ ಹೀಗಿರುವುದರಿಂದಲೇ ಮೊನ್ನೆ ಘಟನೆ ನಡೆಯುವಾಗ ಸ್ಥಳದಲ್ಲೇ ಇದ್ದ ಸಿಬ್ಬಂದಿ 'ನಮಗದು ಗೊತ್ತೇ ಇಲ್ಲ' ಅಂತ ಉಲ್ಟಾ ಹೊಡೆದಿದ್ದಾರೆ.

ಅಲ್ಲಿಗೆ ಕೇಸು ಹಳ್ಳ ಹಿಡಿಯುವುದು ಗ್ಯಾರಂಟಿಯಾದಂತಾಗಿದೆ. ನೊಂದ ಮಂದಿಗೆ ನ್ಯಾಯ ಕೊಡಿಸಿ, ಪಪ್ಪಿಯ ಪಾಳೇಗಾರಿಕೆಗೆ ಅಂತ್ಯ ಕಾಣಿಸುವವರ್ಯಾರು? ●

ಬಿದರಿ ನಡೆ ಡಿಐಜಿ ಹುದ್ದೆಯತ್ತ!

ಅತ್ತ ಶಂಕರ ಬಿದರಿ. ಜ್ಯೋತಿಪ್ರಕಾಶ್ ಮಿರ್ಜಿಗೆ ಅಧಿಕಾರ ಹಸ್ತಾಂತರಿಸುತ್ತಲೇ ಇತ್ತಲಿಂದ ನಾನಾ ಊಹಾಪೋಹಗಳು, ಕಟ್ಟುಕಥೆಗಳು ಎಗ್ಗಿಲ್ಲದೆ ಹರಿದಾಡಲಾರಂಭಿಸಿದವು. ಆ ಸರಣಿ-ಈ ಕ್ಷಣಕ್ಕೂ ಮುಂದುವರಿಯುತ್ತಿದೆ. ಇದೆಲ್ಲದಕ್ಕೆ ಯಾವ ಸೂಚನೆಯೂ ಇಲ್ಲದಂತೆ ಬಿದರಿಯವರನ್ನು ಎತ್ತಂಗಡಿ ಮಾಡಿದ್ದು.

ಆದರೆ ಬಿದರಿಯವರು ವರ್ಗಾವಣೆಗೊಂಡದ್ದರ ಹಿಂದೆ ಯಾವುದೇ ಲಾಬಿಗಳಾಗಲಿ, ರಾಜಕೀಯದಾಟಗಳಾಗಲಿ, ವಿರೋಧಿಗಳ ಪಿತೂರಿಗಳಾಗಲಿ ಕಾರಣವಲ್ಲ. ಬಿದರಿ ಹಾಗೂ ಸರ್ಕಾರದ ನಡುವೆಯೂ ಭಿನ್ನಾಭಿಪ್ರಾಯ ತಲೆದೋರಿಲ್ಲ. ಕರ್ನಾಟಕ ಪೊಲೀಸ್ ಇಲಾಖೆಯ ಉನ್ನತ ಹುದ್ದೆ ಅಲಂಕರಿಸುವ ಮಹತ್ವಾಕಾಂಕ್ಷೆ ಹಾಗೂ ಅದಕ್ಕೆ ಬೇಕಾದ ತಯಾರಿಯ ಸಲುವಾಗಿ ಯಡಿಯೂರಪ್ಪನವರೊಂದಿಗಿನ ಮಾತುಕತೆಯ ಮೂಲಕವೇ ಬಿದರಿ ವರ್ಗಾವಣೆಗೊಂಡಿದ್ದಾರೆ.



ಸದ್ಯ ಬಿದರಿ ಕಣ್ಣಿಟ್ಟಿರುವುದು ಡಿಐಜಿ ಹುದ್ದೆಯ ಮೇಲೆ. ಇದಕ್ಕೆ ಸರಿಯಾಗಿ ಇನ್ನೆರಡ್ಮೂರು ತಿಂಗಳಲ್ಲೇ ಪರಿಸ್ಥಿತಿಯೆಲ್ಲಾ ಬಿದರಿ ಕನಸಿಗೆ ಪೂರಕವಾಗಿ ಬದಲಾಗಲಿದೆ. ಇದೀಗ ಡಿಐಜಿಯಾಗಿರುವ ಎಸ್.ಟಿ. ರಮೇಶ್ ಇದೇ ವರ್ಷದ ಜುಲೈ ತಿಂಗಳಲ್ಲಿ ನಿವೃತ್ತಿ ಹೊಂದಲಿದ್ದಾರೆ. ಅಕ್ಟೋಬರ್ ತಿಂಗಳಲ್ಲಿ ನೀಲಂ ಅಚ್ಯುತರಾವ್, ಕುಚ್ಚಣ್ಣ ಶ್ರೀನಿವಾಸ್ ಕೂಡಾ ಸೇವಾವಧಿ ಮುಗಿಸಲಿದ್ದಾರೆ.

ಒಂದು ವೇಳೆ ಡಿಐಜಿ ಹುದ್ದೆಗೆ ಬಿದರಿಯವರಿಗಿಂತಲೂ ಅರ್ಹ ಅಭ್ಯರ್ಥಿಗಳಿದ್ದರೂ ಸಹ ಆರಿಸುವ ಮರ್ಜಿ ಸರ್ಕಾರಕ್ಕೆ ಬಿಟ್ಟದ್ದು. ಅದು ತನಗಿಷ್ಟ ಬಂದವರನ್ನು ಆರಿಸುವ ಅಧಿಕಾರ ಹೊಂದಿದೆ. ನಾಲ್ಕು ಮಂದಿಯ ಪಟ್ಟಿಯನ್ನು ಕೇಂದ್ರಕ್ಕೆ ಸಲ್ಲಿಸಿ ಅನುಮತಿ ಪಡೆದು ಸರ್ಕಾರ ಅವರಲ್ಲಿ ಯಾರನ್ನ ಬೇಕಾದರೂ ಆರಿಸಬಹುದು. ಇದೀಗ ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿರುವ ಎಚ್.ವಿ. ರಂಗನಾಥ್ 1971 ರ ಬ್ಯಾಚ್‌ನವರು. ಇವರಿಗಿಂತ ಹಿರಿಯರು ಲಿಸ್ಟಿನಲ್ಲಿದ್ದರೂ ಸರ್ಕಾರ ರಂಗನಾಥ್‌ರನ್ನೇ ಆಯ್ಕೆ ಮಾಡಿದ್ದನ್ನಿಲ್ಲಿ ಸ್ಮರಿಸಬಹುದು.

ಬಿದರಿಯವರಿಗಿರುವ ಇನ್ನೊಂದು ಆಶಾದಾಯಕ ಅಂಶವೆಂದರೆ ಕೇಂದ್ರ ಸರ್ಕಾರ ನಿವೃತ್ತಿ ವಯಸ್ಸು ಏರಿಸಬಹುದೆಂಬ ನಿರೀಕ್ಷೆ. ಇದೀಗ ನಿವೃತ್ತಿ ವಯಸ್ಸು 60 ಎಂದಿದೆ. ಆದರೆ ಕೇಂದ್ರ ಅದನ್ನು 62 ಕ್ಕೇರಿಸುವ ಲಕ್ಷಣಗಳಿವೆ. ಹೀಗೇನಾದರೂ ಆದರೆ ಬಿದರಿ ಅಖಂಡ ಮೂರು ವರ್ಷಗಳ ಕಾಲ ನಿಶ್ಚಿಂತೆಯಿಂದ ಡಿಐಜಿಯಾಗಿ ಕರ್ತವ್ಯ ನಿರ್ವಹಿಸಬಹುದು. ಬಿದರಿಯವರಿಗಿರುವ ಇತರೆ ಪೂರಕ ಅಂಶಗಳಂತೆಯೇ ಜಾತಿಯೂ ಪ್ಲಸ್ ಆಗಲಿರುವುದು ಸ್ಪಷ್ಟ. ಯಾಕೆಂದರೆ ಯಡಿಯೂರಪ್ಪನ ಸರ್ಕಾರ ಆಯಕಟ್ಟಿನ ಜಾಗಗಳಲ್ಲಿ ತನ್ನವರನ್ನು ನೇಮಿಸುವ ಕೆಟ್ಟ ಚಾಳಿ ಆರಂಭಿಸಿಬಿಟ್ಟಿದೆ. ಚಾಳಿಯಿಂದಾಗಿ ಕೆಲವೊಮ್ಮೆ ಅರ್ಹರಿದ್ದರೂ ಜಾತಿ ಕಾರಣದಿಂದಲೇ ಅವಕಾಶ ವಂಚಿತರಾಗಿರುವ ಅಪಾಯಗಳೂ ಇವೆ. ಎಲ್ಲಾ ರೀತಿಯಿಂದ ಅರ್ಹರಾದವರೇ ಆಯ್ಕೆಯಾದರೂ ಅದಕ್ಕೆ ಜಾತಿಯನ್ನು ಆರೋಪಿಸುವ ಸಾಧ್ಯತೆಯೂ ಇದೆ. ಇದೆಲ್ಲ ಯಡಿಯೂರಪ್ಪನವರ ನೆರಳಿನಲ್ಲಾದ ಅನಾಹುತ.

ಇವೆಲ್ಲ ಏನೇ ಇದ್ದರೂ ಡಿಐಜಿಯಂಥ ಮಹತ್ವದ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಿಸುವ ಸಂದರ್ಭದಲ್ಲೂ ಜಾತಿಯೊಂದೇ ಮಾನದಂಡವಾಗದಿರಲೆಂಬುದು ಪ್ರಜ್ಞಾವಂತರ ಹಾರೈಕೆ. ●

ಸಂಗಮೇಶ್ ಸರಿ ಅಲ್ಲ ಅಂದ್ರೆ ರೇಣುಕಾಚಾರಿ?

ಸುತ್ತೂರಿನ ಶರಣರ ಡಾನ್ ಸಮ್ಮುಖದಲ್ಲಿ ಸೇರಿಕೊಂಡ ಮಠಾಧೀಶರೆಲ್ಲಾ ಬಹುಸಂಖ್ಯಾತರ ಧಿಮಾಕಿನಲ್ಲಿ "ಇನ್ನು ಮುಂದೆ ಕರ್ನಾಟಕದಲ್ಲಿ ಲಿಂಗಾಯತ ನಾಯಕರಿಗೆ, ಅಧಿಕಾರಿಗಳಿಗೆ ತೊಂದರೆ ಕೊಟ್ಟಿದ್ದಾದರೆ ನಾವು ಒಗ್ಗಟ್ಟಿನಿಂದ ಪ್ರತಿಭಟಿಸಿ ನಮ್ಮವರಿಗೆ ರಕ್ಷಣೆ ಕೊಡುತ್ತೇವೆ" ಎಂಬ ನಿರ್ಣಯ ಜಾರಿಯಾದ ಮರುದಿನವೇ ಭದ್ರಾವತಿಯ ಶರಣ ಶಾಸಕ ಸಂಗಮೇಶನನ್ನು ಎಡೂರಪ್ಪ ಒದ್ದು ಒಳಗಾಕಿಸಿದನಂತಲ್ಲಾ.

ಇದಕ್ಕೆ ಆಯನೂರ್ ಮಂಜುನಾಥ್ ಎಂಬ ಶರಣ ಕೊಡುವ ಸಮಜಾಯಿಸಿ ಏನೆಂದರೆ "ಸದರಿ ಶಾಸಕ ಅನಾಗರಿಕ. ದಿಢೀರನೆ ಶ್ರೀಮಂತನಾಗಿರುವ ಅವನಿಗೆ ನಾಗರಿಕವಾದ ನಡವಳಿಕೆಯೇ ಗೊತ್ತಿಲ್ಲ. ಅಧಿಕಾರಿಗಳನ್ನು ಹೇಗೆ ಮಾತನಾಡಿಸಬೇಕು, ಹೆಣ್ಣುಮಕ್ಕಳನ್ನು ಹೇಗೆ ಮಾತನಾಡಿಸಬೇಕು ಎಂಬ ಕನಿಷ್ಠ ತಿಳಿವಳಿಕೆಯೂ ಇಲ್ಲ. ಆದ್ದರಿಂದ ಆತನ ಬಂಧನಕ್ಕಾಗಿ ಇಡೀ ಭದ್ರಾವತಿ ನಾಗರಿಕರು ಕಾಯುತ್ತಿದ್ದರು. ಅದರಂತೆ ಆತ ಅರೆಸ್ಟಾಗಿ ಒಳಗೋದ. ಸುತ್ತೂರಿನ ನಿರ್ಣಯದೊಳಕ್ಕೆ ಇಂತ ಅನಾಗರಿಕ ಶರಣರು ಸೇರುವುದಿಲ್ಲ" ಎಂದು ಉತ್ತರ ಕೊಡುವಾಗ, ಎದುರುಗಿದ್ದ ಕಿಡಿಗೇಡಿಗಳು "ಹಾಗಾದರೆ ರೇಣುಕಾಚಾರಿ ಪರವಾಗಿಲ್ಲವ ಸಾರ್?" ಎಂದು ಕೇಳಿದರಂತಲ್ಲಾ, ಥೂತ್ತೇರಿ!

ಥೂತ್ತೇರಿ
ಯಾಹೂ

* * * *

ಬಿಜೆಪಿಗೆ ಹೇಳಿಮಾಡಿಸಿದಂತಿರುವ ಸಂಗಮೇಶ್ ಎಂಬ ಶಾಸಕ ಅನಿವಾರ್ಯವಾಗಿ ಕಾಂಗ್ರೆಸ್‌ನಲ್ಲಿರುವ ಕಾರಣಕ್ಕೆ ಅತ್ತ ಮೈಸೂರಿನಿಂದ ಸಿದ್ಧರಾಮಯ್ಯ, ಕನಕಪುರದಿಂದ ಡಿಕೆಶಿ, ಕಾಗೋಡಿನಿಂದ ತಿಮ್ಮಪ್ಪ ಇವರೆಲ್ಲಾ ಬಂದು ಸಂಗಮೇಶನಿಗೆ ಬೆಂಬಲ ಕೊಟ್ಟ ಫಲವಾಗಿ ಸದರಿ ಸಂಗ ಮಂಗನಂತಾಗಿ ಹೋದನಂತಲ್ಲಾ. ಡಿಕೆಶಿ ಭದ್ರಾವತಿಗೆ ಬರಬೇಕಾದರೆ ಆತನ ಕಾಲೇಜು ಮತ್ತು ಅಭಿಮಾನಿ ಸಂಘವಿದೆ; ವಾಸ್ತವವಾಗಿ ಈ ಭದ್ರಾವತಿ ಡಿಕೆಶಿಗೇ ಹೇಳಿಮಾಡಿಸಿದ ಕ್ಷೇತ್ರ. ಈತನ ಜೊತೆಯಲ್ಲಿ ಹುಟ್ಟಿದಂತಿರುವ ಅಪ್ಪಾಜಿ ಸೋತು ಸೊರಗಿದ್ದಾನೆ. ಜೊತೆಗೆ ಜೆಡಿಎಸ್‌ನಲ್ಲಿದ್ದಾನೆ. ಆದ್ದರಿಂದ ಅನಿವಾರ್ಯವಾಗಿ ಸಂಗೇಮಶ್‌ನೇ ಗತಿ ಡಿಕೆಶಿಗೆ. ಇನ್ನು ಸಿದ್ಧರಾಮಯ್ಯನ ಕಡೆಯ ಕುರುಬರು ತನಗೆ ಓಟು ಮಾಡಿದರೆ ಸಾಕು, ಅದರೊಳಕ್ಕೆ ನನ್ನ ಶರಣರ ಓಟು ಮಿಕ್ಸಾದರೆ ಯಾರೂ ನನ್ನನ್ನು ಅಲ್ಲಾಡಿಸುವಂತಿಲ್ಲಾ ಎಂದು ಸಿದ್ಧುವನ್ನು ಓಲೈಸಿಕೊಂಡು ಮೆರೆಯುತ್ತಿರುವ ಸಂಗಮೇಶನನ್ನು ಸೋಲಿಸದ ಹೊರತು ಆತನ ಅನಾಗರಿಕ ನಡವಳಿಕೆ ಸರಿಹೋಗಲಾರದು ಎಂದು ಭದ್ರಾವತಿಯ ಜನ ಕಾಯುತ್ತಿದ್ದಾರಂತಲ್ಲಾ. ಕೋರ್ಟಿಗೂ ಕೇರ್ ಮಾಡದ ಸಂಗಮೇಶ್ ತನ್ನನ್ನು ಕಾಯಲು ನೇಮಕವಾಗಿದ್ದ ಇನ್ಸ್‌ಪೆಕ್ಟರನೇ ಅವಮಾನವಾಗುವಂತಹ ಅನಾಹುತ ತಂದಿಟ್ಟಿದ್ದಾನಂತಲ್ಲಾ, ಥೂತ್ತೇರಿ!

* * * *

ಛಲ ಬಿಡದ ತ್ರಿವಿಕ್ರಮನು ಮರದ ಬಳಿಗೆ ಹೋಗಿ, ಕೊಂಬೆಯಿಂದ ಬೇತಾಳನನ್ನು ಇಳಿಸಿಕೊಂಡು, ಸ್ಮಶಾನ ಕಡೆಗೆ ಹೆಜ್ಜೆ ಹಾಕುವಂತೆ ದೇವೇಗೌಡರು ಪುನಃ ಬುದ್ಧಿಜೀವಿಗಳನ್ನು ಕಟ್ಟಿಕೊಂಡು ಜನಾಂದೋಲನಕ್ಕೆ ಹೊರಟಿದ್ದಾರಂತಲ್ಲಾ. ಬನ್ನಿ ಸ್ವತಃ ದೇವೇಗೌಡರೆ ಫೋನ್ ತೆಗೆದುಕೊಂಡು ಕರ್ನಾಟಕದ ಬುದ್ಧಿಜೀವಿಗಳಿಗೆಲ್ಲಾ ಫೋನು ಮಾಡಿ, ಬನ್ನಿ ಗುರುಗಳೇ ಎಂದು ಆಹ್ವಾನಿಸಿ ಕಾಯುತ್ತ ಕುಳಿತಿರಬೇಕಾದರೆ, ಕುಯ್ಯದೇ ಉಳಿದುಬಿಟ್ಟ ವಯಸ್ಸಾದ ಹೋತನಂತೆ ಕಾಣುವ ಸಿಪಿಎಂ ಗಿರಾಕಿಯೊಂದು ಒಳಬಂದಿತಂತಲ್ಲಾ. ಅದರ ಹಿಂದೆ ವಯಸ್ಸಾಗಿದ್ದರೂ ... ಮಹಿಳೆಯೊಬ್ಬರು, ಅವರ ಹಿಂದೆ ಯಕ್ಷಗಾನದ ಮಾಜಿ ನಟ, ಆತನ ಹಿಂದೆ ಸಪ್ಪೆಯಾದ ... ಸಂಸ್ಥಾಪಕರಾದ ಕೋಲಾರದ ಹಿಂದುಳಿದ ನಾಯಕರು, ವಕೀಲರು ಮತ್ತು ದೊರೆಸ್ವಾಮಿಗಳು ... ದೇವೇಗೌಡರ ನಿರೀಕ್ಷೆಗೂ ಮೀರಿದ ಜನ ಬರಲಾಗಿ, ಸಂತೃಪ್ತ ನಗೆ ಬೀರಿದ ಗೌಡರು "... ರಾಜಕೀಯ ಜೀವನ, ಹೋರಾಟ, ಫಲಿತಾಂಶದಂತಹವನ್ನು ಎಡೂರಪ್ಪನಿಗೆ ಹೋಲಿಸಬೇಡಿ ... ಅನಿವಾರ್ಯವಾಗಿ ಬುಡುಬು ಮುಖ್ಯಮಂತ್ರಿ ವಿರುದ್ಧ ಹೋರಾಟ ಮಾಡಬೇಕಾದಂತಹ ... ಪರಂತೂ ಅನ್ಯಥಾ ದುರಾಲೋಚನೆಗಳಿಲ್ಲ" ಎಂದರಂತಲ್ಲಾ, ಥೂತ್ತೇರಿ!! ●

ಅಕ್ರಮ್ ಎನ್‌ಕೌಂಟರ್ ಬದರಿ ಕುಣಿಕೆಯ ಕೊನೆಯ ಮಿಕ

ಕೋಡಿಪಾಳ್ಯದ ಲ್ಯಾಂಡ್ ಬ್ರೋಕರ್ ನಂಜುಂಡಪ್ಪನನ್ನು ಮೂಡಲಪಾಳ್ಯದ ನಡುರಸ್ತೆಯಲ್ಲಿ ಗುಂಡಿಟ್ಟು ಕೊಂದಾಗಲೇ ಪಾತಕಿ ಅಕ್ರಮ್‌ನ ಎನ್‌ಕೌಂಟರ್ ನಿಗದಿಯಾಗಿತ್ತು.

ಅದಕ್ಕೆ ಗಳಿಗೆ ಕೂಡಿಬಂದಿದ್ದು ಮೇ ಮೂರರ ನಸುಕಿನ 4.30 ಕ್ಕೆ.

ಪೀಣ್ಯದ ಎಚ್‌ಎಂಟಿ ಲೇಔಟಿನ ಪಾರ್ಕ್‌ನ ಮಗ್ಗುಲಲ್ಲೇ ಅಕ್ರಮ್ ಹೆಣವಾಗಿದ್ದ. ಇನ್ಸ್‌ಪೆಕ್ಟರ್ ಎಂ.ಎಸ್. ನಾಗರಾಜ್ ಹಾರಿಸಿದ ಗುಂಡು ನೇರವಾಗಿ ಆತನ ತಲೆ ಹೊಕ್ಕಿತ್ತು. ಪಕ್ಕದಲ್ಲೇ ಆಂಧ್ರದ ರಿಜಿಸ್ಟ್ರೇಷನ್ನಿನ ಬಳಿ ಅಸ್ಸೆಂಟ್ ಕಾರೊಂದು ಅನಾಥವಾಗಿ ನಿಂತಿತ್ತು. ಕೆಲವೇ ಅಡಿಗಳ ದೂರದಲ್ಲಿ ಆ ರಿವಾಲ್ವರ್ ಬಿದ್ದಿತ್ತು. ಅದೇ ರಿವಾಲ್ವರ್‌ನಿಂದ ಅಕ್ರಮ್ ಸಿಸಿಬಿಯ ಎಸಿಪಿ ನ್ಯಾಮಗೌಡರ ಮೇಲೆ ಗುಂಡು ಹಾರಿಸಿದ್ದ. ಬುಲೆಟ್ ಪ್ರೂಫ್ ಜಾಕೆಟ್‌ಗೆ ಆತ ಹಾರಿಸಿದ ಗುಂಡು ತಾಗಿತ್ತಂತೆ. ಅಕ್ರಮ್ ಹಾರಿಸಿದ ಮತ್ತೊಂದು ಗುಂಡು ಪೊಲೀಸ್ ಜೀಪಿನ ಗಾಜನ್ನು ಹೊಕ್ಕಿ ತೂರಿಹೋಗಿತ್ತು. ಮೇ ಮೂರರ ಮಂಗಳವಾರದ ಐದು ಗಂಟೆಯ ಹೊತ್ತಿಗೆಲ್ಲ ಅಕ್ರಮ್ ಎಂ.ಎಸ್. ರಾಮಯ್ಯ ಆಸ್ಪತ್ರೆಯ ಶವಾಗಾರದಲ್ಲಿ ನಿಸ್ತೇಜ ಕಳೇಬರವಾಗಿ ಬಿದ್ದುಕೊಂಡಿದ್ದ.



ಹತನಾದ ಅಕ್ರಮ್

ಅದು ಮೊದಲೇ ನಿಶ್ಚಿತ ಎನ್‌ಕೌಂಟರ್. ಕಮೀಷನರ್ ಬದರಿ ಇನ್ನೆರಡು ದಿನದ ಮಟ್ಟಿಗೇನಾದರೂ ಬೆಂಗಳೂರಿನ ಪೊಲೀಸ್ ಕಮೀಷನರ್ ಹುದ್ದೆಯಲ್ಲಿದ್ದರೆ ಬಹುಶಃ ಅಕ್ರಮ್ ಅವರ ಕೊನೆಯ ಶಿಕಾರಿಯಾಗಿರುತ್ತಿದ್ದ. ಆತನ ಸಾವಿಗೆ ಮಿರ್ಜಿಯ ಹೆಸರೇ ಬರೆದಿಡಲಾಗಿತ್ತೋ ಏನೋ. ಭಯಾನಕ ಪಾತಕಿಯೊಬ್ಬನ ಸಂಹಾರದ ಮೂಲಕ ಮಿರ್ಜಿ ಸಾಹೇಬರ ಪೊಲೀಸ್ ಪಾರುಪತ್ತೆ ಶುರುವಾಗಿದೆಯಾದರೂ ಅಸಲಿಗೆ ಅಕ್ರಮನ ಶಿಕಾರಿ ಮಾಡಿದ್ದು ಶಂಕರ್ ಬಿದರಿಯೆ!

ಪೊಲೀಸ್ ಮೂಲಗಳೇ ಹೇಳುವಂತೆ ಅಕ್ರಮ್ ಎನ್‌ಕೌಂಟರ್ ಆಗುವ ನಾಲ್ಕು ದಿನಗಳ ಮೊದಲೇ ಸಿಸಿಬಿ ಪೊಲೀಸರ ಬೋನಿಗೆ ಬಿದ್ದಿದ್ದ!

ಮಂಗಳವಾರದ ಎನ್‌ಕೌಂಟರ್ ಏನಿದ್ದರೂ ಅಕ್ರಮನ ಅನಾಚಾರದ ಕ್ಲೈಮ್ಯಾಕ್ಸ್ ಮಾತ್ರ. ಎಪಿ ರಿಜಿಸ್ಟ್ರೇಷನ್ನಿನ ಬಿಳಿಯ ಅಸ್ಸೆಂಟ್ ಕಾರಿನಲ್ಲಿ ಆತ ನಂದಿನಿ ಲೇಔಟಿನಿಂದ ಹೊರಬಿದ್ದ ಬೆಳಗಿನ ಜಾವ ಮೂರೂ ಮುಕ್ಕಾಲರ ಹೊತ್ತಿಗೆ ದಾಸರಹಳ್ಳಿ ಕ್ರಾಸಿನಲ್ಲಿ ಆತನ ಕಾರು ಪೊಲೀಸರ ಕಣ್ಣಿಗೆ ಬಿತ್ತು. ಅಲ್ಲಿಂದ ಪೀಣ್ಯದ ಎಂಟನೇ ಮೈಲಿಯತ್ತ ಅಕ್ರಮ್ ಕಾರು ಓಡಿಸಿದ. ಸುಮಾರು ಎರಡು ಮೈಲಿ ಆತನ ಕಾರ್ ಚೇಸ್ ಮಾಡಿದ ಪೊಲೀಸರಿಗೆ ಅಂತಿಮವಾಗಿ ಎಚ್‌ಎಂಟಿ ಪಾರ್ಕ್ ಬಳಿ ಅಕ್ರಮ್ ಬಲಿಯಾದ; ಇತ್ಯಾದಿ ಏನೇ ಕತೆಯನ್ನು ಪೊಲೀಸರು ಹೇಳಿದರೂ ಕಳೆದ ನಾಲ್ಕು ದಿನಗಳಿಂದ ಸಿಸಿಬಿ ಪೊಲೀಸರ ಓಡಾಟ, ಧಾವಂತ ಮತ್ತು ಕಣ್ಣಾಮುಚ್ಚಾಲೆ ಕಂಡವರಿಗೆ ಅಕ್ರಮ್‌ನ ಎನ್‌ಕೌಂಟರ್‌ನ ಮರ್ಮ ಅರ್ಥವಾಗಲೇಬೇಕು.

ಆತನನ್ನು ಧಾರವಾಡದಲ್ಲಿ ಹಿಡಿದು ಬೆಂಗಳೂರಿಗೆ ಕರೆತಂದರೆ? ರಿಯಾನ ಎಂಬ ಆತನ ಪ್ರೇಯಸಿಯೇ ಆತನನ್ನು ಪೊಲೀಸರಿಗೆ ಹಿಡಿದು ಕೊಟ್ಟಳೆ? ಹೆಣ್ಣಿನ ವ್ಯಾಮೋಹ ಅಂತಿಮವಾಗಿ ಆತನನ್ನು ಸಾವಿನ ಕುಣಿಕೆಗೆ ಸೆಳೆದು ತಂದಿತ್ತೆ? ಆತನ ರಿವಾಲ್ವರ್‌ನ ಮರ್ಮ ಆತನ ಸಾವಿನ ಜೊತೆಗೇ ಮುಚ್ಚಿಹೋಯಿತೆ? ಆತ ಬೆಂಗಳೂರಿನ ಪಾತಕಿ ಮಾಹಿನ್‌ನ ಸಹಚರನೆ? ಜೆಡಿಎಸ್ ಕೌನ್ಸಿಲರ್ ದಿವಾನಾ ಅಲಿಯನ್ನು ಕೊಂದು ಪರಾರಿಯಾಗಿದ್ದ ಮಾಹಿನ್‌ಗೆ ಈತನೇ ಶಿವಮೊಗ್ಗದಲ್ಲಿ ಆಶ್ರಯ ಕಲ್ಪಿಸಿದ್ದನೆ? ಅಲಿ ಹತ್ಯೆಗೆ ಬಳಕೆಯಾದ ರಿವಾಲ್ವರ್ ಈತನ ಮೂಲಕವೇ ಬೆಂಗಳೂರಿಗೆ ಬಂದಿತ್ತಾ? ಮೈಸೂರು ಜೈಲಲ್ಲಿ ಬೆತ್ತನಗೆರೆ ಸೀನನ ಹತ್ಯಾಯತ್ನಕ್ಕೆ ಬಳಕೆಯಾದ ರಿವಾಲ್ವರಿಗೂ ಈತನೇ ಕಾರಣಕರ್ತನೆ?


ಒಂದಲ್ಲ ಎರಡಲ್ಲ ಇಂಥ ಅನೇಕ ಪ್ರಶ್ನೆಗಳನ್ನು ತನ್ನ ಜೊತೆಗೇ ಮಣ್ಣುಗೂಡಿಸಿದ್ದಾನೆ ಪಾತಕಿ ಅಕ್ರಮ್. 2011 ರ ಏಪ್ರಿಲ್ 17 ರ ಭಾನುವಾರ ಸಂಜೆ ಮೂಡಲಪಾಳ್ಯದ ಟೆಂಟ್ ರಸ್ತೆಯಲ್ಲಿ ಅಕ್ರಮ್ ಗುಂಡಿಟ್ಟು ಕೊಂದ ಲ್ಯಾಂಡ್ ಡೀಲರ್ ನಂಜುಂಡಪ್ಪನ ಸಾವಿಗೆ ಕೊನೆಗೂ ಪೊಲೀಸರು ನ್ಯಾಯ ಸಲ್ಲಿಸಿದಂತಾಯ್ತು. ಹಾಗೇ ನಂಜುಂಡಪ್ಪನನ್ನು ಕೊಂದು ಅದಕ್ಕೂ ಮೂರು ದಿನಗಳ ಮೊದಲು ನಂಜುಂಡಪ್ಪನ ಸ್ನೇಹಿತ ಧನರಾಜ್ ಮೇಲೆ ಫೈರ್ ಮಾಡುವ ಮೂಲಕ ಕಮೀಷನರ್ ಬಿದರಿಯವರನ್ನು ಕೆಣಕಿದವನು ಅಕ್ರಮ್.

ಬಹುಶಃ ಕಮೀಷನರ್ ಬದರಿಯವರ ಜಾಯಮಾನ ಗೊತ್ತಿದ್ದರೆ ಅಕ್ರಮ್ ದುಸ್ಸಾಹಸಕ್ಕೆ ಕೈ ಹಾಕುತ್ತಿರಲಿಲ್ಲವೇನೋ ಅಥವಾ ತನ್ನ ಸಾಮರ್ಥ್ಯದ ಬಗ್ಗೆ ಆತನಿಗೆ ಅತಿಯಾದ ಆತ್ಮವಿಶ್ವಾಸವಿತ್ತೇನೋ. ಮೊದಲು ಕೇರಳಕ್ಕೆ ಹೋಗಿ, ಅಲ್ಲಿಂದ ಮುಂಬಯಿ ತಲುಪಿ ಆನಂತರ ಹುಷಾರಾಗಿ ದುಬೈ ಸೇರಿಕೊಳ್ಳುವುದು ಆತನ ಲೆಕ್ಕಾಚಾರವಾಗಿತ್ತೆ? ಅದು ಉಲ್ಟಾ ಹೊಡೆಯಿತೆ? ಬೆಳಗಾವಿ ಮೂಲಕ ಗೋವಾ ತಲುಪಿ ಅಲ್ಲಿಂದ ಮುಂಬಯಿ ತಲುಪುವ ಅಕ್ರಮ್ ಧಾರವಾಡದಲ್ಲೇ ಪೊಲೀಸರ ಬೋನಿಗೆ ಬಿದ್ದಿರಬೇಕು. ಆತನ ಕುಖ್ಯಾತಿಯೇ ಹಾಗಿತ್ತು.

ಮೂಲತಃ ಭದ್ರಾವತಿಯ ಜನ್ನತ್ ಗಲ್ಲಿಯ ಸೈಯದ್ ರಷೀದ್‌ನ ಎಂಟು ಮಂದಿ ಮಕ್ಕಳ ಪೈಕಿ ಅಕ್ರಮ್ ಹಿರಿಯ. ಸೈಯದ್ ರಷೀದ್ ಆ ಕಾಲಕ್ಕೇ ಶಿವಮೊಗ್ಗದಲ್ಲಿ ಠಿಕಾಣಿ ಹೂಡಿ ಗಂಧದ ಸ್ಮಗ್ಲಿಂಗ್ ನಡೆಸಿಕೊಂಡಿದ್ದ. ಈತನ ಮಕ್ಕಳಾದ ಅಕ್ರಮ್, ಮುಷೀರ್, ಮನ್ಸೂರ್ ನಾಸಿರ್ ಉರ್ಫ್ ನಾದಿರ್, ಇರ್ಫಾನ್, ಮುಜೀಬ್, ರಿಜ್ವಾನ್ ಮತ್ತು ಪಯೂಬ್ ಎಲ್ಲರೂ ತಂದೆಯ ಕಾಡುಗಳ್ಳತನವನ್ನೇ ಮೈಗೂಡಿಸಿಕೊಂಡರು.

1985 ರ ಹೊತ್ತಿಗೆ ತಂದೆ ರಷೀದ್ ಶಿವಮೊಗ್ಗದ ಅರಣ್ಯ ಇಲಾಖೆಯನ್ನೇ ನಡುಗಿಸಿಬಿಟ್ಟಿದ್ದ. ಗಂಧ ಕದಿಯಲು ಮುಖ್ಯವಾಗಿ ಬೇಕಾದದ್ದು ರಿವಾಲ್ವರ್ ಮತ್ತು ಗಾಡಿ. ಸ್ವಂತ ಲಾರಿಯನ್ನೋ ಕಾರನ್ನೋ ಇಟ್ಟುಕೊಂಡು ಗಂಧ ಕದ್ದು ಸಾಗಿಸ ಹೊರಟರೆ ಗಾಡಿ ಇಂಥವರಿಗೆ ಸೇರಿತ್ತೆಂಬುದೇ ಕೋರ್ಟಿನಲ್ಲಿ ಸಾಕ್ಷಿಯಾಗುತ್ತದೆ. ಅದಕ್ಕೆ ಬಹುತೇಕ ಗಂಧಕಳ್ಳರು ಕದ್ದ ಕಾರುಗಳನ್ನು ಬಳಸುತ್ತಾರೆ. ಹೀಗೆ ಕಾಡುಗಳ್ಳತನಕ್ಕೊಂದು ಕಾರುಗಳನ್ನು ಕದಿಯುವುದಕ್ಕೆಂದೇ ನಿಂತವನು ರಷೀದ್‌ನ ಐದನೇ ಮಗ ಇರ್ಫಾನ್!

1985 ರಲ್ಲೇ ಶಿವಮೊಗ್ಗದ ದೊಡ್ಡಪೇಟೆ ಪೊಲೀಸ್ ಠಾಣೆಯಲ್ಲಿ ರಷೀದ್ ವಿರುದ್ಧ ಆರ್ಮ್ಸ್ ಕೇಸು ಬಿದ್ದಿತ್ತು. 1986 ರಲ್ಲಿ ಹೊಳೆಹೊನ್ನೂರು, 87 ರಲ್ಲಿ ಶಿವಮೊಗ್ಗ ಗ್ರಾಮಾಂತರ, 88 ರಲ್ಲಿ ದೊಡ್ಡಪೇಟೆ, 89 ರಲ್ಲಿ ಸಿರಾಳಕೊಪ್ಪ 91 ರಲ್ಲಿ ಧಾರವಾಡ, 95 ರಲ್ಲಿ ಸಾಗರ, 2002 ರಲ್ಲಿ ಭದ್ರಾವತಿ, ಹೊಳೆಹೊನ್ನೂರು–ಹೀಗೆ ಶಿವಮೊಗ್ಗ-ಧಾರವಾಡ ಸುತ್ತಮುತ್ತಲ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ರಷೀದ್ ಮತ್ತಾತನ ಮಕ್ಕಳ ಮೇಲೆ ರಿವಾಲ್ವರ್ ಹೊಂದಿದ್ದ ಕಾರಣಕ್ಕೆ ಆರ್ಮ್ಸ್ ಆಕ್ಟ್ ದಾಖಲಾಗಿತ್ತು. ಕ್ರಮೇಣ ಹಾವೇರಿ, ಚನ್ನಗಿರಿ, ಶಿವಮೊಗ್ಗ ಮಂಗಳೂರು, ಕಾಸರಗೋಡು ಮತ್ತು ಕೇರಳದ ಭಾಗಕ್ಕೆ ರಷೀದ್‌ನ ಕಾರ್ಯಾಚರಣೆ ವಿಸ್ತರಿಸಿತು. 2002 ರಿಂದ 2003 ರವರೆಗೆ ರಷೀದ್‌ನ ಮಕ್ಕಳ ಪೈಕಿ ಇರ್ಫಾನ್ ಮತ್ತು ನಾಸಿರ್ ಕಾರುಗಳ್ಳತನಕ್ಕಿಳಿದರು. ಅಕ್ರಮ್ ಕಾಡಿನ ಕಾರ್ಯಾಚರಣೆಯನ್ನು ನಿಭಾಯಿಸಿದರೆ ಮುಜೀಬ್ ಮತ್ತು ರಿಜ್ವಾನ್ ಬೆಂಗಳೂರಿನಲ್ಲಿ ಕದ್ದ ಗಂಧವನ್ನು ಮಾರುತ್ತಿದ್ದರು. ಪಯೂಬ್ ಮತ್ತು ಮನ್ಸೂರ್ ಬೆಳಗಾವಿ ಸೇರಿಕೊಂಡು ಅಲ್ಲಿಂದ ಗೋವಾಕ್ಕೆ ಗಂಧ ಸಾಗಿಸಲಾರಂಭಿಸಿದರು.



ಎನ್‌ಕೌಂಟರ್ ನಡೆದ ತಾಣದಲ್ಲಿ

ಈ ಮಧ್ಯೆ ರಷೀದ್ ಮತ್ತು ಶಿವಮೊಗ್ಗದ ಮತ್ತೊಬ್ಬ ಕುಖ್ಯಾತ ಕಾಡುಗಳ್ಳ ದಾಡಿ ಬಷೀರ್ ಮಧ್ಯೆ ನೆಂಟಸ್ತಿಕೆಯಾಯಿತು. ದಾಡಿ ಬಷೀರ್‌ನ ಮಗಳನ್ನು ಮಗ ನಾಸಿರ್ ಮದುವೆಯಾದದ್ದೇ ಸಹ್ಯಾದ್ರಿಯ ಕಾಡುಗಳ್ಳತನಕ್ಕೆ ಹೊಸ ಹುಮ್ಮಸ್ಸು ಹುಟ್ಟಿತು. ಆ ಹೊತ್ತಿಗಾಗಲೇ ಬೆಂಗಳೂರಿನಿಂದ ಸ್ಯಾಂಡಲ್‌ವುಡ್ ಸ್ಮಗ್ಲಿಂಗ್ ಮಾಡುತ್ತಿದ್ದ ಡೂಮ್ ಪ್ಯಾರೇಜಾನ್, ಗೋರಿಪಾಳ್ಯದ ದನಗರ್ ಖಲೀಲ್, ಟಪ್ಪೂ, ನಗರದ ಲತೀಫ್, ಭಕ್ಷಿಗಾರ್ಡನ್ನಿನ ಶಾಮೀರ್, ಕಲ್ಲಹಳ್ಳಿಯ ಸುಲ್ತಾನ್‌ಜಾನ್, ಟ್ಯಾಂಕ್ ಗಾರ್ಡನ್ನಿನ ಖುದ್ದೂಸ್, ಆಜಾದ್‌ನಗರದ ಸರ್ದಾರ್, ಮೈಸೂರಿನ ಬೋಟೀಸಾಬ್ ಮತ್ತು ಸರ್ದಾರ್ ಮುಂತಾದ ಹಳೇ ಗಂಧದ ಸ್ಮಗ್ಲರುಗಳಿಗೆ ವಯಸ್ಸಾಗಿ ವೃದ್ಧಾಪ್ಯ ಸಮೀಪಿಸಿದ್ದರಿಂದ ಹೊಸ ತಲೆಮಾರಿನ ರಷೀದ್‌ನ ಮಕ್ಕಳದ್ದೇ ಏಕಾಧಿಪತ್ಯವಾಗಿ ಹೋಯಿತು.

ಆದರೆ ಶಿವಮೊಗ್ಗದ ದಾಡಿ ಬಷೀರ್ ಮತ್ತು ರಷೀದ್‌ನ ನೆಂಟಸ್ತಿಕೆಯಲ್ಲಿ ಬಿರುಕು ಹುಟ್ಟಿತು!

ಕದ್ದ ಲೋಡುಗಟ್ಟಲೇ ಗಂಧದ ಲಾಭವನ್ನು ಅಕ್ರಮ್ ಮತ್ತು ನಾಸಿರ್ ಇಬ್ಬರೇ ಲಪಟಾಯಿಸಿಬಿಟ್ಟರು. ನಾಸಿರ್‌ನ ವಿರುದ್ಧ ದಾಡಿ ಬಷೀರ್ ಒಳಗೊಳಗೇ ಕತ್ತಿಮಸೆಯಲಾರಂಭಿಸಿದ. ಆಗ ಶಿವಮೊಗ್ಗಕ್ಕೆ ಎಸ್‌ಪಿಯಾಗಿದ್ದ ಸಿದ್ದಪ್ಪನವರನ್ನು ಸದ್ದಿಲ್ಲದೇ ಸಂಪರ್ಕಿಸಿದ ದಾಡಿ ಬಷೀರ್ ತನ್ನ ಬೀಗ ರಷೀದ್ ಮತ್ತಾತನ ಮಕ್ಕಳ ಅಷ್ಟೂ ಕರಾಳದಂಧೆಯ ಬಗ್ಗೆ ಮಾಹಿತಿ ಕೊಟ್ಟುಬಿಟ್ಟ.

ರಷೀದ್ ಗ್ಯಾಂಗಿನ ಅಷ್ಟೂ ಚಟುವಟಿಕೆಗಳ ಬಗ್ಗೆ ಶಿವಮೊಗ್ಗ ಪೊಲೀಸರಿಗೆ ಸಮಗ್ರ ಮಾಹಿತಿ ಸಿಕ್ಕಿದ್ದೇ ದಾಡಿ ಬಷೀರ್‌ನ ಮೂಲಕ. ರಷೀದ್ ಮತ್ತಾತನ ಮಕ್ಕಳ ಅಷ್ಟೂ ಅಡ್ಡೆಗಳ ಮೇಲೆ ಪೊಲೀಸರು ರೇಡು ಬಿದ್ದರು. ಮನ್ಸೂರ್, ಮುಜೀಬ್ ಮತ್ತು ಮುಷೀರ್ ಸಿಕ್ಕಿಬಿದ್ದು ಜೈಲುಪಾಲಾದರು. ರಷೀದ್ ಶಿವಮೊಗ್ಗವನ್ನೇ ತೊರೆದು ಬೆಂಗಳೂರಿಗೆ ಬಂದು. ನಾಸಿಕ್, ಅಕ್ರಮ್, ಇರ್ಫಾನ್ ಕೂಡ ಬೆಂಗಳೂರಿಗೆ ಬಂದು ತಲೆಮರೆಸಿಕೊಂಡರು.

ಹೀಗೆ ಬೆಂಗಳೂರಿಗೆ ಬಂದ ರಷೀದ್ ಮತ್ತಾತನ ಮಕ್ಕಳಿಗೆ ಕೆಂಗೇರಿ ಸಮೀಪದ ಕೋಡಿಪಾಳ್ಯದಲ್ಲಿ ಮನೆ ಕೊಡಿಸಿಕೊಟ್ಟವನು ಮೆಜೆಸ್ಟಿಕ್‌ನ ಅಲಂಕಾರ್ ಪ್ಲಾಜಾದಲ್ಲಿ ಅಂಗಡಿ ಇಟ್ಟುಕೊಂಡಿದ್ದ ರಾಜು ಎಂಬಾತ. ಈತ ಹಳೇ ಗಂಧದ ಡೀಲರ್. ಈತನಿಗೆ ಕೋಡಿಪಾಳ್ಯದ ಶಿವಣ್ಣ ಎಂಬಾತನ ಜೊತೆ ಲೇವಾದೇವಿಯಿತ್ತು. ಈ ಶಿವಣ್ಣ ಕೋಡಿಪಾಳ್ಯದ ಬಿಜೆಪಿ ನಾಯಕನಾಗಿದ್ದ ನಂಜುಂಡಪ್ಪನಿಂದ ಭಾರೀ ಸೈಟೊಂದನ್ನು ಖರೀದಿಸಿ ಮನೆ ಕಟ್ಟಿಸಿದ್ದ. ಅದಕ್ಕೊಂದು ಅಲಂಕಾರ್ ಪ್ಲಾಜಾದ ರಾಜುವಿನಿಂದ ಸಾಲವನ್ನೂ ಪಡೆದಿದ್ದ. ಯಾವತ್ತು ಸಾಲ ತೀರಿಸುವುದು ಕಷ್ಟವಾಯಿತೋ ರಾಜುವಿಗೇ ಮನೆಯನ್ನು ಮಾರಿಬಿಡಲು ನಿರ್ಧರಿಸಿದ. ಆದರೆ ರಾಜು ಆ ಮನೆಯನ್ನು ತಗುಲಿ ಹಾಕಿದ್ದು ಅಕ್ರಮ್ ತಂದೆ ರಷೀದ್‌ಗೆ. ಆ ಕಾಲಕ್ಕೆ ರಷೀದ್ ಆ ಮನೆಯನ್ನು 15 ಲಕ್ಷಕ್ಕೆ ಕೊಂಡುಕೊಂಡ. ತನ್ನ ಸಂಸಾರವನ್ನು ಇಲ್ಲಿಗೇ ಕರೆತಂದ. ಜೊತೆಗೇ ನಂಜುಂಡಪ್ಪನ ಮನೆ ಪಕ್ಕದಲ್ಲೇ ಇದ್ದ ಅಂಗಡಿಯೊಂದನ್ನು ಬಾಡಿಗೆಗೆ ಕೊಂಡು ಅಲ್ಲಿ ಅಕ್ಕಿ ವ್ಯಾಪಾರ ಶುರುಹಚ್ಚಿಕೊಂಡ. ತಂದೆ ರಷೀದ್ ಇತ್ತ ಕೋಡಿಪಾಳ್ಯದಲ್ಲಿ ದಿನಸಿ ಅಂಗಡಿ ನಡೆಸಿಕೊಂಡಿದ್ದರೆ ಮಕ್ಕಳು ಅಕ್ಕಿಲೋಡಿನ ಲಾರಿಗಳನ್ನೇ ದಬಾಯಿಸಿಬಿಡುತ್ತಿದ್ದರು. ಬರುಬರುತ್ತ ಅಕ್ರಮ್ ಅಕ್ಕಿ ಸ್ಮಗ್ಲಿಂಗ್, ಲಾರಿಗಳಿಂದ ಮೂಟೆ ಕದಿಯುವುದರಲ್ಲಿ ಪರಿಣಿತಿ ಸಾಧಿಸಿಬಿಟ್ಟ. ಮತ್ತೊಂದೆಡೆ ತಮ್ಮ ಇರ್ಫಾನ್‌ನ ಕಾರುಗಳ್ಳತನ ಅತಿಯಾಯಿತು.


ಈ ಮಧ್ಯೆ ಮತ್ತೊಬ್ಬ ಮಗ ನಾಸಿರ್ ಮತ್ತು ಅಕ್ರಮ್ ಸೇರಿಕೊಂಡು ತಮ್ಮ ವಿರುದ್ಧ ಪೊಲೀಸರಿಗೆ ಮಾಹಿತಿ ಕೊಟ್ಟಿದ್ದ ಶಿವಮೊಗ್ಗದ ದಾಡಿ ಬಷೀರ್ ವಿರುದ್ಧ ಪ್ರತೀಕಾರಕ್ಕೆ ನಿಂತರು. ನಾಸಿರ್ ತನ್ನ ಮಾವ ದಾಡಿ ಬಷೀರ್‌ನನ್ನೇ ಕಿಡ್ನಾಪ್ ಮಾಡಿ ತಂದು ಮೂರು ದಿನಗಳ ಕಾಲ ಕೂಡಿಟ್ಟು ಚಿತ್ರಹಿಂಸೆ ಕೊಟ್ಟ. ದಾಡಿ ಬಷೀರ್‌ನ ಕಿಡ್ನಾಪನ್ನು ಶಿವಮೊಗ್ಗದ ಪೊಲೀಸರು ಸವಾಲಾಗಿ ಸ್ವೀಕರಿಸಿ ನಾಸಿರ್‌ನನ್ನು ಹಿಡಿದು ಜೈಲಿಗೆ ದಬ್ಬಿದರಾದರೂ ಅಕ್ರಮ್ ತಪ್ಪಿಸಿಕೊಂಡಿದ್ದ. ಹಾಗೇ ತಪ್ಪಿಸಿಕೊಂಡವನು ಕೇರಳಕ್ಕೆ ಬಂದ. ಅಲ್ಲಿ ರಹಮಾನ್‌ನ ಆಶ್ರಯ ಪಡೆದು ಕಾರು ಕದಿಯತೊಡಗಿದ. 2010 ರ ವೇಳೆಗೆ ಅಕ್ರಮ್ ವಿರುದ್ಧ ಶಿವಮೊಗ್ಗ, ಭದ್ರಾವತಿ, ಹೊಳೆಹೊನ್ನೂರು, ಸಾಗರ, ಶಿರಾಳಕೊಪ್ಪ, ಹಾವೇರಿ, ಚನ್ನಗಿರಿ, ಧಾರವಾಡ, ಬೆಳಗಾವಿ, ಕೇರಳ ಮುಂತಾದೆಡೆಯೆಲ್ಲ ಸೇರಿ 40 ಕ್ಕೂ ಅಧಿಕ ಕೇಸುಗಳು ದಾಖಲಾಗಿದ್ದವು.

ಈ ಮಧ್ಯೆ ಇರ್ಫಾನ್ ಬೆಂಗಳೂರಿನಲ್ಲಿ ಕಾರುಗಳ್ಳತನಕ್ಕಿಳಿದವನು ಕ್ರಮೇಣ ಬೇರೆಬೇರೆ ಊರುಗಳಿಗೆ ಹೋಗಿ ಕಾರು ಕದಿಯಲಾರಂಭಿಸಿದ. 2010 ರಲ್ಲಿ ಕದ್ದ ಕಾರಿನ ಸಮೇತ ಚಿಕ್ಕಮಗಳೂರು ಪೊಲೀಸರಿಗೆ ಸಿಕ್ಕುಬಿದ್ದ. ಹೀಗೆ ಸಿಕ್ಕುಬಿದ್ದವನನ್ನು ಚಿಕ್ಕಮಗಳೂರು ಪೊಲೀಸರು ಬೆಂಗಳೂರಿನ ಸಿಸಿಬಿ ಪೊಲೀಸರಿಗೊಪ್ಪಿಸಿದರು. ಇರ್ಫಾನ್ ಬಗ್ಗೆ ನಂಜುಂಡಪ್ಪ ಮತ್ತು ಧನರಾಜ್ ಪೊಲೀಸರಿಗೆ ಮಾಹಿತಿ ಕೊಟ್ಟಿದ್ದಾರೆಂದೇ ಭಾವಿಸಿದ ಅಕ್ರಮ್ ತನ್ನ ವಿವೇಚನೆ, ಸಹನೆ ಎಲ್ಲವನ್ನೂ ಕಳಕೊಂಡು ಮೃಗದಂತಾಗಿಬಿಟ್ಟ.

ಈಗ ದಂಡ ತೆತ್ತಿದ್ದಾನೆ. ಅದೂ ತನ್ನ ಪ್ರಾಣದ ಮೂಲಕ. ಅಣ್ಣ ನಾಸಿರ್ ಮತ್ತು ಅಪ್ಪ ರಷೀದ್ ಕೂಡ ಜೈಲುಪಾಲಾಗಿದ್ದಾರೆ. ಇನ್ನೊಬ್ಬರ ಸಹೋದರ ಇರ್ಫಾನ್ ಸದ್ಯ ಜೈಲಿಂದ ಹೊರಬರಲಾರ. ಸಹೋದರರ ಪೈಕಿ ಇನ್ನಿಬ್ಬರು ಜೈಲು ಸೇರಿದ್ದಾರೆ. ಎಂಟು ಮಂದಿ ಪಾತಕಿ ಪುತ್ರರ ಪೈಕಿ ಒಬ್ಬ ಮಗ ತಾನೇ ಗುಂಡಿಗೆ ಬಲಿಯಾಗಿರುವುದು?

ಪಾತಕದಲ್ಲೇ ಹುಟ್ಟಿ ಪಾಪವನ್ನೇ ಉಂಡು ಹೊದ್ದು ಮಲಗಿದ ಪಾಪಿ ಕುಟುಂಬಕ್ಕೆ ಇದು ಯಾವ ಲೆಕ್ಕ?


–ರಾ. ಸೋಮನಾಥ್



ಉಗ್ರಗಾಮಿಯನ್ನು ಕೊಂದದ್ದು!

11ರ ನಿಜವಾದ ರೂವಾರಿಗಳು ಯಾರು ಎಂಬುದು ಈಗಲೂ ನಿಗೂಢವೇ. ಅಮೆರಿಕ ಅದನ್ನು ಒಸಾಮಾ ಹೆಗಲಿಗೆ ಹೇರಿತು. ಜಗತ್ತು ಅದನ್ನು ನಂಬಿತು. ನಂತರದಲ್ಲಿ ಒಸಾಮಾ ಅಮೆರಿಕದ ಮಿತ್ರನಾಗಿರುವುದಕ್ಕಿಂತ ಶತ್ರುವಾದರೆ ಲೇಸೆಂದು ತಂತ್ರ ಬದಲಿಸಿದ ಅಮೆರಿಕ 'ಒಸಾಮ ನಮ್ಮ ಶತ್ರು' ಎಂದು ಹೇಳಲು ಪ್ರಾರಂಭಿಸಿತು. ಜಗತ್ತು ಅದನ್ನು ದೂಸರಾ ಮಾತಿಲ್ಲದೆ ನಂಬಿತು. ಒಸಾಮಾನಿಗೆ ಅಮೆರಿಕನ್ ಸಾಮ್ರಾಜ್ಯವಾದಿಗಳು ನೀಡಿದ ಈ ಹೊಸ ಪಾತ್ರದಲ್ಲಿ ಆತ ಯಾವಾಗಲೋ ಬಲಿಯಾಗಿರಬಹುದು.

ಹೀಗಾಗಿ ಆತನ ಹತ್ಯೆಗಿಂತ ಅಮೆರಿಕನ್ ಸಾಮ್ರಾಜ್ಯಶಾಹಿ



ಯೋಜನೆಗಳೇ ಚರ್ಚಿಸಬೇಕಾದ ವಿಷಯ. ಒಸಾಮನಿಗಿಂತ ಆತನನ್ನು ಹುಟ್ಟುಹಾಕುವ ಒಬಾಮಾ ದೊಡ್ಡ ಭಯೋತ್ಪಾದಕನಲ್ಲವೇ?

ಒಸಾಮಾ ಒಬಾಮಾನ 'ವಾರ್ ಆನ್ ಟೆರರ್' ಎಂಬ ನಿಜವಾದ ಭಯೋತ್ಪಾದಕ ಯುದ್ಧಕ್ಕೆ ಸಾರಥಿಯಷ್ಟೆ. ಜಾಗತಿಕ ಭಯೋತ್ಪಾದನೆಯ ನಿಜವಾದ ಸೂತ್ರಧಾರಿ ಒಬಾಮಾನ ಅಮೆರಿಕವೇ. ವಾಸ್ತವವಾಗಿ ಜಗತ್ತು 2001ರ ಸೆಪ್ಟೆಂಬರ್ 11ನ್ನು ಮಾತ್ರ ನೆನೆಸಿಕೊಳ್ಳುತ್ತಿದೆ. ಆದರೆ 1973ರ ಸೆಪ್ಟೆಂಬರ್ 11 ಮತ್ತೊಂದಿದೆ. ಅಂದು ಚಿಲಿ ದೇಶದ ಚುನಾಯಿತ ಅಧ್ಯಕ್ಷ ಅಲೆಂಡೆಯನ್ನು ಅಮೆರಿಕನ್ ಪಡೆಗಳು ದಾಳಿ ಮಾಡಿ ಸಾಯಿಸಿದವು. ಕಾರಣ ಆತ ಅಮೆರಿಕ ವಿರೋಧಿ.

ಅದೇರೀತಿ ಕಾಂಗೋದಲ್ಲಿ ಚುನಾಯಿತ ನಾಯಕ ಲುಮುಂಬಾ ದೇಶದ ವಜ್ರದ ಗಣಿಗಳನ್ನು ರಾಷ್ಟ್ರೀಕರಣ ಮಾಡಿ ಸಮಾಜವಾದಿ ಸರ್ಕಾರ ತರಲು ಯತ್ನಿಸಿದ್ದು ಅಮೆರಿಕನ ವಜ್ರದ ಕಂಪನಿಗಳ ಕಣ್ಣು ಕೆಂಪಗೆ ಮಾಡಿದ್ದರಿಂದ ಅಮೆರಿಕದ ಸಿಐಎ ಪಡೆಗಳು ಆತನನ್ನು ಕೊಂದು ಹಾಕಿದವು.

ಅದೇರೀತಿ 1977ರಲ್ಲಿ ಸೆಪ್ಟೆಂಬರ್ 12ರಂದು ದಕ್ಷಿಣ ಆಫ್ರಿಕಾದ ಕಪ್ಪು ಹೋರಾಟಗಾರ ಸ್ಟೀವನ್ ಬಿಕೋನ ಹತ್ಯೆ, 1992ರ ಸೆಪ್ಟೆಂಬರ್ 14ರಂದು ಸೋಮಾಲಿಯಾ ಮೇಲೆ ದಾಳಿ, ಒಂದೇ ಎರಡೇ... ಅಮೆರಿಕ ತನ್ನ ಸಾಮ್ರಾಜ್ಯಶಾಹಿ ಹಿತಾಸಕ್ತಿಗಾಗಿ ಜಗತ್ತಿನ ಮೇಲೆ ನಡೆಸುತ್ತಿರುವ ದಾಳಿಗಳು! ವಿಲಿಯಂ ಬ್ಲುಂ ಎಂಬ ಅಮೆರಿಕದ ಪ್ರಖ್ಯಾತ ಚಿಂತಕ ತಮ್ಮ 'Killing Hope' ಎಂಬ ಪುಸ್ತಕದಲ್ಲಿ ಆಧಾರಸಹಿತ ವಿವರಿಸಿರುವಂತೆ ಎರಡನೆ ಮಹಾ ಯುದ್ಧದ ನಂತರದಲ್ಲಿ ಅಮೆರಿಕ 1945–2003ರ ನಡುವೆ 48 ದೇಶಗಳ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷ ಯುದ್ಧವನ್ನು ನಡೆಸಿದೆ. ಇರಾಕ್ ಒಂದರಲ್ಲೇ 1990-2000ರ ನಡುವೆ 6 ಲಕ್ಷ ಹಸುಕಂದಮ್ಮಗಳ ಸಾವಿಗೆ ಕಾರಣವಾಗಿದೆ. ಅಫ್ಘಾನಿಸ್ತಾನದಲ್ಲಿ 6 ಲಕ್ಷ ಜನ ಅಮಾಯಕರನ್ನು ಹತ್ಯೆ ಮಾಡಿದೆ. ಒಂದು ಅಂದಾಜಿನ ಪ್ರಕಾರ ಎರಡನೇ ಮಹಾಯುದ್ಧದಲ್ಲಿ ಸತ್ತವರ ಸಂಖ್ಯೆಗಿಂತ ಈ ತಥಾಕಥಿತ ಶಾಂತಿ ಸಮಯದಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿ ಹಿತಾಸಕ್ತಿಗೆ ಬಲಿಯಾದವರ ಸಂಖ್ಯೆ ಹೆಚ್ಚು.

ಆದರೆ ಕಾರ್ಪೊರೇಟ್ ಮಾಧ್ಯಮಗಳು ನಡೆಸುತ್ತಿರುವ 'ವಾರ್ ಆನ್ ಟ್ರೂಥ್'ನಿಂದಾಗಿ 2700 ಜನರನ್ನು ಕೊಂದವನು ಭಯೋತ್ಪಾದಕ ಎನಿಸಿಕೊಳ್ಳುತ್ತಾನೆ. ಕೋಟ್ಯಾಂತರ ಜನರನ್ನು ಕೊಂದವರು ಪ್ರಜಾತಂತ್ರ ಮತ್ತು ಶಾಂತಿಪಾಲಕರು ಎಂದೆನಿಸಿಕೊಳ್ಳುತ್ತಾರೆ. ಒಬಾಮಾನಿಗಾದರೆ ನೊಬೆಲ್ ಶಾಂತಿ ಪ್ರಶಸ್ತಿಯೇ ಸಿಕ್ಕಿಬಿಡುತ್ತದೆ!!

ಆದ್ದರಿಂದಲೇ ಒಸಾಮ ಸತ್ತ ಮಾತ್ರಕ್ಕೆ ಈ ಜಗತ್ತು ಭಯೋತ್ಪಾದಕ ಮುಕ್ತ ಆಗಲು ಸಾಧ್ಯವೇ ಇಲ್ಲ. ಎಲ್ಲಿಯತನಕ ಸಾಮ್ರಾಜ್ಯಶಾಹಿ ಇರುತ್ತದೋ ಅಲ್ಲಿಯತನಕ ಅದು ಒಸಾಮಾಗಳನ್ನು ಹುಟ್ಟಿಸುತ್ತಲೇ ಇರುತ್ತದೆ. ಸಾಮ್ರಾಜ್ಯಶಾಹಿ ಅಳಿದು ಎಲ್ಲೆಡೆ ಸಮಾಜಮುಖಿ, ಸಮಾಜವಾದಿ ಜನತಂತ್ರಗಳು ಅಸ್ತಿತ್ವಕ್ಕೆ ಬರುವುದಿಲ್ಲವೋ ಅಲ್ಲಿಯತನಕ ಈ ಜಗತ್ತು ಸಾಮ್ರಾಜ್ಯವಾದದ ಭೀತಿಯಲ್ಲೇ ಬದುಕಬೇಕಾಗುತ್ತದೆ.

> “ಬರ್‍ರೆಲೊ ಈ ಹೊಲದ ಮ್ಯಾಲ ಅಷ್ಟ ಅಲ್ಲ, ನಾನು ಉಟ್ಟ ಹರಿದ ಸೀರಿ ಮ್ಯಾಲ, ರಕ್ತ ಸುರಿಯೋ ಈ ಮೈಮ್ಯಾಲ, ಅದೂ ಬ್ಯಾಡಂದ್ರ ನಿಮಗ ಇನ್ನೂ ಬೇಕಂದ್ರ ಈ ಮಸಿಬಟ್ಟೆ ಮ್ಯಾಲ ಸಮೇತ ಅದೇನು ಹೂಡ್ತೀರಿ... ಹೂಡು ಬರ್‍ರಿ... ಇದರ ಮ್ಯಾಲ ಸಿಮ್ಮ ರೊಕ್ಕ ಹೂಡ್ರಿ.... ಕೋಟಿಗಟ್ಟಲೆ ಗಳಿಸ್ಕೋದು... ನೀವು ಸುಖವಾಗಿದ್ರ ಸಾಕು... ನಮ್ಮಂತೋರು ಹೆಂಗಾದ್ರೂ ಸಾಯ್ಲಿ...’ ”

ಮುಸಿಬಟ್ಟೆ

ಲೇಖಕರು: ಕಳಿಗಣನಾಥ ಗುಡದೂರ



ಕತೆ

ಅವಳು ಅಂಗೈ ಅಗಲದ ಮಸಿಬಟ್ಟೆಯಿಂದ ಮುಖ ...ಚ್ಚಿಕೊಂಡು ಊರ ಉದ್ದಗಲಕ್ಕೂ ತಿರುಗಾಡುತ್ತಿದ್ದಳು. ...ನೆ ಸೆರಗಿನ ತುದಿ ಒಮ್ಮೊಮ್ಮೆ ಕಾಲಿಗೆ ಅಡ್ಡ ಬಂದು ...ಸು ನೆಲಕ್ಕೆ ದೊಪ್ಪನೆ ಬೀಳುವಂತೆ ಬಾಗಿದರೂ ಮತ್ತೆ ...ವರಿಸಿಕೊಂಡು ನಡೆಯುತ್ತಿದ್ದಳು. ಬೆಳಿಗ್ಗೆ ಶಂಕ್ರಪ್ಪ ಸಾಹು ...ನೆ ಮನೆಯ ಆಳು ಹನುಮ ತಲೆ ಮೇಲೆ ಹೆಂಡೆ ...ಟ್ಟಿ ಹೊತ್ತುಕೊಂಡು ಸಗರಪ್ಪ ಕಟ್ಟೆ ಮೇಲೆ ಹೋಗು ...ವನನ್ನು ನೋಡಿದ ಆಕೆ ಅವನ ಮುಖದ ಮೇಲೆ ...ನಂತೆ ಇಳಿಯುತ್ತಿದ್ದ ಸೆಗಣಿಯ ಜೋರನ್ನು ತದೇಕ ...ದಿಂದ ನೋಡುತ್ತಾ ಮುಸಿಮುಸಿ ನಗುತ್ತಾ ...ರಟಾಗ ದಾರಿಯಲ್ಲಿದ್ದ ಕಲ್ಲಿಗೆ ಎಡವಿ ನೆಲಕ್ಕೆ ...ನುವಂತಿದ್ದರೂ ಅದ್ಹೇಗೊ ಮಸಿಬಟ್ಟೆಯಿದ್ದ ...ಮುನ್ನೇ ನೆಲಕ್ಕೆ ಊರಿದ್ದಳು. ಮೊಣಕಾಲು ನೆಲಕ್ಕೆ ...ದ್ದರೂ ಹೌದೊ ಅಲ್ಲೊ ಅನ್ನುವಷ್ಟು ಆಗಿದ್ದ ...ಯ ಗಾಯಕ್ಕೆ ತನ್ನ ನಾಲಿಗೆಯಲ್ಲಿದ್ದ ಹಸೆಯನ್ನೆ ...ರಿಕೊಂಡು, ‘ದಾರ್‍ಯಾಗ ಕಲ್ಲು ಹಾಕಿದವರ ... ಕರಿನಾಗರ ಕಡೀಲಿ. ಎಲ್ಲರೂ ನನ್ನನ್ನ ...ಲ್ಲಬಕು ಅಂತ ಮಾಡ್ಯಾರ. ನಾನು ಇರೋದು ...ಮಂದಿಗಷ್ಟ ಅಲ್ಲ; ಊರ ಜನರಿಗೆ, ಈ ...ಸ್ಯೆ, ಕಲ್ಲು ಮಣ್ಣಿಗೆ ಸಮೇತ ಬೇಕಾಗಿಲ್ಲ...’ ...ಗಳದಲ್ಲೆ ಕುಳಿತ ಆಕೆ ಬಲಗೈಯಲ್ಲಿದ್ದ ...ಬಟ್ಟೆಯನ್ನು ಎದೆಗೆ ಒತ್ತಿಕೊಂಡು, ಎಡಗೈ ...ದ ಹಿಡಿ ಹುಡಿ ಮಣ್ಣು ಉಗ್ಗಿ ಶಪಿಸಿದ್ದಳು. ...ಬಿದ್ದದ್ದು ನೋಡಿ ನಕ್ಕ ಹನುಮನ ಜನುಮ ...ಾಡಿದ್ದಳು. ‘ಲೋ ನನ್ನ ಏನ್ ನೋಡಿ ನಗ್ತೀ. ...ಮ್ಮ ನಿನ್ನ ಮುಖದ ಮ್ಯಾಲ ಇಳಿಯೋ ಆ ...ಹುಕಾರನ ಸೆಗಣೀನ ವರಿಸ್ಗೆಂಡು ಮಾತಾಡು. ...ಯ ಮಂದಿ ಹೇಲು ನೆಲಕ್ಕ ಬಿದ್ದರ ಮಣ್ಣು ...ತ್ತಂತ ಹಂಗೆ ಅಂಗೈಯಾಗ ಹಿಡಿತಾನಲ್ಲ ...ಹುಕಾರ ಅಂಬ ತಿರುಬೋಕಿಗೆ ಮಂದಿ ದುಃಖ, ...ಷ್ಟಾನ ಅರ್ಥವಾಗಲ್ವು... ನಿನ್ನಂಥವನಿಗೇನು ... ಆಗ್ತಾವು?’ ಹನುಮನ ಬಗ್ಗೆ ತನ್ನಷ್ಟಕ್ಕೆ ...ಧಾನ ತಾಳಿದ್ದಳು.

...ಊರ ಹುಡುಗರು ಆಗಲೇ ಗುಡ್ಡದ ಸಮೀಪ ... ಶಾಲೆ ಕಡೆ ಹೊರಟಿದ್ದರು. ಮುಂಜಾನೆಯಿಂದ ...ಹುಕು ನೀರು ಆಕೆಯ ಹೊಟ್ಟೆಗೆ ಇಳಿದಿರದಿ... ಚುರುಕು ಬಿಸಿಲಿನಲ್ಲಿ ನಡೆಯುತ್ತಿದ್ದರಿಂದಲೋ ...ಗೊಮ್ಮೆ ಕಣ್ಣಿಗೆ ಬೋಳಿ ಬಂದಂತೆನಿಸುತ್ತಿತ್ತು. ...ಯಾದರೂ ಉಂಡಿದ್ದಳೊ ಇಲ್ಲವೋ? ...ನ್ನಾರು ವರ್ಷಗಳಿಂದ ಊರ ಹೊರಗಿರೊ ...ಹನುಮನಪ್ಪನಗುಡಿ ಸಮೀಪವೇ ತನ್ನದು ಅಂತ ...ನ್ನು ಮೊಳ ಅಗಲ ಮತ್ತು ಹತ್ತಾರು ಮೊಳ ...ದ್ದದ ನೆರಿಕೆ ಪೊರಕೆಯ ‘ಚಾಟು’ ಆಕೆ ಪಾಲಿಗೆ ...ಸಲು, ಮನೆ, ಅರಮನೆಯೂ ಆಗಿತ್ತು. ಆಕೆಗೂ ...ಮು ಚಂದನೆಯ ಹೆಸರಿತ್ತು. ಆಗ ಜನ ಈಕೆಯ ...ನನ್ನು ಈಗಿನಂತೆ ಒಂಟಿಯಾಗಿ ಕರೆಯುತ್ತಿರಲಿಲ್ಲ. ಅಷ್ಟೆ ...ದೆ ಮೂರಕ್ಷರದ ಹೆಸರಿನಲ್ಲಿ ಕೊನೆ ಅಕ್ಷರ ನುಂಗಿಹಾಕಿ ...ೆ’ ಎಂದು ಕರೆಯುತ್ತಿದ್ದರು. ಹೀಗೆ ಕರೆದರೂ ...ಮವಿತ್ತು. ‘ಹುಚ್ಚೀರಿ’ ಎಂದು ಮರುನಾಮಕರಣ ...ಡಿದ್ದರು ಊರ ಜನ. ಈರಮ್ಮವ್ವ ಎಂದೇ ತಾನು ಆ ...ಗೆ ಗುರಪ್ಪನ ಬಾಳಸಂಗಾತಿಯಾಗಿ ಬಹು ...ಗಳವರೆಗೆ ಕರೆಸಿಕೊಳ್ಳುತ್ತಿದ್ದ ಆಕೆ ಒಂದೆರಡು ...ಗಳಿಂದ ಹುಚ್ಚೀರಿ ಎಂದೇ ಪ್ರಸಿದ್ಧಿಯಾಗಿದ್ದಳು. ...ಮ್ಮ ಎಂದರೆ ಆ ಊರಲ್ಲಿ ಈಗ ಆಕೆಯನ್ನು ಗುರುತಿಸುವ ...ತಿಯಿರಲಿಲ್ಲ, “ಹುಚ್ಚೀರಿ’ ಅಂತ ಹೇಳಿದ್ರ ಮಾತ್ರ ...ಗ ಗೊತ್ತಾಗುತ್ತ, ಅಲ್ಲಿ ಹನುಮಂತ ದೇವರ ಗುಡಿ ...ಪ ಇರುತ್ತ ನೋಡ್ರಿ. ಇಲ್ಲಾ ಅಂದ್ರ ಓಣಿ ಓಣಿ ...ರುತ್ತಿರುತ್ತ, ಎಲ್ಲಿ ಇರುತ್ತೊ ಏನ್ ಕಥಿಯೋ? ದಿಕ್ಕಿಲ್ಲ ...ಮಲ್ಲ...’ ಹೀಗೆ ಹೊಸಬರ ಮುಂದೆ ಪರಿಚಯಿಸುವುದು ...ಕೆ.

...ಬಸ್‌ಸ್ಟ್ಯಾಂಡಿನತ್ತ ಅಡ್ಡೊಂದು ಬಡ್ಡೊಂದು ಹೆಜ್ಜೆ ಇಡುತ್ತಾ ...ಮುತ್ತಿದ್ದ ಈರಮ್ಮನ ಕಂಡ ಅಗಸಿಮುಂದಿನ ಅಮರಯ್ಯ ... ತಳವಾರ ತಿಮ್ಮಪ್ಪ ‘ಹುಚ್ಚೀರಿ, ಇವತ್ತು ರಾಯ ...ಂದ ಡಿ.ಸಿ. ಸಾಹೇಬರು ಬರ್‍ತಾರಂತ. ನಿನ್ನ ಎರಡೆಕರೆ ...ಲಿಗೆ ಸಿಸ್ನ ಸಹಿ ಮಾಡಿಸಿಕೊಂಡು ಹೋಗ್ತಾರಂತ. ...ಸಹಿ ಪಡೆದರ ಮುಗೀತ ಅಂತ. ಹೆಂಗನ ಮಾಡಿ ...ನ ಸಹಿಮಾಡಿಸಿಕೊಂಡು ಹೋಗಾಕ ಬರ್‍ತಾರ... ಹೊಲ ...ದ್ರ ಬರೋ ರೊಕ್ಕಾನ ಏನ್ ಮಾಡ್ತಿಯಬೇ... ಈ ...ಷ್ಟೆ ಮಾಡಿಕ್ಕೆಂಡುಬುಡು....’ ಅಮರಯ್ಯ ತನ್ನ ಕೋತಿ ... ತೋರಿಸಿದ. ಈರಮ್ಮಗೆ ಅರಮುಂಡಲಕ್ಕೇ ಬೆಂಕಿ ...ಂದಂತೆ ಅನ್ನಿಸಿತು. ಹನುಮಂತ ದೇವರಗುಡಿ ಹತ್ತಿರದ ...ಟ್ಟ ಚಾಟುಗೆ ಹೊದಿಸಿದ ತೆಂಗಿನ ಗರಿಗಳು, ಅಲ್ಲಲ್ಲಿ ಮುರಿದ ಬದಿರಿನ ತಟ್ಟಿ ಪುರ್‍ರನೇ ಸುಟ್ಟಂತೆ ಭಾಸವಾಯಿತು. ‘ಯಾವನನ ಮಗ ಬಂದ್ರೂ ನನ್ನ ಪಾಲಿನ ಎರಡೆಕರೆ ಕೊಡಂಗಿಲ್ಲ. ಎರಡು ಲಕ್ಷಕ್ಕ ಅಲ್ಲ, ಎರಡು ಕೋಟಿ ಕೊಡ್ತೀವಿ ಅಂದ್ರೂ ನಾನೇನು ಬಗ್ಗಾಕಿ ಅಲ್ಲ. ಏ ಕೋತಿ ಅಯ್ನೋರ ಹೆಂಗ ಕಾಣುತ್ತ ನಿನಗ? ನನ್ನ ಕುಡ ಕೋಡು ಮಾಡ್ತೀಯಲ್ಲ ನಿಮ್ಮವ್ವನ ವಯಸ್ಸಿನಾಕಿಗಿ ಮದುವಿ ಮಾಡಾಕ ಹೊಂಟಿಯಲ್ಲ ತಿಮ್ಮ ಯಾಕ, ನೀನ ಹೆಂಗಾದ್ರೂ ಜೋಳಿಗೆ ಹಾಕ್ಕೆಂಡು ಭಿಕ್ಷೆ ಬೇಡಿಕೊಂಡು ತಿಂತಿಯಲ್ಲ ನನ್ನ ಸಾಕೊ ಶೆಕುತಿ ನಿನ್ತಲ್ಲಿ ಐತಿ. ನಿನ್ನ ಮಾಡಿಕೆಂತೀನಿ. ಇವತ್ತು ಹನುಮಂತದೇವರ ಗುಡಿತಲ್ಲಿ ಬಾ, ನಿನಗ ತಾಳಿ ಕಟ್ಟಿ ನಿನ್ನ ಗಂಡನಾಗಿ ಇಟ್ಟುಕೊಳ್ತೀನಿ...’ ಕ್ಯಾಕರಿಸಿ ಉಗುಳಿದ ಈರಮ್ಮ ಬಾಯಿಯಲ್ಲಿ ಮಸಿಬಟ್ಟೆಯನ್ನು ಕಚ್ಚಿಹಿಡಿದು ಎರಡು ಕೈಗಳ ಬೆರಳುಗಳನ್ನು ಸೇರಿಸಿ ನೆಟಗಿ ಮುರಿದಳು. ‘ಇಂಥಾ ಭದ್ಮಾಷರು ಹೆಚ್ಚಾಗ್ಯಾರ ಊರಾಗ. ಅದಕ್ಕ ಹೇಳೋರು ಕೇಳೋರು ಇಲ್ಲದಂಗ ಆಗ್ಯೈತಿ. ಊರು ಒಕ್ಕಟ್ಟು ಇತ್ತು ಅಂದ್ರ ಊರ್‍ಮಂದಿ ಯಾಕ ಬೀದಿಪಾಲು ಆಗ್ತಿದ್ರು... ಏನನ ಆಗ್ಲಿ ನನ್ನ ಹೊಲಾನ ಈ ಫ್ಯಾಕ್ಟರಿ ಮಾಡೋ ಮಂದಿಗಿ ಮಾರಂಗಿಲ್ಲ. ನಾ ಸಾಯೋತನಕ ಹೊಲದ ಒಂದು ಹಿಡಿ ಮಣ್ಣು ಬ್ಯಾರೆಯವರ ಪಾಲು ಆಗಾಕ ಬುಡಂಗಿಲ್ಲ. ಮುಖ್ಯಮಂತ್ರೀನ ಬಂದು ಕಾಲು ಹಿಡಕಂಡು ಕೇಳಿದ್ರೂ ನನ್ನ ಹೊಲಾ ಮಾರಾಟ ಮಾಡಂಗಿಲ್ಲ... ನಾ ಸಾಯೋತನಕ ಕರಿಜಾಲಿ ಬೆಳೆದರೂ ಚಿಂತಿಲ್ಲ. ಊರ ಬಿಡಾಡಿ ದನಗಳು ಹೋಗಿ ಮೇಯ್ದು ಬಂದ್ರೂ ಚಿಂತಿಲ್ಲ...’ ತನ್ನದೇ ಆದ ಲೋಕದಲ್ಲಿದ್ದ ಈರಮ್ಮ ತನ್ನಷ್ಟಕ್ಕೆ ತಾನು ಮಾತಾಡಿಕೊಳ್ಳುತ್ತಾ ಬಸ್‌ಸ್ಟ್ಯಾಂಡ್ ಸಮೀಪದ ಹೋಟೆಲ್ ಮುಂದೆ ನಿಂತಳು.

ನಿತ್ಯವೂ ಈರಮ್ಮ ಹೀಗೆ ಬಂದು ನಿಂತಕೂಡಲೇ ಹೋಟೆಲ್ ಮಾಲೀಕ ಮಲ್ಲಯ್ಯ ಪ್ಲಾಸ್ಟಿಕ್ ಕಪ್ಪೊಂದರಲ್ಲಿ ಕಿತ್ತಲಿಯಿಂದ ಅರ್ಧದಷ್ಟು ಚಹಾ ಬಗ್ಗಿಸಿ ಕೊಡುತ್ತಿದ್ದ. ತನ್ನ ಅಂಗೈಗೆ ಚಹಾ ಕಪ್ಪು ಸುಡದಿರಲೆಂದು ಅಂಗೈ ಮೇಲೆ ಮಸಿಬಟ್ಟೆ ಹಾಕಿಕೊಂಡು ನಿಂತಿದ್ದವಳನ್ನು ಮಲ್ಲಯ್ಯ ಗಮನಿಸಿದನೊ ಇಲ್ಲೊ? ಒಳಗೆ ಹೊರಗೆ ಅಡ್ಡಾಡುತ್ತಾ, ಬಂದ ಗಿರಾಕಿಗಳಿಗೆ ಚಹಾ ಕೊಡುವಂತೆ, ಒಗ್ಗಣಿ, ಪೂರಿ, ಮಿರ್ಚಿ ಕೊಡುವಂತೆ ಹೋಟೆಲ್‌ನಲ್ಲಿ ಕೆಲಸಮಾಡುತ್ತಿದ್ದ ತನ್ನ ಮಕ್ಕಳಾದ ಶಿವಯ್ಯ ಮತ್ತು ಮದ್ದಾನಿಗೆ ಹೇಳುತ್ತಾ ‘ಏ ಇಲ್ಲಿ ಬಿಲ್ ಎಷ್ಟು ಆಯ್ತು ಹೇಳ್ರಿ. ಚಿಲ್ಲರ್ ಕೊಡ್ರೊ ಮಾರಾಯ. ಮೂರ್‍ನಾಲ್ಕು ಚಾ ಕುಡುದು ಐದು ನೂರು ರೂಪಾಯಿ ಕೊಡಾಕ ಬಂದ್ರ ಎಲ್ಲಿಂದ ಚಿಲ್ಲರ್ ತರ್‍ಲಿ. ನಾನೇನು ಚಿಲ್ಲರಿನ ಗಿಡ ಹಾಕೀನಿ ಅಂತ ಮಾಡಿರೇನು?’ ಬಿಳಿಬಟ್ಟೆ ಹಾಕಿಕೊಂಡು ಇತ್ತೀಚೆಗೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷನೂ ಆಗಿದ್ದ ಆದಪ್ಪ, ಮಲ್ಲಯ್ಯನ ಮುಂದಿದ್ದ ಗಲ್ಲಾಪೆಟ್ಟಿಗೆ ಮೇಲಿಟ್ಟಿದ್ದ ಐದು ನೂರು ರೂಪಾಯಿ ನೋಟನ್ನು ಮತ್ತೆ ಜೋಪಾನವಾಗಿ ಮಡಿಸಿ, ಮಂದಿ ನೋಡ್ತಾರೆಂಬ ಖಬರು ಇಲ್ಲದವರಂತೆ, ತನ್ನ ಪಟ್ಟಾಪಟ್ಟಿ ನಿಕ್ಕರ್ ಕಾಣುವಂತೆ ಲುಂಗಿ ಎತ್ತಿ ನೋಟನ್ನು ಜೇಬಗಿಳಿಸಿದ. ‘ತಾತಾ, ಹಂಗಾದ್ರ ಲೆಕ್ಕ ಬರಕಂಡು ಬುಡಪ. ಹಂಗೆ ಈ ಹುಚ್ಚೀರಿಗೆ ಒಂದು ಚಾ ಕೊಡು. ಕುಡೀಲಿ ಪಾಪ’ ಎನ್ನುತ್ತಾ ಈರಮ್ಮನನ್ನೇ ದಿಟ್ಟಿಸಿನೋಡಿದ. ಐವತ್ತರ ಆಸುಪಾಸಿನ ಈರಮ್ಮ ಮುಪ್ಪಾನು ಮುದುಕಿಯಂತೆ ಕಂಡಳು. ಆಕೆಯ ಎಲುಬುಗಳಿಗೆ ನಿರಿಗೆಗಳಿದ್ದ ಕಂದು ಕಪ್ಪು ಬಣ್ಣದ ಚರ್ಮ ಗಟ್ಟಿಯಾಗಿ ಅಂಟಿಕೊಂಡಂತೆ ಕಂಡಿತು. ಎಣ್ಣೆ ಕಾಣದೆ ವರ್ಷಗಳೇ ಆಗಿದ್ದವು ಎಂಬಂತಿದ್ದ ಕೆದರಿದ ಕೂದಲು, ಮೈಮೇಲಿನ ಬಟ್ಟೆಗಳು ಹುಟ್ಟಿನೊಂದಿಗೆ ಬಂದವು ಎಂಬಂತೆ ಗೋಚರಿಸಿದವು. ಆಕೆಯ ಬಗ್ಗೆ ತನಗೆ ಎಲ್ಲಿಲ್ಲದ ಕಾಳಜಿ, ಕಳಕಳಿ ಎಂಬುದನ್ನು ಒಂದು ಸಲ ಹೇಳಿದಾಗ ಕಿವಿಗೆ ಹಾಕಿಕೊಳ್ಳದ ಮಲ್ಲಯ್ಯನಿಗೆ ಮತ್ತೊಮ್ಮೆ ಕೂಗಿ ಹೇಳಿದ. ‘ಏ ಮಲ್ಲಯ್ಯ ತಾತಾ, ನಿನಗ ಎಷ್ಟು ಸಲ ಹೇಳ್ಬೇಕು. ಪಾಪ ಈರಮ್ಮವ್ವ ನಿಂತು ಎಷ್ಟು ಹೊತ್ತು ಆಯ್ತು. ಒಂದು ಕಪ್ಪು ಚಾ ಕೊಡು ಅಂತ ಹೇಳಿದ್ರೂ ಕಿವ್ಯಾಗ ಹಾಕಿಕೊಳ್ಳ ವಲ್ಲಿ’ ಆದಪ್ಪ ತನ್ನ ತುಟಿಗಳ ಮೇಲೆ ಮಿಸುಕಾಡಿದ ಮುಗುಳ್ನಗೆ ಯಾರಿಗೂ ಕಾಣಬಾರದು ಎಂಬಂತೆ ಲುಂಗಿಯ ತುದಿಯಿಂದ ಬಾಯಿವರೆಸಿಕೊಂಡ. ಈರಮ್ಮ ಆದಪ್ಪನನ್ನು ಕೆಕ್ಕರಿಸಿ ನೋಡಿದಳು. ಪಿಸಿಪಿಸಿ ವಟಗುಟ್ಟ ತನ್ನ ಬಲ ಮುಂಗೈಗೆ ಬಳೆಯಂತೆ ಸುತ್ತಿಕೊಂಡಿದ್ದ ಮಸಿಬಟ್ಟೆಯನ್ನು ಮುಟಗೆಮಾಡಿ ಬಾಯಿಗೆ ಒತ್ತಿಕೊಂಡಳು.

‘ನೀ ಏನ್ ಅಮೃತ ಕುಡಿಸಿದರೂ ನಾ ಕುಡಿಯಂಗಿಲ್ಲ ಆದಪ್ಪ, ನಾನು ಜಾತಿಗುಟ್ಟಿದೋಳು. ನಿನ್ನಂಗ ನೀತಿಗೆಟ್ಟಿಲ್ಲ. ಚಾ ಕುಡುಸ್ತಾನಂತ ಚಾ. ನಿನ್ನ ಚಾ ಕುಡಿಯೋದಕ್ಕಿಂತ ಹಂಗೆ ಇರೋದು ಚಲೋ. ನಿನ್ನ ಚಾ ಕುಡೀಲಿಲ್ಲ ಅಂದ್ರ ನಾನೇನು ಇವತ್ತು ಸತ್ತು ಹೋಗಲ್ಲ, ನಿಮ್ಮಂಥ ನಾಲಾಯಕು ಇದ್ದುದಕ್ಕನ ನನ್ನ ಬಾಳೇವು ಹೀಂಗ ಆಗಿ ಕುಂತೈತಿ...’ ನಿಲ್ಲಲು ಶಕ್ತಿ ಸಾಲಲಿಲ್ಲವೋ ಈರಮ್ಮ ಹೋಟೆಲ್ ಮುಂದೆ ಜನ ತಿರುಗಾಡೋ ರಸ್ತೆಯೆಂಬುದನ್ನು ಮರೆತು ಕುಳಿತು ಕೊಂಡು ಮೊಣಕಾಲು ತುದಿಗಳಿಗೆ ಕಣ್ಣು ಒತ್ತಿಕೊಂಡು, ತನ್ನನ್ನು ಯಾರೋ ಬಡಿದಿದ್ದಾರೆಂಬಂತೆ ಚೀರಾಡಿ ಅಳತೊಡಗಿದಳು. ‘ಏ ಆದಪ್ಪ, ಅಧ್ಯಕ್ಷ ಆದ್ರೂ ನಿನಗ ಬುದ್ಧಿ ಬರಲಿಲ್ಲ. ಪಾಪ ಹೆಣ್ಮಕ್ಕಳ ಕುಡ ಹೆಂಗ ಇರಬೇಕೆಂಬುದ ಗೊತ್ತಿಲ್ಲ. ಇದ್ರ ಕಣ್ಣಾಗ ಯಾಕ ನೀರು ತರ್‍ಸ್ತೀ. ಇದ್ದ ಬದ್ದೋರ್‍ನೆಲ್ಲಾ ಕಳಕಂಡು, ಅದೆಂಗೊ ಬದುಕಾಕ ಹತ್ಯೈತಿ ನಿನಗ ಇದಕ್ಕ ತ್ರಾಸು ಕೊಡೋದನ್ನ ನಾನು ಒಪ್ಪಂಗಿಲ್ಲ...’ ಮಲ್ಲಯ್ಯ ಒಂದು ಕೈಯಲ್ಲಿ ಚಾ ತುಂಬಿದ್ದ ಪ್ಲಾಸ್ಟಿಕ್ ಕಪ್ಪನ್ನು ಈರಮ್ಮನ ಮುಂದೆ ಹಿಡಿದು, ‘ಯವ್ವಾ ಈರಮ್ಮವ್ವ, ತಗಾ ಚಾ ಕುಡಿ. ಅಳಬ್ಯಾಡ ಎದ್ದೇಳು. ನನ್ನ ಚಾ ಕೇಳಬೇ ಕೊಡ್ತೀನಿ. ನಿನ್ನ ಗಂಡನ ಮಾತಿನಿಂದನ ನಾನಿವತ್ತು ಇಷ್ಟು ಎತ್ತರಕ್ಕ ಬೆಳೆದಿದ್ದು. ಇಲ್ಲಂದ್ರ ಕೈಯಾಗ ಜೋಳಿಗೆ ಹಾಕ್ಕೆಂಡು, ಕಾಲಿಗೆ ಜಂಗು ಕಟ್ಟಗೆಂಡು ಮನಿಮನಿಗೆ ಹೋಗಿ ಕಂತೆಭಿಕ್ಷೆ ಎತ್ತಬೇಕಾಗ್ತಿತ್ತು. ಗುರಪ್ಪ ಅಂದ್ರ ನನ್ನ ಪಾಲಿಗೆ ದೇವ್ರು ಇದ್ದಂಗ. ದುಡಕ್ಕಂಡು ತಿನ್ನೋದು ಕಲಿಸಿದ ಪುಣ್ಯಾತ್ಮ... ತಗಾ ಚಾ ಕುಡಿ ಎದ್ದೇಳು...’ ಆಕೆಯ ಮುಂಗೈಮುಟ್ಟಿ ಮಾತನಾಡಿಸಿ, ಚಾ ಕಪ್ಪು ಕೊಟ್ಟ.

‘ಲೇ ಹನುಮ, ಒಂದು ಕಪ್ಪು ಚಾ ಕುಡಿಯಾಕ ಎಷ್ಟೊತ್ತು ಮಾಡ್ತೀರಿ?’ ಹೊರಗೆ ನಿಂತ ಆದಪ್ಪ ಕೂಗಿಕರೆದ. ‘ಜಲ್ದಿ ಬರ್‍ರಿ. ಇವತ್ತು ಡಿಸಿ ಸಾಹೇಬರು ಬರೋರು ಅದ್ಯಾರ. ಕೆನಾಲ್ ವರ್ಕ್ ನೋಡಾಕ ಬರ್‍ತಾರ. ಹಂಗೆ ಇನ್ನು ಉಳಿದಿರುವ ಭೂಸ್ವಾಧೀನ ಕೆಲಸವನ್ನು ಇವತ್ತು ಮುಗಿಸ್ತಾರಂತ. ಗುಡ್ಡದ ಕಡೆ ಬರ್‍ರಿ. ನಾನಂತೂ ಹೋಗ್ತೀನಿ’ ಆದಪ್ಪ ಒಂದು ಕೈಯಲ್ಲಿ ಲುಂಗಿಯ ತುದಿಹಿಡಿದು ಅಲ್ಲಾಡಿಸುತ್ತಾ ಹೊರಟ. ಒಂದೆರಡು ನಿಮಿಷಗಳ ನಂತರ ಆದಪ್ಪನ ಕೈ ಬಾಯಿ ಮಾತು ಕೇಳುವ ಬಡಿಗೇರ ಕಲ್ಲಪ್ಪ, ಕಂಬಾರ ಹುಸೇನಿ ಅಂಗೈಗಳಿಂದ ಬಾಯಿವರೆಸಿಕೊಳ್ಳುತ್ತಾ ಹೋಟೆಲ್‌ನಿಂದ ಹೊರ ಬಂದರು. ಚಾ ಕುಡಿದ ಕಪ್ಪನ್ನು ಮುಟುಗಿ ಮಾಡಿದ ಈರಮ್ಮ ಹೋಟೆಲ್ ಮುಂಭಾಗದ ಕಾಲ್ಗುಂಜಿಗೆ ಒಗೆಯುತ್ತಾ ಅವರನ್ನೇ ದಿಟ್ಟಿಸಿ ನೋಡಿದಳು.

ಎದ್ದೇಳಲು ಯಾಕೊ ಶಕ್ತಿ ಸಾಲಲಿಲ್ಲವೊ ಈರಮ್ಮ ಹೋಟೆಲ್ ಮುಂಭಾಗದಲ್ಲಿ ಇಟ್ಟಿದ್ದ ಕೋಲ್ಡ್ರಿಂಕ್ಸ್ ಕೇಸ್‌ಗಳಿಗೆ ಬೆನ್ನು ಆನಿಸಿ ತುದಿಗುಂಡಿಲೆ ಕುಳಿತಳು. ಹೋಟೆಲ್ ಒಳಗಿದ್ದ ನಾಲ್ಕಾರು ಮಂದಿ ತಮ್ಮದೇ ಆದ ಚರ್ಚೆಯಲ್ಲಿ ತೊಡಗಿದ್ದರು. ‘ಈ ಹುಚ್ಚೀರಿ ಒಂದು ಹೊಲ ಕೊಟ್ಟುಬಿಟ್ರ ನಮಗ ಬರೋ ದುಡ್ಡು ಎಲ್ಲಾ ಬಂದುಬುಡುತ್ತ. ಈ ಹುಚ್ಚುಕೋಡಿಗೆ ಯಾರು ಹೇಳಿದ್ರೂ ಕೇಳವಲ್ತು ಏನಿಲ್ಲ. ಆಕಿ ಎರಡು ಎಕರೆ ಸಲುವಾಗಿ ಇಡೀ ಪ್ರಾಜೆಕ್ಟ್ ಸ್ಟಾರ್ಟ್ ಆಗೋದು ತಡ ಆಗಾಕ ಹತ್ಯೈತಿ. ಬಳ್ಳಾರಿಯ ಮಿನಿಸ್ಟ್ರುಗಳೇ ಈ ಪ್ರಾಜೆಕ್ಟ್‌ನ ಮಾಲೀಕರಂತೆ. ಅವ್ರು ಮನಸ್ಸು ಮಾಡಿದ್ರೆ ಮುಗೀತು. ಅವ್ರಿಗಂದ್ರ ಮುಖ್ಯಮಂತ್ರಿ ಅಂಬ ಮುಖ್ಯಮಂತ್ರಿ ಥರಗುಟ್ಟಿ ಹೋಗ್ತಾನ. ಇಡೀ ಸರ್ಕಾರ ಅಂಬದು ಅವರ ಕೈಯಾಗ ಆಟದ ಗೊಂಬಿ ಆಗ್ಯೈತಿ...’ ಆ ದನಿ ದುರಗನಗೌಡನದು ಅಂತ ಈರಮ್ಮ ಊಹಿಸಿದಳು. ಹಾಗೆ ತನ್ನದೇ ಆದ ಮಾತಿನಲ್ಲಿ ತೊಡಗಿದಳು. ‘ಈ ಮಕ್ಕ ಕಣ್ಣಿಗೆ ನಾನು ಹುಚ್ಚಿಗತೆ ಕಾಣ್ತೇನಂತ. ಹುಚ್ಚಿಗತೆ ಮಾಡಿದ್ದೇ ಇಂಥ ಮಂದೀನ. ನನ್ನ ಸಂಕ್ಟಕ್ಕ ನಾನು ಚೀರಿದ್ರ, ಕೂಗಿದ್ರ ಹುಚ್ಚಿ ಅಂತಾರ. ಮಕ್ಕಳಿಗೆ ಪಾಲು ಕೊಟ್ಟ ಮ್ಯಾಲ ತಂದಿ-ತಾಯಿ ಉಪ ಜೀವನಕ್ಕಂತ ಈ ಮೂರು ಎಕರೆ ನಮ್ಮ ಪಾಲಿಗೆ ಬಂತು. ಗಣಮಕ್ಕು ನನ್ನ ಹೊಟ್ಯಾಗ ಹುಟ್ಯಾರೊ ಇಲ್ಲೊ ಅಂಬಂಗ ನನ್ನೊಬ್ಬಾಕಿನ ಇಲ್ಲಿ ಬುಟ್ಟು ಬೆಂಗಳೂರಿಗೆ ದುಡಿಯಾಕಂತ ಹೋಗಿಬುಟ್ರು. ಅವ್ರು ಏನ್ ಕೊಟ್ರೂ ನಾ ಈ ಊರು ಬುಟ್ಟು ಹೋಗಂಗಿಲ್ಲ. ನನ್ನ ಎರಡೆಕರೆ ಹೊಲ ಬಿಟ್ಟು ಎಲ್ಲಿಗೂ ಹೋಗಲ್ಲ. ನಂದೂ ನನ್ನ ಮುದೇತನ ಕುಣಿ ಸಮೀಪನ ನಮ್ಮ ಹೊಲದಾಗನ ಮಣ್ಣು ಮಾಡ್ತಾರು. ಏನನ ಆಗ್ಲಿ... ಈ ಹೊಲಾನ ಯಾರಿಗೂ ಕೊಡಂಗಿಲ್ಲ...’ ಇಷ್ಟೊತ್ತಿನ ತನಕ ಪಿಸಿಪಿಸಿ ವಟಗುಟ್ಟ ಮಾತಾಡಿದ್ದ ಈರಮ್ಮ, ಏನು ತಿಳಿಯಿತೋ, ‘ಕೊಡಂಗಿಲ್ಲಲೋ... ... ಬರ್‍ರೀರಿ ಬರ್‍ರಿ....’ ಚಟಾರನೆ ಚೀರಿದಳು

(ಮುಂದುವರೆಯುವುದು)

ಲಂಕೇಶರು ನಡೆಸಿದ ವಿಚಾರಣೆ ಪ್ರಸಂಗವು...!

ಇದು ಬಹಳ ಹಿಂದಿನ ಘಟನೆ.

ಪತ್ರಕರ್ತ ಗೆಳೆಯನೊಬ್ಬ ಮೊನ್ನೆ ಸಿಕ್ಕು ಲಂಕೇಶರು ಒಮ್ಮೆ ತನ್ನ ವಿರುದ್ಧ ನಡೆಸಿದ ಇಲಾಖಾ ವಿಚಾರಣೆ ಕುರಿತು ನೆನೆದುಕೊಂಡು ನಮ್ಮನ್ನೆಲ್ಲ ಚೆನ್ನಾಗಿ ನಗಿಸಿದ.

ಲಂಕೇಶರ ಒಡನಾಟ, ಲಂಕೇಶ್ ಪತ್ರಿಕೆಯ ವರದಿಗಾರನೆಂಬ ಖ್ಯಾತಿ ಇದ್ದ ಆತ ಚುರುಕಾಗಿ ಕೆಲಸ ಮಾಡುತ್ತಿದ್ದ. ಹೀಗಿದ್ದಾಗೊಮ್ಮೆ ಅವನಿಗೆ ಲಂಕೇಶರಿಂದ ಒಂದು ಪತ್ರ ಬರಬೇಕೆ!

"ಹೀಗ್ಹೀಗೆ ನಿಮ್ಮ ವಿರುದ್ಧ ಕೆಲವು ಆರೋಪಗಳಿದ್ದು ವಿಚಾರಣೆ ನಡೆಸಬೇಕಿದೆ..." ಎನ್ನುವ ಪತ್ರವದು.

ಈ ತನಿಖೆಯ ವಿಚಾರಣಾಧಿಕಾರಿಯಾಗಿ ದಾವಣಗೆರೆಯ ಖ್ಯಾತ ಬರಹಗಾರ ಬಿ.ವಿ.ವೀರಭದ್ರಪ್ಪನವರನ್ನು ಲಂಕೇಶರು ನೇಮಿಸಿದ್ದರಂತೆ.

ಲಂಕೇಶರ ಪತ್ರ ನೋಡಿ ಕಕ್ಕಾಬಿಕ್ಕಿಯಾದ ಆ ಪತ್ರಕರ್ತ ಮಿತ್ರ ಒಂದು ದಿನ ಬೆಳಗ್ಗೆ ದಾವಣಗೆರೆಗೆ ಹೋಗಿ ತನಿಖೆಗೆ ಒಳಗಾದನಂತೆ.

ಆ ವಿಚಾರಣೆ ನಡೆದ ಪರಿ ಹೀಗಿತ್ತು,

ಬಿವಿವಿ: ನಿಮ್ಮ ಹೆಸರು ಏನು?

ಆರೋಪಿ: .... ಸಾರ್.

ಬಿವಿವಿ: ನೀವು ದಿನಾ ಎಲ್ಲೆಲ್ಲಿಗೆ ಹೋಗುತ್ತೀರಿ, ಯಾರ್‍ಯಾರನ್ನು ಭೇಟಿ ಮಾಡುತ್ತೀರಿ ಹೇಳಿ?

ಆರೋಪಿ: ಸಾರ್ ಆಯಾ ವಾರದ ವರದಿಗಳಿಗೆ ಸಂಬಂಧಿಸಿದಂತೆ ಕೆಲವರನ್ನು ಹೋಗಿ ನೋಡಬೇಕಾಗುತ್ತದೆ. ನಾನು ಒಂದೊಂದು ಸಾರಿ ಒಂದೊಂದು ತರದ ಜನಾನ ಭೇಟಿಯಾಗುತ್ತಿರುತ್ತೀನಿ.

ಬಿವಿವಿ: ನಿಮಗೆ ಯಾವ್ಯಾವ ರಾಜಕಾರಣಿಗಳು ಗೊತ್ತು?


ಆರೋಪಿ: ...... ಇಂತಿಂತವರ ಪರಿಚಯ ಇದೆ.

ಬಿವಿವಿ: ನೀವು ವರದಿ ಹೇಗೆ ಬರೆಯುತ್ತೀರಿ?

ಆರೋಪಿ: !!!..... ಸಾರ್ (ಮನಸ್ಸಿನಲ್ಲೇ ಪೆನ್ನು-ಹಾಳೆ ಇಟ್ಟುಕೊಂಡು ಎಂದುಕೊಳ್ಳುತ್ತಾ) ಏನಾದರೂ ದಾಖಲೆ, ಸಿಕ್ಕ ಮಾಹಿತಿ ತಗೊಂಡು ಬರೀತಿನಿ.

ಬಿವಿವಿ: ಸರಿ. ನೀವಿನ್ನು ಹೋಗಬಹುದು

-ಬಿ.ವಿ.ವೀರಭದ್ರಪ್ಪನವರು ಹಾಗೆಂದು ಹೇಳಿ ಸ್ಥಳದಲ್ಲೇ ಒಂದು ವಿಚಾರಣಾ ವರದಿ ರೆಡಿ ಮಾಡಿ ಅದನ್ನು ಸೀಲ್ ಮಾಡಿದ್ದ ಕವರ್‌ನಲ್ಲಿ ಹಾಕಿ ಅದೇ ಪತ್ರಕರ್ತನ ಕೈಗೆ ನೀಡಿ 'ಹೋಗಿ ಇದನ್ನು ಲಂಕೇಶರಿಗೆ ಕೊಡು' ಅಂದರಂತೆ.



ಆ ಪತ್ರಕರ್ತನೊ 'ಇದೊಳ್ಳೆ ಫಜೀತಿಯಾಯಿತಲ್ಲ' ಅಂತ ಗೊಣಗಿಕೊಂಡು ಬೆಂಗಳೂರಿಗೆ ಬಂದು ಲಂಕೇಶರ ಕೈಗೆ ಕವರ್ ಕೊಟ್ಟು ಅಲ್ಲೇ ಕುಳಿತನಂತೆ. ವರದಿ ಓದಿದ ಲಂಕೇಶ್ 'ತಗೊಳ್ಳಯ್ಯ ನೀನೂ ಓದು' ಅಂದರು.

ನೋಡಿದರೆ 'ಈತ ಒಳ್ಳೆ ವರದಿಗಾರ, ತಪ್ಪುಗಳೇನೂ ಇಲ್ಲ' ಅಂತ ಇತ್ತಂತೆ.

ಈತನಿಗೆ ಸಮಾಧಾನ ಆಯಿತಾದರೂ ಕೊಂಚ ಬೇಸರ, ಜೊತೆಗೆ ಕುತೂಹಲವೂ ಶುರುವಾಯಿತು.

"ಸಾರ್ ಯಾರಾದ್ರು ನನ್ ಮೇಲೆ ಕಂಪ್ಲೇಂಟ್ ಮಾಡಿದಾರಾ? ಈ ತರ ಎನ್‌ಕ್ವಯಿರಿ ಯಾಕೆ ಮಾಡಿಸಿದಿರಿ!" ಅಂದ.

ಅದಕ್ಕೆ ಲಂಕೇಶರು,



"ಸುಮ್ನೆ ಕಣಯ್ಯ ನಾನು ಸಂಪಾದಕ, ಆಗಾಗ ಈ ತರ ಏನಾದ್ರೂ ಮಾಡ್ತಿರಬೇಕಾಗುತ್ತೆ" ಅಂದು ಬಿಡಬೇಕೆ!

ಆ ಪತ್ರಕರ್ತನಿಗೆ ಪಿಚ್ಚೆನಿಸಿಬಿಟ್ಟಿತ್ತು, ಕೊಂಚ ಬೇಸರವೂ ಆಯಿತೆನ್ನಿ. ಅದಾದ ಸ್ವಲ್ಪ ಹೊತ್ತಿಗೆ ಸಂಜೆ ಯಾರೋ ಮಧ್ಯ ವಯಸ್ಸಿನ ವ್ಯಕ್ತಿ ಬಂದು ಲಂಕೇಶರಿಗೆ 'ಹೋಗೋಣವಾ' ಅಂದರು. 'ಸರಿ' ಅಂದು ಆಫೀಸಿನಿಂದ ಹೊರಟ ಲಂಕೇಶ್ ಈ ಪತ್ರಕರ್ತ ಮಿತ್ರನ ದುಗುಡ ಕಂಡು 'ಬಾರಲೇ ಹತ್ಕೋ ಕಾರು' ಅಂದರಂತೆ.

ಕಾರು ಸೀದಾ ವೆಸ್ಟ್ ಎಂಡ್ ಹೋಟೆಲ್‌ಗೆ ಹೋಯಿತು. ಅಲ್ಲಿ ಗುಂಡು ಪಾರ್ಟಿ ಶುರುವಾದಾಗ ಈ ಗೆಳೆಯ ಆತಿಥೇಯನಿಗೆ "ಸಾರ್ ನಿಮ್ದು ಯಾವ ಪತ್ರಿಕೆ?" ಅಂದನಂತೆ. ಆತನ ಪ್ರಕಾರ ಲಂಕೇಶರ ಗೆಳೆಯ ಅಂದರೆ ಆತ ಇನ್ನೊಬ್ಬ ಪತ್ರಕರ್ತನೇ ಆಗಿರಬೇಕು ಎಂದಾಗಿತ್ತು.

ಲಂಕೇಶ್ ಕನ್ನಡಕ ಸರಿ ಮಾಡಿಕೊಂಡು ನಗುತ್ತಾ "ಲೇಯ್ ಇವನು ಬಳ್ಳಾರಿಯವರು. ಅಕ್ಕಿ ವ್ಯಾಪಾರಿ ಕಣಲೆ" ಅಂದರು.

ಈತ ಮತ್ತೂ ಕಕ್ಕಾಬಿಕ್ಕಿ, ಪ್ರಖ್ಯಾತ ಪತ್ರಕರ್ತ ಲಂಕೇಶರಿಗೂ ಈ ಬಳ್ಳಾರಿಯ ಹೋಲ್‌ಸೇಲ್ ಅಕ್ಕಿ ವ್ಯಾಪಾರಿಗೂ ಎಲ್ಲಿಗೆಲ್ಲಿಯ ಸಂಬಂಧವೆಂಬ ಕುತೂಹಲ. ಆ ಬಗ್ಗೆ ಲಂಕೇಶರೇನೂ ವಿವರಣೆ ಕೊಡಲಿಲ್ಲವಾದರೂ ಆ ಗೆಳೆಯನಿಗೆ ಕೊನೆಗದು ತಂತಾನೆ ಅರ್ಥವಾಯಿತು.

ಲಂಕೇಶ್, ಸಮಾಜದ ಅನೇಕ ಸ್ತರಗಳ ಜನಗಳೊಂದಿಗೆ ಗೆಳೆತನ ಹೊಂದಿದ್ದರು. ಅದೇ ಅವರನ್ನು ಜೀವಂತವಾಗಿರಿಸಿ ಬದುಕಿನ ಅನೇಕ ಹೊಸ ಒಳನೋಟಗಳನ್ನು ಒದಗಿಸುತ್ತಿತ್ತೆಂದು ಆತನಿಗೆ ಅನ್ನಿಸಿದ ಘಳಿಗೆ ಅದು.

ಅಂದಹಾಗೆ ಅವತ್ತು ಲಂಕೇಶರೊಂದಿಗಿದ್ದವರ ಹೆಸರೇ ಬಳ್ಳಾರಿಯವರು ಎಂದು. ಅವರ ಮಗ ಸಾಗರ್ ಬಳ್ಳಾರಿ ಸಿನಿಮಾ ನಿರ್ದೇಶಕನಾಗಿ ಬೇಜಾ ಫ್ರೈ ಕಚ್ಚಾ ಲಿಂಬೂನಂತಹ ಹಿಟ್ ಸಿನಿಮಾಗಳನ್ನು ಕೊಟ್ಟಿದ್ದಾರೆ.

ಈ ಹಳೆಯ ನೆನಪುಗಳೊಂದಿಗೆ ಹರಟ ಕಾಫಿ ಕುಡಿದು ಹೊರಟಿದ್ದು ಗೆಳೆಯ ಚಳ್ಳಕೆರೆ ಯರಿಸ್ವಾಮಿ! ಅವತ್ತು ಲಂಕೇಶರಿಂದ ವಿನಾಕಾರಣ ವಿಚಾರಣೆಗೆ ಒಳಗಾಗಿ ಪೇಚಿಗೆ ಸಿಕ್ಕವರು.

ಲಂಕೇಶರ ಕೀಟಲೆ ಬುದ್ಧಿಗೆ ಇದೊಂದು ನಿದರ್ಶನ.



ನಿನ್ನ ಸಂಗಾತವ ಬಿಟ್ಟು ಬೇರೇನೂ ಬೇಡ
ಎಂಬಷ್ಟು ಖಿನ್ನನಾಗಿದ್ದೆ ನಾನು
ಗಾರಾಗಿದೆ ಬದುಕು ಮರುಭೂಮಿಯಂತೆ

ಸಂಜೆ ಯಾವಾಗಾದರೊಮ್ಮೆ
ನಾವು ಗೆಳೆಯರು ಒಂದೆಡೆ ಸೇರಿದಾಗ
ಅದು ಇನ್ನಷ್ಟು ಅರಿವಿಗೆ ಬರುತ್ತದೆ

ಕೆಟ್ಟು ಹೋದ ಕಾಲದ ಜೊತೆಗೆ
ಒಳ್ಳೆಯವರಾಗಿಯೇನೂ ಉಳಿಯಲಿಲ್ಲ ನಾವು
ನಡುರಾತ್ರಿಯ ಜೊತೆ ಸ್ಪರ್ಧೆಗೆ ಬಿದ್ದವರಂತೆ
ಮಾತಿನಲ್ಲಿ ಸವೆದು ಹೋದವರು

ಜಗತ್ತು ನಮ್ಮನ್ನು ದಾಟಿ
ಮುಂದೆ ಧಾವಿಸುತ್ತಿರುವ ಸದ್ದು
ಕೇಳಿಸುತ್ತಿದೆ ನಮ್ಮ ಕಿವಿಗಳಿಗೆ

ಬೂಟುಗಾಲಲಿ ಕಪ್ಪು ಟೈಗಳಲಿ
ಹೊಸ ಚಹರೆ ಹೊಸ ಆಯುಧಗಳ ಧರಿಸಿ
ದಾರಿಯುದ್ದಕ್ಕೂ ಸಿಗುವ ಕೊಳಚೆ ಗುಂಡಿಗಳ
ನೆಗೆದು ಸಾಗುವ ತರಬೇತಿ ಪಡೆದಿದ್ದಾರೆ ಅವರು

ಕೆಟ್ಟುಹೋದ ಕಾಲದ ಜೊತೆಗೆ
ಒಳ್ಳೆಯವರಾಗಿಯೇನೂ ಉಳಿಯಲಿಲ್ಲ ನಾವು

• ವಸಂತ ಬನ್ನಾಡಿ

...ಾಡೆನ್ ಸತ್ತ ಸರಿ, ತೊಗಾಡಿಯ ಮುತಾಲಿಕ್‌ನ ಯಾರು ತಗಿಬೇಕು?

...ಚಿತ್ತ ಅಮೆರಿಕಾದವರು ಬಿನ್ ಲಾಡೆನ್ ಕೊಂದು ...ದ್ರಕ್ಕೆಸೆದು ಕೈ ತೊಳೆದುಕೊಂಡು ಆತನ ಸಂತತಿ ...ದು ಏನಾದರೂ ಅನಾಹುತ ಮಾಡಬಹುದೆ ಎಂದು ...ಚಿಸುತ್ತಿರಬೇಕಾದರೆ ಇತ್ತ ಉಗ್ರಿ,

"ಕಾಳಮಾವ, ನಿನಿಗೆ ಬಿನ್ ಲಾಡೆನ್ ಕತೆ ಗೊತ್ತೆ?"

...ಯ ಲು ಸೀ ಮೆ
ಕಟ್ಟೆಪುರಾಣ
▶ಬಿ. ಚಂದ್ರೇಗೌಡ

"ಅವುನ್ಯಾರೊ ಸಾಬಿ ಸತ್ತ ಅಂತ ಅಷ್ಟು ಗೊತ್ತು ..."

"ಇಲ್ಲಿಗೆ ಹತ್ತೊರಸದ ಹಿಂದೆ, ನೀನು ಭರ್ಜರಿಯಾಗಿ ...ವಮಿ ಪಕ್ಷ ಮಾಡ್ತಯಿದ್ದಾಗ, ಅಮೆರಿಕದ ಮ್ಯಾಲೆ ... ಲಾಡೆನ್ ದಾಳಿ ಮಾಡ್ಸವುನೆ, ಅಮೆರಿಕದ ...ಕಾರದ ಕೋಡಿನಂಗಿದ್ದ ಯರಡು ಕಟ್ಟಡ ನ್ಯಲಸಮ ...ದ ಅಂತ ಸುದ್ದಿ ಬತ್ತು ನೋಡು...."

...ಊ, ಪಕ್ಷಕ್ಕೆ ಬಂದೋರ್ಯಲ್ಲ ಅದ್ನೇ ಮಾತಾಡಿದ್ರು."

...ಅಮೆರಿಕದ ಮ್ಯಾಲೆ ದಾಳಿ ಮಾಡಿಸಿದ್ದೊನು ಬಿನ್ ...ನ್ ಅಂತ. ಅವುನ್ನ ಅಮೇರಿಕದೋರು ಹುಡುಕ್ತಾ ... ಪಾಕಿಸ್ತಾನದೋರು ಮುಚ್ಚಿಟ್ಟಿಗಂಡಿದ್ರುಂತೆ. ಆದ್ರೂ ...ಯಿಸ್ಯವುರೆ ನೋಡು."

...ಅವುರ್ಯಾವತ್ತು ಅಂತ ಕ್ಯಲಸನೆ ಅಲವೇನ್ಲ ಮಾಡದು. ... ದೇಸದಲ್ಲಿ ಮಾಡಬಾರ್ದ ಮಾಡಿದ ಸುಬರ್ಯಲ್ಲ ...ಸ್ತಾನಕೋಗಿ ಸುಖವಾಗಿದ್ದರಂತೆ ಗೊತ್ತೆ?" ಎಂದ ...

...ಬಿನ್ ಲಾಡೆನ್ನು ಸುಖವಾಗೇ ಇದ್ದನಂತಲ್ಲ ಹೇಳು. ... ಬಂಗಲೆ ಕಟಗಂಡು ಹೆಡತಿ ಮಕ್ಕಳ ಜ್ವತೆ ...ಮಾಗಿದ್ನಂತೆ. ಆದರೆ ಪಾಕೀಸ್ತಾನದೋರು ಮಾತ್ರ ...ಲ್ಲವುನೊ ನಮಿಗೆ ಗೊತ್ತೇ ಇಲ್ಲ ಅಂತ ಸುಳ್ಳೇಳಿಕಂಡೇ ...ದ್ರು. ಈಗ ಅವುರ್ಯಂತ ಜನ ಅಂತ ಪ್ರಪಂಚಕೆ ...ಯ್ತು, ಆದ್ರು ಅವುರಿಗ್ಯಾವ ಮಾನ ಮರಿಯಾದಿನೂ ... ಲಾಡೆನ್ ಇಲ್ಲಿರಲೂ ಇಲ್ಲ, ಅದವುನ ಮನೆನೂ ... ಅಂತ ಬೇಕಾದ್ರೆ ವಾದುಸ್ತವೆ" ಎಂದ ಉಗ್ರಿ.

...ಕಟ್ಟ ಜನ ಮನೆಲಿಟಗಂಡ್ರೆ ನಾವು ಕ್ಯಟ್ಟ ಜನಕೇ ...ವೋಟಾಯ್ತಿವಿ ಕಂಢ್ರ" ಎಂದ ಕಾಳಮಾವ.

...ಅದಾ ಪಾಕೀಸ್ತಾನದವುಕೆ ತಿಳಿಬೇಕಲ್ಲ ಹೇಳು. ...ಗೂ ಬಂಬಾಯಿ ಮ್ಯಾಲೆ ದಾಳಿ ಮಾಡಿಸಿದ್ದು ...ಲ್ಲಿ ಅಲ್ಲಿ ಸಿಕ್ಕಿಬಿದ್ದಿರೋನು ನಮ್ಮೊನಲ್ಲ ಅಂತ ...ವುರೆ. ಇದಕೇನೇಳ್ತಿ?"

...ಬಾಳ ದಿನ ಅಂತ ಸುಳ್ಳು ನ್ಯಡಿಯದಿಲ್ಲ, ಈಗ ಮಾಲ ಸಮೇತ ಸಿಕ್ಕಿ ಬಿದ್ದವುರಾ. ಮಾನ ಹೋಯ್ತೋ."

"ಅವುಕ್ಯಾವ ಮಾನ ಇದ್ದದು ಮಾವ? ಬಿನ್ ಲಾಡೆನ್‌ಗೆ ಮನೆನೆ ಕಟ್ಟಿ ಕೊಡ್ತವೆ, ಬಂಬಾಯಿನೆ ಬ್ಲಾಸ್ಟ ಮಾಡಿದ್ದ ದಾವೂದನಿಗೆ ಬಂಗ್ಲೆ ಕೊಡ್ತವೆ. ಆ ನನ ಮಗನೂ ಅಲ್ಲೇ ಅವುನೆ."

"ಈ ಸಾಬಿಯ ಅಮೇರಿಕದೋರು ಹ್ವಡದಾಕಿದಂಗೆ ಆ ಸಾಬಿಯ ನಮ್ಮ ದೇಸದೋರು ವಡಿಯಕ್ಯಾಗದಿಲವೇನ್ಲ?" ಎಂದ ಸೀರ.

"ಅದ್ಯಾವತ್ತಿಗೂ ಆಗದಿಲ್ಲ ಕಣಮಾವ. ಅಮೇರಿಕದೋರು ಅಂದ್ರೆ ಏನು ತಿಳ ಕಂಡಿದ್ದಿ ನೀನು. ಈ ಜಿಲ್ಲೆ ಎಸ್ಪಿ ಇದ್ದಂಗೆ ಅಮೇರಿಕ ಯಾವೂರಿಗಾರ ನುಗ್ಗಬವುದು, ಯಾರ್ನಾರ ಅರೆಸ್ಟು ಮಾಡಿ ತಗಂಡೋಗಿ ಎನ್‌ಕೌಟ್ರು ಮಾಡಬವುದು. ಅಂತ ಪವರ‍್ರದೆ ಆ ದೇಸಕೆ ಗೊತ್ತೆ?"

"ಅಂಗರ‍್ಯಲ್ಲಾ ದೇಸಕಿಂತ ದ್ವಡ್ಡದೇಸ ಅನ್ನು."

"ದ್ವಡ್ಡಪ್ಪ ದೇಸಾದ್ರು ಜನಸಂಖ್ಯೆ ಕಡಮೆ. ಇಡೀ ಪ್ರಪಂಚನೆ ಆಳೊ ಮನಸು, ಹಾಳು ಮಾಡೊ ಮನಸಿನೋರ‍್ಯಲ್ಲ ಹೋಗಿ ಅಮೇರಿಕ ದಲ್ಲಿ ಜಾಮಾಗ್ಯವುರೆ. ಕಡಮೆ ಸಂಖ್ಯೆಲಿದ್ರು ಪ್ರಪಂಚನೆ ಆಳತರೆ ಕಣೊ."

"ಕಡಮೆ ಸಂಖ್ಯೆಲಿದ್ರು ಬ್ರಾಂಬ್ರು ನಮ್ಮ ದೇಸ ಆಳ್ತರಲ್ಲ ಅಂಗೆ" ಎಂದುಕೊಂಡು ವಾಟಿಸ್ಸೆ ಬಂದ.

"ಲಾಡನ್ನು ಸತ್ತನಂತೆ. ತಿಥಿಗೋಗದಿಲವೇನ್ಲ?" ಎಂದು ಜುಮ್ಮಿ ನಕ್ಕಳು.

"ತಿಥಿಯ ಒಂದೇ ಸತಿ ಕಣಕ್ಕ ಮಾಡದು. ಹಿಂದೊಂದು ಸತಿ ನಮ್ಮ ಮಂಡೇವುದ ದ್ಯಾವಪ್ಪನ ಲೀಡರ್‌ಸಿಪ್ಪಲ್ಲಿ ಲಾಡೆನ್ ತಿಥಿ ಮಾಡಿ ರಸ್ತೆ ಮ್ಯಾಲೆ ಉಂಡಿದ್ರು."

"ಅವುನಿಗೇನೊ ಇಪ್ಪತ್ತೈದು ಮಕ್ಕಳಿದ್ದವಂತೆ ನಿಜವುಲ?" ಎಂದ ಸೀರ.

"ಇದ್ದೊ ಚಿಗಪ್ಪ, ಅವುರಪ್ಪನಿಗೆ ಐವತ್ತು ಮಕ್ಕಳಿದ್ದೊ, ಇವುನಿಗೆ ಇಪ್ಪತ್ತೈದು. ಸತ್ತವು ಕಟ್ಟವು ಸೇರಿದ್ರೆ ಇನ್ನೆಷ್ಟಾದವೊ."

"ಅದ್ಯಾಕಂಗೆ ಮಕ್ಕಳುಟ್ಟಸಿದ್ದ ಸೂಳೆ ಮಗ?" ಎಂದ ಕಾಳಮಾವ.

"ಯುದ್ಧ ಮಾಡಕ್ಕೆ ಬೇಕಾಯ್ತವೆ ಅಂತ ಹುಟ್ಟಸಿದ್ದ ದ್ವಡಪ್ಪ, ಅದ್ನೆ ಯಲ್ಲಾರಿಗೂ ಹೇಳತಿದ್ದ."

"ಅವುನ ಮಕ್ಕಳು ಅವುನಂಗೆ ಆದ್ರೆ ಕತಿಯೇನು?"

"ಅದೇ ಈಗ ಅಮೇರಿಕದೋರಿಗೆ ಬಂದಿರೊ ಹೆದ್ರಿಕೆ. ಅವುನ ಕ್ಯಲಸ ಮುಂದುವರಸಕ್ಕೆ ಅವುನ ಮಕ್ಕಳೇ ಆಗಬೇಕು ಅಂತ ಏನು ಇಲ್ಲ. ಯಾವ ಸಾಬಿನಾದ್ರು ಆಗಬವುದು."

"ಸಾಬರು ಯಾವತ್ತಿಗೂ ಅಪಾಯಕಾರಿ ಜನ ಕಂಢ್ರ" ಎಂದ ಸೀರ.

"ಇದೇನು ಚಿಗಪ್ಪ ಹಿಂಗಂತಿ. ಯಲ್ಲಾ ಜಾತಿ ಧರಮದಲ್ಲೂ ಅಪಾಯಕಾರಿ ಜನ ಅವುರೆ. ಸಾಬರಲ್ಲಿ ಸ್ವಲುಪ ಜಾಸ್ತಿ ಇರಬವುದು. ಅದಕ್ಕೆ ಕಾರಣ ಏನಪ್ಪ ಅಂದ್ರೇ ಬಡತನ, ಅಜ್ಞಾನ, ಮತಾಂಧತೆ ಅಂತ ಬುದ್ಧಿಜೀವಿಗಳು ಹೇಳ್ತರೆ. ಆದ್ರೆ ಅದನ್ನ ನಾನು ಒಪ್ಪದಿಲ್ಲ, ನಮ್ಮ ದೇಸದ ತುಂಬ ಬಡುವುರೇ ಅವುರೆ. ಅವುರ‍್ಯಲ್ಲ ಕೆಟ್ಟೋರಾದ್ರೆ ದೇಶ ಉಳದತೆ. ಅಂಗೆ ನೋಡಿದ್ರೆ ದೇಶ ಉಳಿದಿರದೆ ಬಡವುರಿಂದ. ಮುಸ್ಲಿಮರಲ್ಲಿರೊ ಬಡುವುರೂ ದುಡುಕಂಡೆ ತಿಂತರೆ. ಲಾಡೆನ್ನು ಬಡವಲ್ಲ ಕೋಟ್ಯಾಧಿಪತಿ. ಕ್ಯಟ್ಟ ಜನಗಳತ್ರ ದುಡ್ಡಿದ್ರೆ ಬಾಳ ಡೇಂಜರ್. ಏನಾದ್ರು ಮಾಡಿ ದಕ್ಕಿಸಿಗತ್ತರೆ. ಈ ಲಾಡೆನ್ನು ದುಡ್ಡಿನ ಧಿಮಾಕಿನಿಂದ ಇಡೀ ಪ್ರಪಂಚನೆಲ್ಲಾ ಮುಸ್ಲಿಮರೇ ಆಳಬೇಕು ಅಂತ ಹ್ವಂಟಿದ್ದ, ಅಮೇರಿಕದೋರು ನಾಯಿ ಹ್ವಡದಂಗೆ ಹ್ವಡದಾಕಿದ್ರು ಅತ್ತಗೆ."

"ಸಾಬರ ದೇಸ ಹೆಚಗಂಡಾಗ್ಯಲ್ಲ ಬುರುಡೆ ಮ್ಯಾಲ್ವಡಿಯಕ್ಕೆ ಅಮೇರಿಕ ಇರಲೇಬೇಕು ಕಣೊ" ಎಂದ ಉಗ್ರಿ.

"ಅವುರೇನು ಸಾಬಸ್ತರಲ್ಲ ಕಣೊ. ಇದೇ ನಮ್ಮ ಇಂದ್ರಾಗಾಂಧಿ ಬಿಂದ್ರನ್ನವಾಲೆ ಬ್ಯಳಿಸಿದ್ರು. ಅವುನತ್ತಗೆ



ಅವುಳನೇ ತಗದ. ಅದೇತರ ಈ ಅಮೇರಿಕದೋರು ಲಾಡೆನ್ ಬ್ಯಳಿಸಿದ್ರು. ಕಡಿಗೆ ಅವ್ರುನೇ ಅವುರ ಕೋಡುಮುರದ. ಈಗವುನ್ನ ಸಾಯಿಸ್ಯವುರಲ್ಲಪ್ಪ, ದಾವೂದ್ ಇಬ್ರಾಹಿಂ ಪಾಕೀಸ್ತಾನದಲ್ಲವುನೆ, ಆ ನನಮಗ ನಮಿಗೆ ತ್ವಂದ್ರೆ ಕೊಡ್ತನೆ, ಏನ ಮಾಡನ ಅಂತ ಅಮೇರಿಕ ಕೇಳಿದ್ರೆ, ಆಯ್ತು ಅದೇನು ಮಾಡಿ ಅಂತ ನಮ್ಮ ಕೈಗೂ ಗನ್ ಕೊಡ್ತವೆ. ಇಬ್ರಾಹಿಂಗೂ ಬಾಂಬು ಕೊಡ್ತವೆ. ಅಂಥಾ ಜನ ಕಣೊ ಅಮೇರಿಕದೋರು."

"ಓಹೊಹೊ, ನಮ್ಮ ಹೂಂಬಾಳೆ ಹುಡುಗನಂಗೆ ಅನ್ನು. ಅವುನು ಅಂಗೆಯ, ವಡದಾಡೊರ ಸಮಾಧಾನ ಮಾಡದು ಬುಟ್ಟು ಇವುರಿಗೆ ಕುಡ್ಲು ಕೊಡ್ತನೆ, ಅವುರಿಗೆ ಕೊಡ್ಲಿ ಕೊಡ್ತನೆ" ಎಂದು ಕಾಳಮಾವ ಅಮೇರಿಕಾ ದೇಶಕ್ಕೆ ಲೋಕಲ್ ಉದಾಹರಣೆ ಕೊಟ್ಟ.

"ಅಮೇರಿಕಾದೋರೇನೊ ಬಿನ್ ಲಾಡೆನ್ ಹ್ವಡದಾಕಿದ್ರು ಸರಿ. ಆದ್ರೆ ನಮ್ಮ ದೇಸದಲ್ಲಿ ತೊಗಾಡಿಯಾ, ಮುತಾಲಿಕ್ ಅಂತ ತಿರುಗ್ತ ಅವುರಲ್ಲ ಅವುರ‍್ಗೇನು ಮಾಡಬೇಕು ಅಂತ?" ಎಂದ ವಾಟಿಸ್ಸೆ.

"ಯಾಕವುರೇನು ಮಾಡಿದ್ರು?"

"ಲಾಡೆನ್ನೇನೊ ಪ್ರಪಂಚನ್ಯಲ್ಲ ಸಾಬರದೇಸ ಮಾಡಿ ಅಂತ ದುಡ್ಡು ಕಾಸು ಗನ್ ಕೊಡತಿದ್ದ ಆದ್ರೆ ಈ ಮತಾಂಧ್ರು ಜನಗಳ ಮನಸ್ಸೆ ಹಾಳು ಮಾಡಿಕಂಡು ತಿರುಗ್ತ ಅವುರೆ. ಆ ತೊಗಾಡಿಯಾ ಅನ್ನೊನು ಇದೇ ಬೆಳ್ಳುರಗಂಟ ಬಂದು ಯಂಥಾ ಭಾಷಣ ಮಾಡಿಬುಟ್ಟೋಗಿದ್ದ, ಅವತ್ತಿಂದ ಜನಗಳೆಲ್ಲ ಸಾಬರನ ಅನುಮಾನದಿಂದ ನೋಡಂಗಾಯ್ತು, ಇದೂ ಒಂಥರ ಲಾಡೆನ್ ಕೆಲಸನೆ ಅಲವೆ?"

"ನೋಡೋ ವಾಟಿಸ್ಸೆ, ಆ ಬಿಜೆಪಿ ಬಡ್ಡೆತ್ತವು ಏಟೇ ಮುಕಳಿ ಹರಕಂಡುವೆ ಏನೂ ಆಗದಿಲ್ಲ ಇಲ್ಲಿ, ಅವಾಗ್ಲೆ ಸುಸ್ತಾಗ್ಯವೆ, ಏದುಸುರು ಬುಡ್ತ ಅವೆ."

"ಏದುಸುರು ಬುಡ್ತರೆ ಅಂದ್ರೆ ತಿಂದು ಬುಡ್ತಾ ಅವುರೆ ಕಣೊ. ಹ್ವಟ್ಟಗಿಲ್ದೆ ಸತ್ತೋಯ್ತಿದ್ದೊ ಈ ಅಪ್ಪಮಕ್ಕಳು ಸೇರಿಕಂಡು ಅವುರ ಉಳಿಸಿಗಂಡ್ರು. ಈಗವುರೆ ತಿರುಗಿಬಿದ್ದವುರೆ."

"ದ್ಯಾವೇಗೌಡ್ರೇನೊ ಬ್ಯಾರೆ ಪಾರ್ಟಿ ಮಾಡಿದರಂತಲ್ಲಾ" ಎಂದಳು ಜುಮ್ಮಿ.

"ಇರೊ ಪಾರ್ಟಿನೆ ಮೇಂಟೇನ್ ಮಾಡಕ್ಯಾಯ್ತ ಯಿಲ್ಲ ಇನ್ನ ಬ್ಯಾರೆ ಪಾರ್ಟಿ ಮಾಡ್ತರೇನಕ್ಕ, ಅದಂಗಲ್ಲ, ಬುದ್ಧಿಜೀವಿಗಳನ್ಯಲ್ಲ ಸೇರಿಸಿ ಭ್ರಷ್ಟಾಚಾರದ ವಿರುದ್ಧ ಹೋರಾಡ್ತರಂತೆ. ಅದ್ಕೆ ಒಂದು ವೇದಿಕೆ ಮಾಡ್ತಂತೆ. ನನಿಗೂ ಫೋನ್ ಮಾಡಿದ್ರು. ಟೈಮಿಲ್ಲ ಅಂತ ಹೇಳಿದೆ ಅತ್ತಗೆ."

"ಆಹಹ, ನಿನಿಗೆ ಫೋನ್ ಮಾಡಕ್ಕೆ ಬಂದಿದ್ರೇನ್ಲ ಅವುರು, ಏನು ಸುಳ್ಳೆಳತಿಲ."

"ನೋಡಕ್ಕ, ನಿನ್ನೆದ್ರು ನಾನು ಅಪ್ಪರಾಲ್ ವಾಟಿಸ್ಸೆ ಇರಬವುದು. ಆದ್ರೆ ಹೊರಗಡೆ ನನಿಗೆ ತುಂಬಾ ರೆಸ್‌ಪೆಕ್ಟದೆ. ಇದೇ ಬಂಗಾರಪ್ಪ ಈಗ್ಲು ನನಿಗೆ ರೆಸ್‌ಪೆಕ್ಟ್ ಕೊಟ್ಟೆ ಮಾತಾಡದು."

"ಅವುನ್ಯಾಕ್ ದ್ಯಾವೇಗೌಡ್ರುತಕೆ ಬಂದಾ?"

"ಅವುನು ಮಾಡಕಂಡಿದ್ದ ಸಾಲನ್ಯಲ್ಲ ಕುಮಾರಣ್ಣ ತೀರಿಸಿದನಂತೆ. ಅದ್ಕೆ ಬಂದು ಸೇರಿಕಂಡ."

"ಕುಮಾರಣ್ಣನತ್ರ ಅಷ್ಟು ದುಡ್ಡಿದೆಯೇನ್ಲ?"

"ಊ ಕಣಕ್ಕ, ಕುಮಾರಣ್ಣನ್ನ ಏನನ್ನ ಕಂಡಿದ್ದಿ. ಯಾರು ಕೇಳಿದ್ರೂ ಇಲ್ಲ ಅನ್ನದಿಲ್ಲ, ತಗೊಳಿ ಬ್ರದರ್ ಅಂತನಂತೆ. ಅಂಥಾದ್ರಲ್ಲಿ ದ್ಯಾವೇಗೌಡ್ರು ಭ್ರಷ್ಟಾಚಾರದ ವಿರುದ್ಧ ಹೋರಾಡಕ್ಕೆ ಬುದ್ಧಿಜೀವಿಗಳೆಲ್ಲಾ ನನ್ನ ಜೊತೆಗೆ ಬಂದು ಕೈ ಜೋಡಿಸಿ ಅಂತರೆ. ಇದೊಂತರ ತನ್ನ ವಿರುದ್ಧ ತಾನೇ ಹೋರಾಡಕ್ಕೆ ಸೈನ್ಯ ಕಟ್ಟದಂತ ಜೋಕು ಕಣಕ್ಕ, ಇಂಥ ಜೋಕಿನ ಕೆಲಸನ ಗೌಡ್ರು ಆಗಾಗ್ಗೆ ಮಾಡ್ತಯಿರತರೆ."

"!?"

...ಲ್ಲಿ ಆಗುವ ಅಚಾತುರ್ಯಗಳು

...ನಾನು ಬಲ್ಲ ಹಿರಿಯರೊಬ್ಬರು ಗಂಭೀರ ಆಪರೇಷನ್ ಒಂದನ್ನು ...ಡಿಸಿಕೊಳ್ಳಲು ನಾಳೆ ಆಸ್ಪತ್ರೆ ಸೇರಲಿದ್ದಾರೆ; ಈ ಸಂದರ್ಭದಲ್ಲಿ ನಾನು ...ವನ್ನು ನೋಡಲು ಹೋದೆ. ನನ್ನ ಒಂದು ಕಣ್ಣಿನ ನೆರವಿನಿಂದ ಅವರ ...ಯ ಗೇಟ್ ತೆಗೆಯುವುದು ಕಷ್ಟವಾಯಿತು. ನನ್ನ ಮನಸ್ಸಿನ ಒತ್ತಡಗಳಿಂದಾಗಿ ...ನ ಚಿಲಕಕ್ಕೆ ಬದಲು ಬೇರೊಂದು ಕಂಬಿಯನ್ನು ಎಳೆಯತೊಡಗಿದ್ದೆ. ...ನ್ನು ಗಮನಿಸಿದ ಹಿರಿಯರು ತಾವೇ ಬಂದು ಗೇಟ್ ತೆರೆಯಲು ...ದರು. "ನೀವು ಇಷ್ಟುದೂರ ಬರುವ ಕಷ್ಟ ತೆಗೆದುಕೊಳ್ಳಬಾರದಿತ್ತು" ...ರು. ನಾನು ಸುಮ್ಮನಿದ್ದೆ. ಆಮೇಲೆ, "ಇದು ಮುಖ್ಯ ಆಪರೇಷನ್. ...pass surgery. ಒಂದೆರಡು ಮಾತಾಡೋಣ ಅನ್ನಿಸಿತು. ಇದರಿಂದ ... ಮನಸ್ಸಿಗೆ ನೆಮ್ಮದಿಯಾದರೆ ಸರಿ, ತೊಂದರೆಯಂತೂ ಆಗಲಿಕ್ಕಿಲ್ಲ ... ತಿಳಿದಿದ್ದೇನೆ" ಎಂದು ನಕ್ಕೆ. ಅವರು ನಾನು ಬಂದಿದ್ದರಿಂದ ...ೋಷಗೊಂಡಿದ್ದರು. "ಆಸ್ಪತ್ರೆಯಲ್ಲಿ ಕನಿಷ್ಠ ಪೆದ್ದುತನ ಆಗದಂತೆ ...ಡಿಕೊಳ್ಳಬೇಕು. ಮಿಕ್ಕದ್ದೆಲ್ಲ ನಿಮ್ಮ ದೇಹದ ತಾಳ್ಮೆ, ವೈದ್ಯರ ಜಾಣತನ ...ಂಬಿಸಿದ್ದು" ಅಂದೆ. ಅವರು ಒಳ್ಳೆಯ ಆಸ್ಪತ್ರೆಗೆ ಹೋಗುವುದರಲ್ಲಿದ್ದರು. ...ಯ ಸರ್ಜನ್ ಖ್ಯಾತನಾಗಿದ್ದ. ದುಬಾರಿ ಆಪರೇಷನ್ ಆದರೂ ಪರವಾಗಿಲ್ಲ, ... ಹಿರಿಯರು ಸುಖವಾಗಿ ಹಿಂದಿರುಗುವರೆಂಬ ಧೈರ್ಯ ನಮ್ಮಲ್ಲಿತ್ತು, ...ಂದರು,

..."ವೃದ್ಧಾಪ್ಯ ಕುತೂಹಲಕರವಾದದ್ದು, ಈಗ ನನಗೆ ಅಂಥ ತೊಂದರೆಯೇನೂ ..., ಬೆಳಗ್ಗೆ ವಾಕ್ ಮಾಡ್ತೇನೆ. ಓದ್ತೇನೆ, ಬರೀತೇನೆ. ಎಲ್ಲರೊಂದಿಗೆ ...ಡ್ತೇನೆ. ನಿದ್ರೆ ಚೆನ್ನಾಗಿ ಬರುತ್ತೆ, ಆದರೆ ನನ್ನನ್ನು ಪರೀಕ್ಷಿಸಿದ ವೈದ್ಯರು ... ಹೃದಯ ಸರಿಯಾಗಿಲ್ಲ, ಈಗ ಶಸ್ತ್ರಚಿಕಿತ್ಸೆ ಆಗದಿದ್ದರೆ ಯಾವ ...ಳ್ಳಾದರೂ ತೊಂದರೆಯಾಗಬಹುದು, ಅಂದರೆ ತೀರಿಕೊಳ್ಳಬಹುದು' ...ರು. ಅದೇನೋ ಹೃದಯದಲ್ಲಿನ valve ಸರಿಯಿಲ್ಲವಂತೆ...... ಆದರೆ ...ದೆ ನೋಡಿ– ಈಗ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರೆ ಇನ್ನೂ ನಾಲ್ಕೈದು ... ನಾನು ಬದುಕಿರಬಹುದು. ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳದಿದ್ದರೂ ಬದುಕಿರಬಹುದೋ ಏನೋ. ಈ ಬಗ್ಗೆ ಯಾರೂ ನಿಶ್ಚಿತವಾಗಿ ಹೇಳುತ್ತಿಲ್ಲ, ಹೇಳಲಾಗುವುದಿಲ್ಲ, ಈ ನಾಲ್ಕು ವರ್ಷಕ್ಕಾಗಿ ಇಷ್ಟೆಲ್ಲ ಗೋಳು....."

"ಹಾಗಲ್ಲ ಸಾರ್, ಇಪ್ಪತ್ತು ವರ್ಷದ ಹುಡುಗಿಗೆ ಈ ಶಸ್ತ್ರಚಿಕಿತ್ಸೆ ಅಗತ್ಯವೆಂದಾಗ ಕೂಡ 'ನಾನು ಇನ್ನು ಇಪ್ಪತ್ತುಮೂವತ್ತು ವರ್ಷ ಬದುಕಬಹುದು. ಇದಕ್ಕಾಗಿ ಯಾಕೆ ಇಷ್ಟೆಲ್ಲ ಗೋಳು' ಅನ್ನಬಹುದು. ಬದುಕು ಹೀಗೇ ಅಂತ ಹೇಳೋಕಾಗೋಲ್ಲ, ನಿಮಗೆ ಉಳಿದಿರುವ ವರ್ಷಗಳೇ ನಿಮ್ಮ ಶ್ರೇಷ್ಠ ವರ್ಷಗಳಾಗಬಹುದು–"

"ಅಥವಾ ಕೆಟ್ಟ ವರ್ಷಗಳಾಗಲೂಬಹುದು!" ಎಂದು ನಕ್ಕರು.

ನಾನೆಂದೆ: "ಆಪರೇಷನ್ ಮಾಡಿಸಿಕೊಳ್ಳುವವನಿಗೆ ಮಾತ್ರ anguish ಗೊತ್ತು, ಬೇರೆಯವರಿಗೆ ಇದೆಲ್ಲ theory- ಕೇವಲ ಅನ್ನಿಸಿಕೆ. ನಾನೀಗ ನಿಮಗೆ ಏನು ಹೇಳಿದರೂ ಎಲ್ಲ ಬರೀ ಮಾತು ಮಾತ್ರ. ಆದ್ದರಿಂದ ನಾನು ನನ್ನ ಪ್ರೀತಿಯನ್ನು ಮಾತ್ರ ನಿಮಗೆ ಹೇಳಲು ಸಾಧ್ಯ" ಅಂದೆ.


"ಈಗ ಕಣ್ಣು ಹೇಗಿದೆ?" ಅಂದರು.

"ಕಾಣಿಸ್ತಾ ಇಲ್ಲ, ಇಲ್ಲಿಯ ದೊಡ್ಡ ನೋವು ಯಾವುದೆಂದರೆ ಅನಿಶ್ಚಿಯತೆ. ಇನ್ನೊಂದು ಕಣ್ಣಿಗೆ ತೊಂದರೆಯಾದರೆ ಗತಿಯೇನೆಂಬ ಭಯ! ಅದಕ್ಕೆ ನಾನೇನು ಮಾಡ್ತಿದ್ದೇನೆ ಗೊತ್ತಾ?"

"ಏನು ಮಾಡ್ತಿದೀರಿ?"

"ನಿನ್ನೆ ಒಂದು ಗಂಟೆ ಎರಡೂ ಕಣ್ಣುಗಳನ್ನು ಮುಚ್ಚಿಕೊಂಡು ಕೂತು ಪೂರ್ತಿ ಕುರುಡಾದರೆ ಹೇಗಿರುತ್ತೆ ಅಂತ ಪ್ರಾಕ್ಟೀಸು ಮಾಡಿದೆ. Practice makes perfect....."

ಅವರು ನಕ್ಕರು. ಆಗ ನಾನು ಹೇಳಿದೆ:



"ಈ ಶಸ್ತ್ರಚಿಕಿತ್ಸೆ ಮತ್ತು ಆಸ್ಪತ್ರೆಗಳ ಬಗ್ಗೆ ಎಷ್ಟು ಹೇಳಿದರೂ ಕಮ್ಮಿಯೇ. ನೋಡಿ, ಮನುಷ್ಯರೆಲ್ಲ ಒಂದೇ ತರಹ. ಭಾರತದ ಬ್ಯಾಂಕ್‌ಗಳಲ್ಲಿ defaulters ಶೇಕಡಾವಾರು ಎಷ್ಟು ಜನ ಇರ್ತಾರೋ ಅಷ್ಟೇ ಜನ ಮುಂದುವರಿದ ದೇಶದಲ್ಲೂ ಇರ್ತಾರಂತೆ! ಇದು ವಿಚಿತ್ರವಲ್ಲವೆ? ಹಾಗೇ ಇವತ್ತಿಗೂ ಆಸ್ಪತ್ರೆಯ ತಪ್ಪುಗಳು. ಅಮೆರಿಕಾದಲ್ಲಿ ಇತ್ತೀಚೆಗೆ ಒಂದು ವರದಿ ಬಂದಿದೆ. ಮಧುಮೇಹದಿಂದ ಒಬ್ಬನ ಕಾಲಲ್ಲಿ ಗಾಯ ಗುಣವಾಗದೆ ಕಾಲು ಕತ್ತರಿಸಲು ಆಸ್ಪತ್ರೆ ಸೇರಿದ; ಎಡಗಾಲಲ್ಲಿ ಗಾಯವಾಗಿತ್ತು, ಡಾಕ್ಟರ್ ಗೊತ್ತಿಲ್ಲದೆ ಬಲಗಾಲು ಕತ್ತರಿಸಿದ. ಎಡಮೊಲೆಯನ್ನು ಕ್ಯಾನ್ಸರ್‌ಗಾಗಿ ಆಪರೇಟ್ ಮಾಡಲು ಹೋಗಿ ಗೊಂದಲದಲ್ಲಿ ಬಲಮೊಲೆ ಕತ್ತರಿಸಿದ್ದಾರೆ. ತರುಣ ವೈದ್ಯನೊಬ್ಬ ನಿರ್ಲಕ್ಷ್ಯದಲ್ಲಿ ರೋಗಿಯೊಬ್ಬನ ಆಮ್ಲಜನಕದ ಟ್ಯೂಬ್ ತೆಗೆದುಬಿಟ್ಟು ರೋಗಿಯ ಮರಣಕ್ಕೆ ಕಾರಣವಾಗಿದ್ದಾನೆ. ಕನ್ನಡ ಸಾಹಿತಿಯೊಬ್ಬರ ಪತ್ನಿಯ ಕಣ್ಣು ಆಪರೇಷನ್ ಮಾಡಲು ಹೋದ ವೈದ್ಯನೊಬ್ಬ ಸರಿಯಾಗಿದ್ದ ಕಣ್ಣನ್ನು ಕಿತ್ತುಹಾಕಿದ. ಇದಕ್ಕಿಂತ ಜಟಿಲವೂ ಆಶ್ಚರ್ಯಕರವೂ ಆದದ್ದು ಮೊನ್ನೆ ಬೆಟ್ಸಿ ಲೇಮನ್ ಎಂಬ ಹೆಣ್ಣುಮಗಳು ಸತ್ತದ್ದು. ಆಕೆಗೆ ಕ್ಯಾನ್ಸರ್ ಆಗಿತ್ತು, ಕೀಮೋಥೆರಪಿ ಕೊಡಲು ಹೋದ ವೈದ್ಯ ತಪ್ಪು ಲೆಕ್ಕಾಚಾರದಿಂದ ಎರಡರಷ್ಟು ಶಕ್ತಿಯುತವಾದ ಕೀಮೋಥೆರಪಿ ಕೊಟ್ಟೊಡನೆ ಈ ಬೆಟ್ಸಿ ಲೇಮನ್ ಬೆಂಕಿಯಲ್ಲಿ ಬಿದ್ದಂತೆ ಮುರುಟಿಕೊಂಡು ಸೀದುಹೋದಳು. ಆಕೆಯ ಸಾವು ಆಸ್ಪತ್ರೆಯ ತಪ್ಪುಗಳನ್ನು ಇಡೀ ಅಮೆರಿಕಾಕ್ಕೆ ಸಾರಿತು. ಬೆಟ್ಸಿ ಸುಪ್ರಸಿದ್ಧ ಅಂಕಣಗಾರ್ತಿ. ಆಕೆ ಬರೆಯುತ್ತಿದ್ದುದು ವೈದ್ಯಕೀಯದ ಮೇಲೆ. ವೈದ್ಯರು ಮಾತಾಡಬೇಕಾದ ಶೈಲಿಯಿಂದ ಹಿಡಿದು ನರ್ಸ್‌ಗಳ ವರ್ತನೆಯವರೆಗೆ ಬರೆಯುತ್ತಿದ್ದ ಬೆಟ್ಸಿ ಆಸ್ಪತ್ರೆಯ ಅಚಾತುರ್ಯಕ್ಕೆ ಬಲಿಯಾದಳು. ಇಂಥ ಅಚಾತುರ್ಯದಿಂದಾಗಿಯೇ ಅಮೆರಿಕಾದಲ್ಲಿ ಸಾಯುವವರ ವಾರ್ಷಿಕ ಸಂಖ್ಯೆ ಎಂಭತ್ತು ಸಾವಿರ!"

ಅಷ್ಟರಲ್ಲಿ ನನಗೆ ಸುಸ್ತಾಗಿತ್ತು, ಅವರಿಗೆ ನಮಸ್ಕಾರ ಹೇಳಿದೆ. ಮೌನವಾಗಿ ನಿಂತೆ. ಮತ್ತೆ ಏನು ಹೇಳಿದರೂ ಕೃತಕವಾಗುತ್ತಿತ್ತು, ಸುಮ್ಮನೆ ಬಂದೆ.

–ಏಪ್ರಿಲ್ 19, 1995

ಭ್ರಷ್ಟ ಉಸಿರಾಸುರ ವಿಜಯವು

ತಾಯಿ ಚಾಮುಂಡೇಶ್ವರಿ ಮಹಾತ್ಮೆ ತಿಳಿದಿರುವವರಿಗೆಲ್ಲ ರಕ್ತ ಬೀಜಾಸುರನ ಕತೆಯೂ ಗೊತ್ತಿರುತ್ತದೆ. ಒಂದು ಸಲ ಈ ರಾಕ್ಷಸ ಪರಮೇಶ್ವರನನ್ನು ಕುರಿತು ತಪಸ್ಸು ಮಾಡಿದ. ಈ ದೇವತೆಗಳೂ ಒಂದು ರೀತೀಲಿ ಅಧಿಕಾರಸ್ಥರಿದ್ದ ಹಾಗೆ. ತಮ್ಮನ್ನು ಕುರಿತು ತಪಸ್ಸು ಆಚರಿಸುವವರೆಲ್ಲರೂ ಅವರಿಗೆ ಆಪ್ಯಾಯಮಾನ. ಅವರು ಕೇಳಿದ್ದಕ್ಕೆಲ್ಲ 'ತಥಾಸ್ತು' ಅನ್ನುವುದು ಅವರ ಜಾಯಮಾನ. ಇಲ್ಲಿಯೂ ಹಾಗೆಯೇ ನಡೆಯಿತು. ಈಶ್ವರ ಪ್ರತ್ಯಕ್ಷ ಆದ. ಭಕ್ತನನ್ನು ಏನು ಬೇಕೆಂದು ಕೇಳಲಾಗಿ ಅವನು ತನ್ನ ದೇಹದಿಂದ ನೆಲಕ್ಕೆ ಬಿದ್ದ ಒಂದೊಂದು ತೊಟ್ಟು ರಕ್ತವೂ ತನ್ನಂತೆಯೇ ಪರಾಕ್ರಮಶಾಲಿಯಾದ ಒಬ್ಬ ರಾಕ್ಷಸ ಆಗುವಂತೆ ವರ ಬೇಡಿದ. ದೇವತೆಗಳ ಹುಟ್ಟುಗುಣದಂತೆ ಮುಂದಾಗುವ ಅನಾಹುತಗಳನ್ನು ಯೋಚಿಸದೆ 'ತಥಾಸ್ತು' ಎಂದ ಭಗವಂತ.

ಈ ರಕ್ತ ಬೀಜಾಸುರ ಇದ್ದನಲ್ಲ ಅವನು ಶುಂಭ-ನಿಶುಂಭ ಎಂಬ ರಾಕ್ಷಸ ಸಹೋದರರ ಸೋದರ ಅಳಿಯ. ಈ ಸೋದರ ಮಾವಂದಿರೂ ಬ್ರಹ್ಮ ದೇವರಿಂದ ತಮಗೆ ಅಯೋನಿಜೆಯಾದ ಕನ್ಯೆಯಿಂದಲ್ಲದೆ ಮತ್ತಾರಿಂದಲೂ ಸಾವು ಬರಬಾರದು ಎಂಬ ವರ ಪಡೆದಿದ್ದರು. ವರ ಪಡೆದ ನಂತರ ಅದನ್ನು ವ್ಯರ್ಥ ಮಾಡಲಿಲ್ಲ, ಲೋಕಕಂಟಕ ಕಾರ್ಯದಲ್ಲಿ ತಲ್ಲೀನರಾದರು. ಇವರ ಆಟಾಟೋಪ ಮಿತಿ ಮೀರಿದಾಗ ದೇವತೆಗಳು ಕಂಗಾಲಾದರು. ಆದಿಶಕ್ತಿಯನ್ನು ಹಾಡಿ ಹೊಗಳಿದರು. ಇವರ ಹೊಗಳಿಕೆಗೆ ಮರುಳಾದ ಅವಳ ದೇಹದಿಂದ ಕೌಶಿಕೆ ಎಂಬ ಸ್ತ್ರೀ ಹೊರಬಂದಳು. ಆ ಕನ್ಯೆ ಹೆಸರನ್ನು ಇಟ್ಟುಕೊಂಡೇ ಹೊರಬಂದಳೋ ಅಥವಾ ಜನ್ಮ ಪಡೆದ ನಂತರ ನಾಮಕರಣ ಮಾಡಲಾಯಿತೊ ಎಂಬುದರ ಬಗ್ಗೆ ಖಚಿತ ಮಾಹಿತಿ ಇಲ್ಲ, ಅದರಿಂದ ದಿವ್ಯ ಸೌಂದರ್ಯಭರಿತವಾದ ಆ ಬಾಲೆಯ ಲೀಲೆಗೇನೂ ಧಕ್ಕೆ ತಗುಲಲಿಲ್ಲ, ಆ ಸೌಂದರ್ಯ ರಾಣಿ ಹಿಮವತ್ ಪರ್ವತದ ತಪ್ಪಲಿಗೆ ಹೋಗಿ ತನ್ನ ಸಖಿಯರೊಂದಿಗೆ ವಿನೋದವಾಗಿದ್ದಳು. ಅಪೂರ್ವ ಸುಂದರಿಯ ಇರುವಿಕೆಯನ್ನು ಅರಿತ ಶುಂಭ-ನಿಶುಂಭ ಮಹಾಶಯರು ಆಕೆಯನ್ನು ವಿವಾಹವಾಗಬೇಕೆಂಬ ಬಯಕೆ ವ್ಯಕ್ತಪಡಿಸಿದರು. ಅವರೇನು ಇಬ್ಬರನ್ನೂ ಮದುವೆಯಾಗು ಎಂದು ಒತ್ತಾಯ ಮಾಡಲಿಲ್ಲ, ಯಾರನ್ನಾದರೂ ಒಬ್ಬರನ್ನು ವರಿಸು ಎಂಬ ನ್ಯಾಯಯುತವಾದ ಕೇಳಿಕೆಯನ್ನೇ ಮುಂದಿಟ್ಟರು. ಆದರೆ ಆ ಧಿಮಾಕಿನ ಕನ್ಯೆ ಅದಕ್ಕೆ ಒಪ್ಪಲಿಲ್ಲ, ಅವಳದೊಂದು ಪ್ರತಿಜ್ಞೆ ಇತ್ತಂತೆ. ಯಾರು ಅವಳನ್ನು ಯುದ್ಧದಲ್ಲಿ ಸೋಲಿಸುತ್ತಾರೋ ಅವರನ್ನು ಮಾತ್ರ ವರಿಸುತ್ತಾಳಂತೆ. ಇತರರನ್ನು ಕ್ಯಾರೆ ಅನ್ನಲ್ಲವಂತೆ. ಇದನ್ನು ತಿಳಿದು ಕೆಂಡಮಂಡಲ ಆದರು ಸೋದರರು. ಮದುವೆಗೆ ಮುಂಚೇನೆ ತಾಕತ್ತು ಪರೀಕ್ಷಿಸುವಷ್ಟು ದಾರ್ಷ್ಯವೆ ಈ ಯಃಕಶ್ಚಿತ್ ಹೆಣ್ಣಿಗೆ ಎಂದು ಅಪಾರ ಸೇನೆಯೊಂದಿಗೆ ಯುದ್ಧಕ್ಕೆ ಹೋದರು. ಹೋರಾಟದಲ್ಲಿ ಇಬ್ಬರೂ ಮಡಿದರು.

ಈ ರಾಕ್ಷಸದ್ವಯರ ಜೊತೆ ಯುದ್ಧ ಮಾಡಲು ರಕ್ತಬೀಜ ಸಾಥ್ ನೀಡಿದ್ದ, ತನ್ನ ಸೋದರ ಮಾವಂದಿರ ಸಾವು ಸೇಡಾಗಿ ಭುಗಿಲೆದ್ದಿತು. ವೀರಾವೇಶದಿಂದ ಹೋರಾಡಿದ. ಪರಮೇಶ್ವರನಿಂದ ಪಡೆದಿದ್ದ ವರ ಈಗ ಸಹಾಯಕ್ಕೆ ಬಂದಿತು. ಆತನ ದೇಹದಿಂದ ನೆಲಕ್ಕೆ ಬಿದ್ದ ಒಂದೊಂದು ಹನಿ ರಕ್ತವೂ ಪರಾಕ್ರಮಶಾಲಿಯಾದ ರಾಕ್ಷಸ ಸಾಗುತ್ತಿತ್ತು, ಆಗ ಕೌಶಿಕೆಯ ಚಾಮುಂಡೇಶ್ವರಿಗೆ ನಾಲಿಗೆಯನ್ನು ವಿಸ್ತರಿಸುವಂತೆ ಹೇಳಿದಳು. ಆ ದೇವಿ ಹಾಗೆಯೇ ಮಾಡಿದಳು. ಅದು ಯುದ್ಧ ಭೂಮಿಯನ್ನೆಲ್ಲ ಆಕ್ರಮಿಸಿತು. ರಕ್ತಬೀಜ ಆಕೆಯ ನಾಲಿಗೆಯ ಮೇಲೆ ನಿಂತು ಹೋರಾಟ ಮುಂದುವರೆಸ ಬೇಕಾಯಿತು. ಈ ಮೊದಲು ರಕ್ತಬೀಜ ನೆಲದ ಮೇಲೆ ನಿಂತು ಯುದ್ಧ ಮಾಡುತ್ತಿದ್ದ. ತಾಯಿ ಚಾಮುಂಡಿ ನಾಲಿಗೆ ವಿಸ್ತರಿಸಿದಾಗ ಆ ನಾಲಿಗೆ ಎಂಬ ನಾಲಿಗೆ ಆತನ ತಲೆಯ ಮೇಲೆ ಹಾಯ್ದು ಹೋಗುವ ಸಾಧ್ಯತೆ ಇದೆಯೇ ಪರಂತು ಅವನು ನಾಲಿಗೆಯ ಮೇಲಕ್ಕೆ ಹೇಗೆ ಬಂದ ಎನ್ನುವುದು ಶಾಲಾಬಾಲಕರ ಪ್ರಶ್ನೆ ಆಗಬಹುದೇ ವಿನಃ ದೈವೀ ಆರಾಧಕರದ್ದಲ್ಲ, ಯುದ್ಧದ ಬಿಡುವಿನ ವೇಳೆಯಲ್ಲಿ ನಾಲಿಗೆ ವಿಸ್ತರಿಸಿದ್ದರೂ ಇರಬಹುದು. ದೇವಿ ಮಹಾತ್ಮೆ ಎಂತಹದ್ದು ಎಂಬುದನ್ನು ಅರಿತವರಾರು. ಅಂತೂ ರಕ್ತಬೀಜ ಹೇಗೋ ದೇವಿಯ ನಾಲಿಗೆ ಮೇಲೆ ನಿಂತು ಯುದ್ಧ ಮಾಡುವಂತಾಯಿತು. ಅವನ ದೇಹದಿಂದ ಬಿದ್ದ ರಕ್ತಬಿಂದುಗಳನ್ನೆಲ್ಲ ಆಕೆಯ ನಾಲಿಗೆಯು ಹೀರಲಾಗಿ ಶಕ್ತಿ ಗುಂದಿದ. ಆ ನಿಶ್ಯಕ್ತ ರಾಕ್ಷಸನನ್ನು ಕೌಶಿಕೆ ಸಂಹಾರ ಮಾಡಿದಳು.

ರಕ್ತ ಬೀಜಾಸುರ ಸಂತತಿ ಅವನಿಗೇ ಕೊನೆಗೊಳ್ಳಲಿಲ್ಲ, ವಿವಿಧ ವೇಷಗಳಲ್ಲಿ ಅದು ಮುಂದುವರೆಯುತ್ತಲೇ ಬಂದಿತು. ಕಲಿಯುಗದಲ್ಲಿ ಭ್ರಷ್ಟ ಉಸಿರಾಸುರ ಎಂಬ



ಹೆಸರಿನಿಂದ ಪ್ರವರ್ಧಮಾನಕ್ಕೆ ಬಂದ. ಅವನು ಉಸಿರು ಆಡಿದ ಸ್ಥಳಗಳಲ್ಲೆಲ್ಲ ಅವನ ತದ್ರೂಪಿಗಳು ವಿಜೃಂಭಿಸಿದರು. ಯಾವ ದೇವರ ಕೃಪೆಗೆ ಪಾತ್ರನಾಗಿ ಈ ವರ ಪಡೆದನೋ ತಿಳಿದುಬಂದಿಲ್ಲ, ಅವನ ಸಂಹಾರಕ್ಕಾಗಿ ಹಲವು ಪ್ರಯತ್ನಗಳು ನಡೆದವು. ಆದರೆ ಯಾವುದೂ ಸಫಲ ಆಗಲಿಲ್ಲ, ಭ್ರಷ್ಟ ಉಸಿರಾಸುರನ ದರ್ಬಾರು ನಿರ್ಭಯದಿಂದ ನಡೆಯುತ್ತಿತ್ತು.

ಇಂತಹ ದೈವೀಕೃಪೆಯಿಂದ ನಿರಾತಂಕದಿಂದ ಇದ್ದ ಭ್ರಷ್ಟ ಉಸಿರಾಸುರನ ಆಡಳಿತಕ್ಕೂ ಧಕ್ಕೆ ಆಗುವಂತಹ ಘಟನೆಗಳ ಸುಳಿವು ಕಂಡು ಬರಲಾಗಿ ಆತ ದಿಗಿಲುಗೊಂಡ. ಸಕಾಲದಿಂದಲೂ ಶತ್ರುಗಳು ಆಗಿದ್ದವರು ದಂಗೆ ಎದ್ದಿದ್ದರೆ ಅವರನ್ನು ನಿಗ್ರಹಿಂಸುವ ಶಕ್ತಿ ಅವನಿಗಿತ್ತು, ಆದರೆ ತನ್ನ ಗುಪ್ತ ಆರಾಧಕರೂ, ಬಹಿರಂಗಸೇವೆಗೆ ಕಂಕಣಬದ್ಧರಾಗಿದ್ದವರೂ ಅವರೊಡನೆ ಕೈಜೋಡಿಸಿದಾಗ ಆತ ಭಯಗೊಂಡ. ತನ್ನ ಸಾಮ್ರಾಜ್ಯ ಎಲ್ಲಿ ಸತ್ಯಸಂಧರ ನಾಡಾಗುವುದೋ ಎಂದು ಆತಂಕಗೊಂಡ. ತನ್ನ ನಾಶವಾಗಿಯೇ ಬಿಡಬಹುದು ಎಂದು ಹೆದರಿ ಭಗವಂತನ ಮೊರೆಹೋದ. ಆ ದಯಾಮಯನು ಪ್ರತ್ಯಕ್ಷನಾಗಿ ಹೇಳಿದ್ದು ಏನೆಂದರೆ....

ಎಲೈ ಭಕ್ತಶ್ರೇಷ್ಠನೆ,

ಯಾವುದಕ್ಕೂ ಭಯಬೀಳಬೇಡ. ನಿನಗೆ ಸಾವಿಲ್ಲ. ಯಾಕೆಂದರೆ ಸತ್ಯಕ್ಕೆ ಅಸತ್ಯ ಒರೆಗಲ್ಲು. ಅಸತ್ಯವಿಲ್ಲದೆ ಸತ್ಯ ಪ್ರಜ್ವಲಿಸಲಾರದು. ಭ್ರಷ್ಟಾಚಾರವಿಲ್ಲದೆ ಶಿಷ್ಟಾಚಾರ ಬೆಳಕು ಕಾಣದು. ನನ್ನ ಅನೇಕ ಲೀಲೆಗಳಲ್ಲಿ ಭ್ರಷ್ಟಾಚಾರ ವಿರುದ್ಧ ಎದ್ದಿರುವ ಕೂಗೂ ಒಂದು ಎಂಬುದನ್ನು ಮನದಟ್ಟು ಮಾಡಿಕೊ.


ಭ್ರಷ್ಟಾಚಾರ ವಿರುದ್ಧ ಹೋರಾಟ ಚಳವಳಿಯಿಂದ ನೀನು ದಿಗಿಲು ಬಿದ್ದಿದ್ದೀಯೆ. ಅವರೆಲ್ಲರೂ ನಿನ್ನ ಆರಾಧಕರೇ ಎಂಬುದನ್ನು ಅರಿ. ಕೆಲವರು ಗುಪ್ತವಾಗಿ ಆರಾಧಿಸಿದರೆ ಹಲವರು ಬಹಿರಂಗವಾಗಿಯೇ ನಿನ್ನ ಪಾದಪೂಜೆ ಮಾಡುವವರು. ಸಾಮಾನ್ಯ ಜನರು ಸಿಡಿದೇಳುವರೆಂಬ ಆತಂಕ ಬೇಡ. ಅವರನ್ನು ಹದ್ದುಬಸ್ತಿನಲ್ಲಿಡಲು ಮಠಗಳ ವ್ಯವಸ್ಥೆ ಮಾಡಿದ್ದೇನೆ. ಸರ್ವಸಂಗಪರಿತ್ಯಾಗಿ ಎಂಬ ಭ್ರಮೆಯನ್ನು ಜನರಲ್ಲಿಬಿತ್ತುತ್ತಾ ಇಹಲೋಕದ ಎಲ್ಲ ಸುಖ ಸಂಪತ್ತುಗಳನ್ನೂ ಅನುಭವಿಸುವ ಅನುಕೂಲವನ್ನು ಕಲ್ಪಿಸಿಕೊಟ್ಟು ಕಾವಿ ತೊಡಿಸಿ, ಅವುಗಳಲ್ಲಿ ಅವರನ್ನು ಮಠಾಧಿಪತಿಗಳೆಂದು ಕೂರಿಸಿದ್ದೇನೆ-ಸಮ್ಮೇಳನಗಳ ಹೆಸರಿನಲ್ಲಿ ಸದಾ ನಿನ್ನ ಧ್ಯಾನದಲ್ಲೇ ನಿರತರಾಗಿರುವವರನ್ನು ಹಾಡಿ ಹೊಗಳಿ ನಿನ್ನ ಆರಾಧಕರ ಕೀರ್ತಿಪತಾಕೆ ಹಾರಿಸುವ ಹಾಗೆ ಮಾಡಿದ್ದೇನೆ. ನಿರಾಂತಕವಾಗಿ ನಿನ್ನ ಆರಾಧನೆ ಮುಂದುವರೆಸುವಂತೆ ಅವರಿಗೆ ಬಹಿರಂಗ ಪ್ರೇರಣೆ ನೀಡಲಾಗುತ್ತದೆ. ಇದಕ್ಕೆ ಪೂರಕವಾಗಿ ಸಮ್ಮೇಳನ ನಿರ್ಣಯವನ್ನೇ ಮಂಡಿಸುತ್ತದೆ. ನಿನ್ನ ಆರಾಧಕ ಮಠಾಧಿಪತಿಗಳ ಆದೇಶದಂತೆ ಆಡಳಿತ ನಡೆಸುತ್ತೇನೆ ಎಂದು ಬಹಿರಂಗ ಆಶ್ವಾಸನೆ ನೀಡು. ಇಂತಹ ಅದ್ಭುತ ಜಾಲವನ್ನೇ ಎಣೆದಿರುವಾಗ ನಿನಗೆ ಯಾವುದೇ ಭಯಾತಂಕ ಬೇಡ.

ಎಲೈ ಭಯಭೀತನೆ,

ಕಾನೂನಿನ ಮೂಲಕ ಮರಣಶಾಸನ ಬರೆಯುವ ಪ್ರಯತ್ನ ನಡೆಯುತ್ತಿದೆ ಎಂಬ ಅಳುಕು ನಿನಗೆ. ಕಾನೂನನ್ನು ರಚಿಸುವವರೇ ನಿನ್ನ ಪ್ರಮುಖ ಆರಾಧಕರು ಎಂಬುದನ್ನು ಮರೆಯಬೇಡ. ನಿನ್ನಂತೆ ಕಾನೂನು ರೀತಿಯನ್ನೇ ಪುರಸ್ಕರಿಸಲು ಪ್ರಯತ್ನಿಸುತ್ತಿದ್ದರೆ

ಕೇಂದ್ರ ಸರ್ಕಾರಕ್ಕೆ ಆರ್ಥಿಕ ಸಲಹೆಗಳನ್ನು ನೀಡಲು ಪ್ರಖ್ಯಾತ ಅರ್ಥಪಂಡಿತರನ್ನು ನೇಮಿಸುವ ವ್ಯವಸ್ಥೆ ಇದೆ. ಈ ಆರ್ಥಿಕ ನಿಪುಣರಲ್ಲಿ ನಿಪುಣರಾದ ಓರ್ವ ಮಹಾಶಯರು ಅಭೂತಪೂರ್ವ ಸಲಹೆಯಿಂದಾದರೂ ಆತಂಕ ನೀಗಿಕೊಳ್ಳುವಂತಾಗಲಿ ಎಂದು ಆಶಿಸಿ ಅದನ್ನು ವಿಷದೀಕರಿಸುತ್ತೇನೆ. ಕೇಳುವಂತವನಾಗು. ಎಲೈ ಕಾನೂನಿಗೆ ಬೆದರಿರುವವನೆ,

ಲಂಚದಲ್ಲಿ ಎರಡು ವಿಧ ಎಂಬ ಮಹತ್ವದ ಸಂಗತಿಯನ್ನು ಅವರು ಹೊರಗಿಡವಿದ್ದಾರೆ. ಒಂದು 'ಕಿರುಕುಳ ಲಂಚ.' ಇನ್ನೊಂದು 'ಅಕಿರುಕುಳ ಲಂಚ.' ಕಿರುಕುಳ ಲಂಚದ ವಿವರಣೆಯನ್ನು ಆ ಮಹಾಶಯರೇ ನೀಡಿದ್ದಾರೆ. ಕಾನೂನು ರೀತ್ಯ ಅರ್ಹಫಲಾನುಭವಿ ಆದವರಿಂದಲೂ ಪಡೆಯುವ ಲಂಚ ಈ ವರ್ಗಕ್ಕೆ ಸೇರುತ್ತದೆ. ವಿಸ್ತರಿಸಿ ಹೇಳಬೇಕೆಂದರೆ ಯಾವುದೋ ವ್ಯಕ್ತಿಗೆ ಪಡಿತರಚೀಟಿ ಬೇಕು. ಅದನ್ನು ಪಡೆಯುವ ಎಲ್ಲ ಅರ್ಹತೆಯೂ ಆತನಿಗಿದೆ. ಆದರೂ ಲಂಚ ನೀಡದೆ ಅದು ಸಿಗದು. ಇದು



ಎಚ್.ಎಲ್. ಕೇಶವಮೂರ್ತಿ

ಅಣಕ

ಕಿರುಕುಳ ಲಂಚ. ಪ್ರಸ್ತುತ ಕಾನೂನಿನಲ್ಲಿ ಲಂಚ ಪಡೆಯುವುದು, ಕೊಡುವುದು ಕಾನೂನಿಗೆ ವಿರುದ್ಧ. ಇಬ್ಬರೂ ಶಿಕ್ಷೆಗೆ ಅರ್ಹರು. ಈ ಮಹಾಶಯರ ಸಲಹೆಯಂತೆ ಲಂಚ ತೆಗೆದುಕೊಳ್ಳುವವನಿಗೆ ಮಾತ್ರ ಶಿಕ್ಷೆ ವಿಧಿಸಬೇಕು. ಕೊಡುವವನಿಗೆ ಯಾವುದೇ ಶಿಕ್ಷೆ ಇರಬಾರದು. ಯಾಕೆಂದರೆ ಲಂಚ ಎನ್ನುವುದು ಇಬ್ಬರ ಒಡಂಬಡಿಕೆಯಿಂದ ನಡೆಯುವ ವ್ಯವಹಾರ. ಇದನ್ನು ಮುರಿದರೆ ಲಂಚ ನೀಡಿದವನು ತೆಗೆದುಕೊಂಡವನನ್ನು ಕಾನೂನಿನ ಖೆಡ್ಡಾಕ್ಕೆ ಕೆಡುವುವುದು ಖಂಡಿತ. ಭ್ರಷ್ಟಾಚಾರ ಕಾನೂನು ರೀತ್ಯ ಅಪರಾಧವ ಎಂದು ನಿರೂಪಿಸಲು ಮಾಡಲು ಉದ್ದೇಶಿಸಿರುವ ವ್ಯವ ಇದು ಎಂಬುದನ್ನು ನೀನು ಅರಿತುಕೋ. ಯಾಕೆಂದರೆ ನ್ಯಾಯಾಲಯಕ್ಕೆ ಹೋದರೆ ಸಾಕ್ಷಿ ಪುರಾವೆಗಳನ್ನು ಒದಗಿಸಬೇಕು. ಯಾವ ಬಡವನೂ ಈ ಸಾಹಸಕ್ಕೆ ಇಳಿಯಲಾರ.

ಎಲೈ ಭಯಗ್ರಸ್ತನೆ,

ಲೋಕಪಾಲ ಮಸೂದೆ ಕುರಿತ ನಿನ್ನ ಚಿಂತೆಗೆ ಯಾವುದೇ ಕಾರಣ ಇಲ್ಲ, ನಿನ್ನ ಸಾವನ್ನೇ ಬಯಸುವ ಕೆಲವರಿದ್ದಾರೆ ಅವರ ಮನಸ್ಸು ತೃಪ್ತಿಪಡಿಸಲು 'ಲೋಕಪಾಲ ಮಸೂದೆ' ಭ್ರಮೆಯನ್ನು ಒಡ್ಡಲಾಗಿದೆ. ಯಾವ ಕಾನೂನು ಬಂದರೂ ನೀನು ಅಂಜಬೇಕಿಲ್ಲ, ಯಾಕೆಂದರೆ ಅವುಗಳನ್ನು ಸಮರ್ಥವಾಗಿ ಜಾರಿಗೊಳಿಸುವ ಮನಸ್ಸುಗಳೇ ಇಲ್ಲ! ನೀನು ಚಿರಂಜೀವಿ ನಿನಗೆ ಸಾವಿಲ್ಲ.

ಭಗವಂತನ ಆಶ್ವಾಸನೆಯಿಂದ ಸುಪ್ರೀತನಾದ ಭ್ರಷ್ಟ ಉಸಿರಾಸುರ ಆನಂದತುಂದಿಲನಾಗಿ 'ಪ್ರಭುವೇ ನಿನ್ನ ಕೃಪಾಶೀರ್ವಾದದಿಂದ ಕೃತಾರ್ಥನಾದೆ' ಎಂದು ಹೇಳುತ್ತ ಭಗವಂತನ ಪಾದಗಳಿಗೆ ಶರಣಾದಾಗ

'ಭ್ರಷ್ಟಾಚಾರ ತೊಲಗಲಿ'

'ಭ್ರಷ್ಟಾಚಾರ ಓಡ್ದೋಡಿಸಿ'

ಎಂಬ ಘೋಷಣೆಗಳು ಅವರಿಬ್ಬರ ಕಿವಿಗಳನ್ನು ತುಂಬಲಾಗಿ, ಒಬ್ಬರನ್ನೊಬ್ಬರು ನೋಡುತ್ತಾ ಮಂದಹಾಸ ಬೀರಿದರು!


ಸೊಗಸಾಗಿದ್ದ 'ಮಂಗನ ಬ್ಯಾಟೆ'

ಕಲ್ಕುಳಿ ವಿಠಲ ಹೆಗ್ಡೆ ಅವರ 'ಮಂಗನ ಬ್ಯಾಟೆ' ಲೇಖನಮಾಲೆ ಒಂದು ಮಹತ್ವದ ಬರಹ. ಪರಿಸರದ ಆಳವಾದ ಪರಿಚಯ, ಜನಜೀವನದ ಜೊತೆ ಆಪ್ತವಾದ ಮಿಡಿತ, ಸರಕಾರ, ಅದು ಕಾಲಕಾಲಕ್ಕೆ ತಂದ ಕಾಯಿದೆ ಹಾಗೂ ಅಧಿಕಾರಶಾಹಿಗಳ ತಿಕ್ಕಲುತನಗಳ ಅರಿವು ಇದ್ದವರಿಂದ ಮಾತ್ರ ಸಾಧ್ಯವಾಗುವ ಬರಹವಿದು. ಮಂಗಗಳಿಂದ ಉಂಟಾಗುವ ಉಪದ್ರಗಳ ಬಗ್ಗೆ ಮಾತಾಡುತ್ತ, ಹಿಂದೆ ಮಂಗಗಳನ್ನು ಬೇಟೆಯಾಡಿ ನಿಯಂತ್ರಿಸುತ್ತಿದ್ದ ಕ್ರಮದತ್ತ ಹೊರಳಿ, ಮಂಗಗಳಿಗೂ ಹುಲಿಗಳಿಗೂ ಇರುವ ಬದ್ಧ ವೈರತ್ವದತ್ತ ಮುಖಮಾಡಿದ ಲೇಖನಮಾಲೆ ತನ್ನ ಒಡಲಲ್ಲಿ ತುಂಬಿಕೊಂಡ ಸಂಗತಿಗಳು ಮತ್ತು ಅವುಗಳ ಸೂಕ್ಷ್ಮಾತಿಸೂಕ್ಷ್ಮ ವಿವರಗಳಿಂದ ಮಲೆನಾಡಿನ ಸಾಂಸ್ಕೃತಿಕ ದಾಖಲೆಯಾಗಿ ಉಳಿದುಬಿಡುತ್ತದೆ. ಹೆಗ್ಡೆಯವರ ವಿನೋದ, ಕಟಕಿಗಳೂ ಸಾಕಷ್ಟು ಹರಿತವಾಗಿದ್ದು, ಇದನ್ನು ಓದಿ ಕೆಲವರು ಮೈಮುಟ್ಟಿ ನೋಡಿಕೊಳ್ಳುವಂತೆಯೂ, ಹಲವರು ಮುಂದಾ ದರೂ ಕಣ್ತೆರೆದು ತಮ್ಮ ಸುತ್ತಲಿನ ವಿದ್ಯಮಾನಗಳನ್ನು ಗಮನಿಸಬೇಕೆಂದು ನಿರ್ಧರಿಸುವಂತೆಯೂ ಪ್ರೇರೇಪಿಸುತ್ತವೆ. ಇದರಲ್ಲಿ ಚಿತ್ರಿಸಿದ ಪಾತ್ರಗಳು ಮತ್ತು ಸನ್ನಿವೇಶಗಳು ಒಂದಿಷ್ಟೂ ಕೃತಕತೆಯ ಹೊದಿಕೆಯಿಂದ ಕೂಡಿರದೆ ಅತ್ಯಂತ ಸಹಜವಾಗಿ, ನವಿರಾಗಿ ಚಿತ್ರಿತವಾಗಿದ್ದು ಓದುಗರ ಮನೋಭಿತ್ತಿಯಲ್ಲಿ ಅಚ್ಚಳಿಯದೆ ಉಳಿಯುತ್ತವೆ. ಅನೇಕ ಘಟನೆಗಳು ಇನ್ನಿಷ್ಟು ವಿಸ್ತಾರವನ್ನು ಹೊಂದಿದ್ದರೂ ಬರಹ ತಡೆದುಕೊಳ್ಳುತ್ತಿತ್ತು ಮತ್ತು ಚೆನ್ನಾಗಿರುತ್ತಿತ್ತು ಎನಿಸುತ್ತದೆ.

ವಿಠಲ ಹೆಗ್ಡೆ ಅವರ ಬರಹವನ್ನು ಓದುತ್ತಿದ್ದಂತೆ ಸಹಜವಾಗಿ ಯಾರಿಗೇ ಆಗಲಿ ಪೂರ್ಣಚಂದ್ರ ತೇಜಸ್ವಿ ಅವರ ಬರಹಗಳು ನೆನಪಿಗೆ ಬರುತ್ತವೆ. ಆದರೆ ಈ ಇಬ್ಬರ ಬರಹದ ಮಾದರಿಗಳು ಮತ್ತು ಒಟ್ಟಂದದಲ್ಲಿ ಅವು ನೀಡುವ ತಾತ್ಪರ್ಯದ ವಿನ್ಯಾಸಗಳಲ್ಲಿ ವ್ಯತ್ಯಾಸ ಖಂಡಿತಕ್ಕೂ ಕಾಣಸಿಗುತ್ತದೆ. ವಿಠಲ ಹೆಗ್ಡೆಯವರು ತಮ್ಮ ಬರವಣಿಗೆಯನ್ನು ಮುಂದುವರಿಸಬೇಕು ಮತ್ತು ಈ ಲೇಖನಮಾಲೆ ಸೂಕ್ತ ತಿದ್ದುಪಡಿ ಮತ್ತು ವಿಸ್ತರಣೆಗಳ ಮೂಲಕ ಪುಸ್ತಕ ರೂಪದಲ್ಲಿ ಓದುಗರಿಗೆ ಸಿಗುವಂತಾಗಬೇಕು ಎಂದು ಆಶಿಸುವೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಬರಹಗಳು ಹೆಗ್ಡೆಯವರಿಂದ ಬರುವಂತಾಗಲಿ. ಇಂತಹ ಅನನ್ಯ ಮತ್ತು ಮಹತ್ವದ ಲೇಖನಮಾಲೆಯನ್ನು ಓದುಗರಿಗೆ ಮುಟ್ಟಿಸಿದ ಲಂಕೇಶ್ ತಂಡಕ್ಕೆ ಅಭಿನಂದನೆಗಳು.

- ಡಾ.ಸಬಿಹಾ ಭೂಮಿಗೌಡ, ಮಂಗಳಗಂಗೋತ್ರಿ

ಕಲ್ಕುಳಿ ವಿಠಲ ಹೆಗ್ಡೆಯವರು 14 ವಾರಗಳ ಕಾಲ ನಡೆಸಿದ 'ಮಂಗನ ಬ್ಯಾಟೆ' ಸಖತ್ತಾಗಿತ್ತು, ಮುಖ್ಯವಾಗಿ ಪರಿಸರ ನಾಶ, ಮಾನವನ ದುರಾಸೆಗಳ ಫಲವಾಗಿ ಕಾಡುಪ್ರಾಣಿಗಳು ಅನಿವಾರ್ಯವಾಗಿ ನಾಡಿಗೆ ನುಗ್ಗುತ್ತಿವೆ; ಆನೆ-ಚಿರತೆಯಂತಹ ಪ್ರಾಣಿಗಳು ಬಲಾಢ್ಯ-ಕ್ರೂರ ಪ್ರಾಣಿಗಳೆಂದು ಕರೆಸಿಕೊಂಡರೂ ಸ್ವಭಾವತಃ ಮಾನವನಿಗೆ ಅಂಜುತ್ತವೆ; ಆದರೆ ಹೊಟ್ಟೆಪಾಡಿನ ಅನಿವಾರ್ಯತೆಗೆ ಕಟ್ಟುಬಿದ್ದು ನಾಡಿನಲ್ಲಿ ಅವುಗಳು ಕಾಣಿಸಿಕೊಳ್ಳುವುದುಂಟು. ಇವು ಬಲಾಢ್ಯ ಪ್ರಾಣಿಗಳೇ ವಿನಃ ಮಂಗಗಳಷ್ಟು ಚಾಲಾಕಿಗಳಲ್ಲ, ಇವುಗಳು ನಾಡಿಗೆ ನುಗ್ಗಿ ಗಲಿಬಿಲಿಗೊಂಡರೆ ಮಂಗಗಳು ತಮ್ಮ ಹೊಸ ಪರಿಸರವನ್ನು ಕೂಲಂಕಷವಾಗಿ ಅಭ್ಯಸಿಸಿ ಅಲ್ಲಿನವರನ್ನೇ ಪಳಗಿಸಿಕೊಂಡು ಬದುಕಬಲ್ಲವು. ಇಂತಹ ಚಾಣಾಕ್ಷ ಪ್ರಾಣಿಗಳ ಬೇಟೆಯ ಕಥನ ಜಿಮ್ ಕಾರ್ಬೆಟ್‌ನ ಕತೆಗಿಂತ ಕಡಿಮೆಯೇನಲ್ಲ.



ಲೇಖನ ಸರಣಿಯಲ್ಲಿ ಹೆಗ್ಡೆಯವರು ಸಾಂಧರ್ಭಿಕವಾಗಿ ಅಲ್ಲಲ್ಲಿ ಕೆಲ ವಿಶೇಷ ಮಾಹಿತಿಗಳನ್ನು ಅನವಶ್ಯಕವೆನ್ನಿಸದ ರೀತಿಯಲ್ಲಿ ಸೇರಿಸುತ್ತಾ ಹೋಗುತ್ತಾರೆ. ಆ ರೀತಿ ಮಂ.ಬೆ. 13 ರಲ್ಲಿ ಪ್ರಸ್ತಾಪಿಸಲ್ಪಟ್ಟ ಅಠ್ಯಮುಂಡುಗವನ್ನು ಹೋಲುವ ಗಿಡ ಪುತ್ತೂರಿನ ಖ್ಯಾತ ಉರಗ ತಜ್ಞ ರವೀಂದ್ರ ಐತಾಳರ ಸಂಗ್ರಹದಲ್ಲಿದೆ. ಸ್ವತಃ ವೈದ್ಯರಾಗಿರುವ ಐತಾಳರು ವಿಶೇಷವಾದಂತಹ ಸಸ್ಯಗಳ ಸಂಗ್ರಹಕಾರರೂ ಹೌದು. ಇವರ ಸಸ್ಯ ಸಂಗ್ರಹವನ್ನು ನೋಡಬಂದ ಮೆಡಿಕಲ್ ವಿದ್ಯಾರ್ಥಿಯೊಬ್ಬ ಈ ಗಿಡದ ಬಗ್ಗೆ ಕೇಳಿ ಕುತೂಹಲದಿಂದ ಅದನ್ನು ಮುಟ್ಟಿ ಜ್ವರ ಬರಿಸಿಕೊಂಡ ಕತೆಯನ್ನು ಐತಾಳರು ಹೇಳುವುದುಂಟು. ಸಾವಾಸ ಬೇಡವೆಂದು ಜಾಗದ ಒಂದು ಮೂಲೆಯಲ್ಲಿ ನೆಡಲ್ಪಟ್ಟ ಈ ಗಿಡದ ಹೆಸರು 'ಆನೆಚ್ಚಡಿ' ಎಂದು. ಕುತೂಹಲ ಇದ್ದವರು ಪುತ್ತೂರಿನಲ್ಲಿದನ್ನ ನೋಡಿ "ಅನುಭವಿಸ"ಬಹುದು.

ಅದೇ ರೀತಿ ಮಂ.ಬೇ. 12 ರಲ್ಲಿ ಬರುವ ನರಸಿಂಹಭಟ್ಟರ ಹೆಂಡತಿ ಹಾಗೂ ನಾಗರಹಾವಿನ ಪ್ರಕರಣವನ್ನು ಓದಿದಾಗ ಬಹಳ ಹಿಂದೆ (20-25 ವರ್ಷ) ಕಸ್ತೂರಿಯಲ್ಲಿ ಓದಿದ (ಬಹುಶಃ ಗೌರೀಶ ಕಾಯ್ಕಿಣಿಯವರ)" ಇಂದು ನಾಗನಬಾರಿ" (ಇವತ್ತು ನಾಗನ ಸರದಿ) ಎಂಬ ಲೇಖನ ನೆನಪಾಯ್ತು. ಐವರು ಗಂಡಂದಿರ ಹೆಂಡತಿ ದ್ರೌಪದಿಯನ್ನು ದುರ್ಯೋಧನ ಸಿಕ್ಕಿದಾಗ "ಇಂದು ಯಾರ ಬಾರಿ?" ಎಂದು ಕೀಟಲೆ ಮಾಡುತ್ತಿದ್ದನಂತೆ. ಇದರಿಂದ ಬೇಸತ್ತಿದ್ದ ಆಕೆಗೆ ಕೃಷ್ಣ ಪ್ರತಿಯಾಗಿ "ಇಂದು ನಾಗನ ಬಾರಿ" ಎಂದುತ್ತರಿಸಲು ಹೇಳಿ ಸಮಸ್ಯೆಯನ್ನು ನಿವಾರಿಸಿದ್ದನಂತೆ.

ವಿಷಯಯೇನೆಂದರೆ ದುರ್ಯೋಧನನ ರಾಣಿ ಭಾನುಮತಿಗೆ ನಾಗವೊಂದು ರಾತ್ರಿ ತೊಂದರೆ ಕೊಡುತ್ತಿತ್ತಂತೆ. ನರಸಿಂಹ ಭಟ್ಟರಂತೆ ದುರ್ಯೋಧನನಿಗೂ ಇದೊಂದು ಸಮಸ್ಯೆಯೇ ಆಗಿತ್ತು, ವಿಷಯ ತಿಳಿದ ಕರ್ಣ ಮುಂದೊಂದು ದಿನ ಭಾನುಮತಿಯೊಂದಿಗೆ ರಾತ್ರಿ ಕಳೆದು ನಾಗನನ್ನು ಸಂಹರಿಸುತ್ತಾನೆ. ಇಲ್ಲಿ ಕರ್ಣ-ದುರ್ಯೋಧನರ ಸ್ನೇಹ ಯಾವ ಮಟ್ಟದ್ದು ಎಂಬುದನ್ನು ಸಹ ಈ ಕತೆ ತೋರಿಸುತ್ತದೆ. ಅಂದರೆ ಸಿದ್ಧ ಹೇಳಿದ ನರಸಿಂಹಭಟ್ಟರ ಹೆಂಡತಿಗೆ ಸಂಬಂಧಿಸಿದ ನಾಗನನ್ನಾಕರ್ಷಿಸುವ ಘೌಲು (ವಾಸನೆ) ಸಮಸ್ಯೆ ಭಾನುಮತಿಗೂ ಇದೆ ಯೆಂದಾಯಿತು. ತುಂಬ ಸುಂದರವಾಗಿ ಜನಜೀವನ, ಪರಿಸರ ಇತ್ಯಾದಿಗಳನ್ನು ವಿಶ್ಲೇಷಿಸಿ ಬರೆದ ಹೆಗ್ಡೆಯವರ 'ಮಂಗನ ಬೇಟೆ' ಪುಸ್ತಕ ರೂಪದಲ್ಲೂ ಹೊರಬರಲಿ. ಅಲ್ಲದೇ ಅವರಿಂದ ಇನ್ನಷ್ಟು ಬರವಣಿಗೆಗಳು ಲಂಕೇಶ್ ಮೂಲಕ ಬೆಳಕು ಕಾಣುವಂತಾಗಲಿ.

-ರವಿ ಪುತ್ತೂರ, ದಕ್ಷಿಣ ಕನ್ನಡ

ಉಪ್ಪಿಗೆ ಶ್ವಾನ ಶೋಕ

ಮೊನ್ನೆ ಅರಮನೆ ಮೈದಾನದಲ್ಲಿ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ...ರ್‌ಸ್ಟಾರ್ ಉಪೇಂದ್ರ ನಟಿಸಿರುವ 'ಸೂಪರ್' ಚಿತ್ರದ ಶತದಿನೋತ್ಸವ ...ರಂಭವನ್ನು ತುಂಬಾ ಅದ್ದೂರಿಯಾಗಿ ಆಚರಿಸಿದರು. ಆದರೆ ಇಂತಹ ...ಷದ ಸಂದರ್ಭದಲ್ಲೂ ಉಪ್ಪಿ ಮನಸ್ಸು ಮಾತ್ರ ಖಿನ್ನವಾಗಿತ್ತು, ಇದಕ್ಕೆ ... ಅವರ ಮುದ್ದಿನ ನಾಯಿಮರಿ ಕೆಲವೇ ದಿನಗಳ ಹಿಂದೆ ನಿಧನ ...ದ್ದು!

ಈ ನಾಯಮರಿಯ ಹೆಸರು ಮಿಸ್ಸಿ. ಇದರ ಹುಟ್ಟು-ಬೆಳವಣಿಗೆ ಮತ್ತು ...ನಗಳು ಒಂದು ಸಿನಿಮಾ ಕತೆಯಷ್ಟೇ ಕುತೂಹಲಕಾರಿಯಾಗಿದೆ. ಅದಕ್ಕಾಗಿ ...ಷ್ಟಣಿ.

ಉಪ್ಪಿ ಮನೆಯಲ್ಲಿ ಒಂದು ಅಲೇಶಿಯೇಷನ್ ನಾಯಿ ಮೊದಲೇ ಇತ್ತು. ... ಹೆಸರು ಘ್ಲೋಟೊ. ಅದು ಮನೆಯ ಯಜಮಾನ ಉಪ್ಪಿ, ಯಜಮಾನಿ ...ಂಕ ಸಮೇತ ಬಹುತೇಕ ಎಲ್ಲರ ಮನಸ್ಸನ್ನೂ ಗೆದ್ದಿತ್ತು. ಅದರ ಜೊತೆಗೆ ...ರೀಡ್ ಮಾಡಲು ಮತ್ತೊಂದು ನಾಯಿಯನ್ನು ಗೆಳೆಯರೊಬ್ಬರು ಉಪ್ಪಿ ... ತಂದುಬಿಟ್ಟರು. ಇವೆರಡು ನಾಯಿಗಳ ನಡುವೆ ಪ್ರೇಮಾಂಕುರವಾಯಿತು. ... ಐದು ಮರಿಗಳಿಗೆ ಜನ್ಮ ನೀಡಿತ್ತು, ಆ ಐದು ಮರಿಗಳಲ್ಲಿ ಒಂದು ...ನ್ನು ಉಪ್ಪಿಗೆ ಕೊಟ್ಟು ಉಳಿದ ನಾಲ್ಕು ಮುದ್ದಿನ ಮರಿಗಳೊಂದಿಗೆ ... ಗೆಳೆಯರು ವಾಪಸಾದರು.

ದಿನಕಳೆದಂತೆ ಉಪ್ಪಿ ಕುಟುಂಬದ ಹೊಸ ಸದಸ್ಯ ಈ ನಾಯಿಮರಿ ...ಮಕ್ಕಳಿಗೆಲ್ಲ ಇಷ್ಟವಾಗಿತ್ತು. 'ಮಿಸ್ಸಿ'ಯನ್ನು ಕೊಂಡಾಡಿ ಮುದ್ದಾಡುವುದು ...ಕ್ಕಳ ದಿನಚರಿಯಾಗಿತ್ತು.

...ಂತಹ ಸಂದರ್ಭದಲ್ಲೇ ಒಂದು ದಿನ ಈ ನಾಯಿಮರಿ ಕಾಣೆಯಾಯಿತು. ...ಮವರಿಗೆಲ್ಲ ಬೇಸರವೋ ಬೇಸರ! ಮಕ್ಕಳಿಗಂತೂ ಆ ನಾಯಿಮರಿ ಕಾಣೆಯಾದ ನಂತರ ಊಟ-ತಿಂಡಿ ಬಗ್ಗೆನೂ ಆಸಕ್ತಿಯಿರಲಿಲ್ಲವಂತೆ. ಕೊನೆಗೆ ಬೇರೆ ದಾರಿ ಕಾಣದೆ ಉಪೇಂದ್ರ ತನ್ನ ನಾಯಿಮರಿ ಕಾಣೆಯಾದ ಬಗ್ಗೆ ಪೊಲೀಸ್ ಸ್ಟೇಷನ್‌ನಲ್ಲಿ ದೂರು ಕೊಟ್ಟರು. ಆದರೂ ನಾಯಿಮರಿಯ ಸುಳಿವು ಸಿಗಲಿಲ್ಲ. ಆಗ ತನ್ನ ಮನೆಯ ಸುತ್ತಮುತ್ತ ಮತ್ತು ಕೆಲವು ಆಯಕಟ್ಟಿನ ಸ್ಥಳಗಳಲ್ಲಿ ನಾಯಿಮರಿಯನ್ನು ಹುಡುಕಿಕೊಟ್ಟವರಿಗೆ ಐದು ಸಾವಿರ ರೂ. ಬಹುಮಾನ ಕೊಡುತ್ತೇನೆಂಬ ಭಿತ್ತಿಪತ್ರಗಳನ್ನು ಉಪ್ಪಿ ಅಂಟಿಸಿದರು. ಆ ಭಿತ್ತಿಪತ್ರಗಳಲ್ಲಿ ನಾಯಿಮರಿಯ ಫೋಟೋ, ಉಪೇಂದ್ರರ ಫೋಟೋ ಮತ್ತು ಕೆಲವು ಫೋನ್ ನಂಬರ್‌ಗಳು ಇದ್ದವು.



ಈ ಜಾಹೀರಾತನ್ನು ನೋಡಿದ ಉಪೇಂದ್ರ ಅಭಿಮಾನಿಗಳು ತಮ್ಮ ನೆಚ್ಚಿನ ನಟ ಉಪ್ಪಿ ಜೊತೆ ಮಾತನಾಡಲು ಇದೇ ಸದವಕಾಶ ಎಂದು ಒಂದೇ ಸಮನೆ ಫೋನ್ ಮಾಡಲು ಆರಂಭಿಸಿದರು. ಆದರೆ ಫೋನ್ ಮಾಡಿದವರ್‍ಯಾರೂ ನಾಯಿ ಬಗ್ಗೆ ಮಾತಾಡಲೇ ಇಲ್ಲ. ಇದೆಲ್ಲದರಿಂದ ರೋಸಿಹೋದ ಉಪ್ಪಿ ಅಸಹಾಯಕರಾಗಿ ಕೈಚೆಲ್ಲಿ ಕುಳಿತಾಗ ಒಂದು ದಿನ ಮನೆಯ ಕೆಳಗಿನ ತೋಟದಿಂದ ದುರ್ವಾಸನೆ ಬರಲಾರಂಭಿಸಿತು. ಹೋಗಿ ನೋಡಿದರೆ ಅದು ಅವರೆಲ್ಲರ ಮುದ್ದಿನ ನಾಯಿ 'ಮಿಸ್ಸಿ'ಯ ಶವವಾಗಿತ್ತು.

ಕೊನೆಗೆ ಇದೆಲ್ಲ ನಡೆದದ್ದು ಹೇಗೆ ಎಂದು ಅವಲೋಕಿಸಿದಾಗ ನಿಜ ವಿಷಯ ತಿಳಿಯಿತು.

ಅದೇನೆಂದರೆ ಉಪ್ಪಿ ಮನೆಯಲ್ಲಿ ಖಾಸಗಿ ಸಮಾರಂಭವೊಂದಿತ್ತು. ಅನೇಕ ಬಂಧುಬಳಗದವರು ಮನೆಗೆ ಬಂದಿದ್ದರು. ಅನೇಕ ಹೊಸ ಮುಖಗಳನ್ನು ನೋಡಿದ ನಾಯಿಮರಿ ಹೆದರಿ ಉಪ್ಪಿಯ ಮನೆ ಮಹಡಿ ಮೇಲೇರಿ ಕುಳಿತುಕೊಂಡಿತ್ತು. ಆದರೆ ಮತ್ತೆ ವಾಪಸ್ ಬರಲು ಅದಕ್ಕೆ ದಾರಿ ಗೊತ್ತಾಗಿಲ್ಲ. ಕೊನೆಗೆ ಮಹಡಿ ಮೇಲಿಂದ ಜಾರಿಯೋ, ಹಾರಿಯೋ ಪ್ರಾಣ ತ್ಯಾಗ ಮಾಡಿತ್ತು.

ಕನ್ನಡದ ಅನೇಕ ನಾಯಕನಾಯಕಿಯರು ತಮ್ಮ ನಾಯಿ ಬಗ್ಗೆ ಅಪಾರ ಪ್ರೀತಿ ಹೊಂದಿದ್ದಾರೆ. ರಮ್ಯಾಳ ಅತ್ಯಂತ ಪ್ರೀತಿಯ 'ಬ್ರಾಂಡಿ' ಯಾವಾಗಲೂ ಪಂಚತಾರ ಹೋಟೆಲ್ ವೆಸ್ಟೆಂಡ್‌ನಲ್ಲೇ ಇರುತ್ತೆ. ಆಕೆಯ ಬೆಡ್‌ರೂಮ್‌ನಲ್ಲೇ ಆ ನಾಯಿ ಮಲಗುತ್ತದೆ ಎಂಬುದು ಮತ್ತೊಂದು ವಿಶೇಷ. ಆಕೆ ವಿದೇಶಕ್ಕೆ ಹೋಗಿ ಬಂದಾಗಲೆಲ್ಲಾ ತನ್ನ ಮುದ್ದಿನ ನಾಯಿಮರಿಗಾಗಿ ಹೊಸ ಹೊಸ ಡಿಸೈನ್ ಬಟ್ಟೆಗಳನ್ನು ತರುತ್ತಾಳೆ. ಅನೇಕ ಬಾರಿ ಟಿವಿಗಳಿಗೆ ಸಂದರ್ಶನ ನೀಡುವಾಗ ಆಕೆ ನಾಯಿ ಮರಿಯನ್ನು ಮುದ್ದಿಸಿ, ಕೊಂಡಾಡಿದ್ದು ಉಂಟು. ಅಷ್ಟೇ ಯಾಕೆ ಒಂದು ಕಾಲದಲ್ಲಿ ಅಭಿನಯ ಶಾರದೆ ಜಯಂತಿ ಕೂಡಾ ಮಾನಸಿಕವಾಗಿ ಅತ್ಯಂತ ದುಗುಡದಲ್ಲಿದ್ದಾಗ ಮನೆಯಲ್ಲಿ ನಾಲ್ಕೈದು ನಾಯಿ ಮರಿಗಳನ್ನು ಸಾಕಿದ್ದರು. ಯಾಕೆ ಹೀಗೆ? ಎಂದು ಪ್ರಶ್ನಿಸಿದಾಗ ಜಯಂತಿಯವರು ಕೊಟ್ಟ ಉತ್ತರ ಮಾರ್ಮಿಕವಾಗಿಯೂ ಇತ್ತು, ಅರ್ಥಪೂರ್ಣ ವಾಗಿಯೂ ಇತ್ತು, ಅದೇನೆಂದರೆ:

"ನನ್ನ ಜೀವನದಲ್ಲಿ ಮನುಷ್ಯರು ಮಾಡಿದ್ದ ಮೋಸ ಮತ್ತು ದ್ರೋಹವನ್ನು ಈ ನಾಯಿಗಳು ಮರೆಯುವಂತೆ ಮಾಡುತ್ತವೆ."

ಸಿನಿಮಾ ಎಂಬ ತಳುಕುಬಳುಕಿನ ಲೋಕದಲ್ಲಿನ ಜನಪ್ರಿಯತೆ, ಅಭಿಮಾನಿ ವೃಂದ, ಸಂಭಾವನೆ, ಬಿರುದುಬಾವಲಿಗಳು ಕೊಡುವ ಸಂತೋಷಕ್ಕಿಂತ ಹೆಚ್ಚು ನೆಮ್ಮದಿ ಮತ್ತು ತೃಪ್ತಿ ಇಂತಹ ಮೂಕಪ್ರಾಣಿಗಳಿಂದ ಕಲಾವಿದರಿಗೆ ಸಿಗುತ್ತಿರಬಹುದೇನೋ? •

ಜೇಡರಹಳ್ಳಿಯ 'ಖನ್ನ'ಡ ಭಾಷಣ!


...ಮಾಡಬಾರದ್ದು ಮಾಡಿದ ಭೂಗತ ಲೋಕದ ಮಾಜಿಗಳು ಇದ್ದಕ್ಕಿದ್ದಂತೆ ಸಂತರ ...ದಲ್ಲಿ, ಹೋರಾಟಗಾರರ ವೇಷದಲ್ಲಿ, ಜನನಾಯಕರ ಗೆಟಪ್ಪಿನಲ್ಲಿ ಪ್ರತ್ಯಕ್ಷವಾಗಿ ... ಹುಟ್ಟಿಸುತ್ತಾರೆ.

ಅಂತೆಯೇ ಮಾಜಿ ರೌಡಿ, ಹಾಲಿ ರಾಜಕಾರಣಿ, ಮಾಗಡಿಯ 'ಮಾಸ್ ಲೀಡರ್' ...ಮೂ ಚಿತ್ರವೊಂದರ ಹೀರೋ ಕೂಡಾ ಆಗಿರುವ ಜೇಡರಹಳ್ಳಿ ಕೃಷ್ಣಪ್ಪ ಸಹ ಸಿಕ್ಕಲ್ಲೆಲ್ಲಾ ...ಷಣ 'ಕೊಚ್ಚಲು' ಆರಂಭಿಸಿದ್ದಾರೆ.

ಮೊನ್ನೆ ತನ್ನ ನಿರ್ಮಾಣದ 'ದೇವದಾಸ್' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ಜೇಡರಹಳ್ಳಿ ...ಪ್ಪ ಆಡಿದ ಸ್ವಚ್ಛ 'ಖನ್ನ'ಡದ ಮಾತುಗಳು ಹೀಗಿವೆ ನೋಡಿ:

"ನಮ್ಮ 'ಹಂಭಾರಿ' ಚಿತ್ರದಲ್ಲಿ ನಟಿಸಿ ಈ ನಾಡಿನ ಹೆಲ್ಲ ಜನರ ಮನಸ್ಸನ್ನು ಗೆದ್ದಿರುವ ...ಮಂತ ನಾಯಕ ಶ್ರೀ ಲೂಸ್ ಮಾದರವರನ್ನೇ ನಮ್ಮ 'ದೇವದಾಸ್' ಚಿತ್ರಕ್ಕೂ ...ಮ್ಮ ಮಾಡಿಕೊಂಡು ಹಾರಂಭ ಮಾಡಿದ್ದೆವು. ಖನ್ನಡದ ಸೊಗಡನ್ನ ಹಬ್ಬಿಸಲು, ಖನ್ನಡವನ್ನು ಹುಳಿಸಿಬೆಳೆಸಲು ನಾನು ಈ 'ದೇವದಾಸ್' ಚಿತ್ರವನ್ನು ಮಾಡಿದ್ದೇನೆ. ಈ ಚಿತ್ರದಲ್ಲಿ ಅದ್ಭುತವಾದ ಸಂಗೀತದ ಹೇರುಹಿಳಿತವಿದೆ. ದೇವರು ಎಲ್ಲರಿಗೂ ಕಾಣಿಸುವಂತೆ ಪ್ರತ್ಯಕ್ಷವಾಗದಿದ್ದರೂ 'ದೇವದಾಸ್' ಮೂಲಕ ಪ್ರತ್ಯಕ್ಷವಾಗುತ್ತಿದ್ದಾನೆ. ಖನ್ನಡದ ಖಲಾಬಿಮಾನಿಗಳು ಈ 'ದೇವದಾಸನಿಗೆ' ಚಪ್ಪಾಳೆ ತಟ್ಟಿ ಹಾಶೀರ್ವದಿಸಿ. ಆ ಮೂಲಕ ನಾನು ಎಚ್ಚುಎಚ್ಚು ಖನ್ನಡ ಹುತ್ತಮ ಚಿತ್ರಗಳನ್ನು ಮಾಡುವಂತೆ ಅರಸಿ. ನಮ್ಮ ಭಾರತ ದೇಶ ಸಂಸ್ಕಾರವಂತ ದೇಶ. ಯಾರೇ ತಪ್ಪು ಮಾಡಿದರೂ ಕ್ಷಮಿಸುವ ದೊಡ್ಡ ಮನಸ್ಸು ನಮ್ಮದು. ದಯಮಾಡಿ ನಮ್ಮ ಸಣ್ಣ ಪುಟ್ಟ ತಪ್ಪುಗಳನ್ನು ಕ್ಷಮಿಸಿ..."

- ಇದು ಶ್ರೀಮಾನ್ ಜೇಡರಳ್ಳಿಯವರ ಜಗ್ಗಣಕ್ಕ ಮಾತುಗಳು. ಅವರ ಭಾಷಾಭಿಮಾನವನ್ನು ಕಂಡು ಸಹೃದಯರು ಕಣ್ಣೀರು ಸುರಿಸಿ, ರೊಚ್ಚಿಗೇಳುವ ಬದಲು ಅವರ ಅಪೇಕ್ಷೆಯಂತೆ ಪಾಪ ಕ್ಷಮಿಸಿಬಿಡಿ!



ಅಂದ್ರಿತಾ ಔಟ್! ನಕ್ಷತ್ರಾ ಇನ್!

...ಗಾಂಧಿನಗರದಲ್ಲಿ ಮಹಾರಾಣಿಯರಂತೆ ಮೆರೆಯುವ ... ನಾಯಕಿಯರಿಗೆ ಪರಭಾಷೆಯಲ್ಲಿ ಅವಮಾನ ...ವುದು ಹಳೆಯ ಸಂಪ್ರದಾಯ. ಹಾಗೆ ಅವಮಾನ ...ಕೊಂಡ ನಾಯಕಿಯರ ಸಾಲಿಗೆ ಇದೀಗ ಅಂದ್ರಿತಾ ...ರುತ್ತಾಳೆ.

ಅಂದ್ರಿತಾ ಬೆಂಗಳೂರಿನಲ್ಲೇ ಓದಿದ್ದರಿಂದ, ಆಕೆಯ ...ತಾಯಿ ಇಲ್ಲೇ ವಾಸಿಸುತ್ತಿರುವುದರಿಂದ ಮತ್ತು ಆಕೆ ...ಯಾಗಿ ಕನ್ನಡ ಚಿತ್ರರಂಗದಿಂದಲೇ ಪರಿಚಿತಳಾಗಿ ... ಈ ಬೆಂಗಾಲಿ ಬೆಡಗಿಯನ್ನು ಕನ್ನಡಿಗರು ಉದಾರ ...ದಿಂದ 'ಕನ್ನಡದ ಹುಡುಗಿ' ಎಂದು ಸ್ವೀಕರಿಸಿದ್ದಾರೆ ...ದನ್ನು ನಮ್ಮ ಓದುಗ ಮಹಾಶಯರು ತಿಳಿಯಬೇಕು.

...ತ್ತೀಚೆಗೆ ಅಂದ್ರಿತಾ ರೇ ತಾನು ತಮಿಳು ಚಿತ್ರವೊಂದರಲ್ಲಿ ...ತ್ತಿರುವ ಬಗ್ಗೆ ಅತ್ಯಂತ ಹೆಮ್ಮೆಯಿಂದ ಪತ್ರಿಕೆಗಳಿಗೆ ...ನ ನೀಡಿದ್ದಳು. ತಮಿಳು ಚಿತ್ರದಲ್ಲಿ ನಟಿಸುವುದೆಂದರೆ ...ದು ರೀತಿಯ ಪ್ರಮೋಷನ್ ಎಂದೇ ನಮ್ಮ ...ೇಕ ಕನ್ನಡ ನಾಯಕಿಯರು ಭಾವಿಸುತ್ತಾರೆ. ಇದಕ್ಕೆ ...ತಾ ಕೂಡಾ ಹೊರತಾಗಿರಲಿಲ್ಲ. ಈ ತಮಿಳು ...ೇಹಕ್ಕೆ ಅನೇಕ ಕಾರಣಗಳಿವೆ. ಮೊದಲನೆಯದಾಗಿ ... ಸಂಭಾವನೆಗಿಂತ ಅಲ್ಲಿ ದುಪ್ಪಟ್ಟು ...ನೆ ಸಿಗುತ್ತದೆ. ಎರಡನೆಯ ... ತಮಿಳು ಚಿತ್ರರಂಗಕ್ಕೆ ...ರಾಷ್ಟ್ರೀಯ ಮಾರುಕಟ್ಟೆ ...ದರಿಂದ ತಾನು ದಿನಬೆಳಗಾಗು ...ಳಗೆ 'ಜಗತ್ಪ್ರಸಿದ್ಧ' ನಟಿಯಾಗುತ್ತೇನೆಂಬ ... ನಂಬಿಕೆ! ಮೂರನೆಯದಾಗಿ ಅಲ್ಲಿ ...ಯರ ದೇಗುಲಗಳನ್ನು ಕಟ್ಟಿಸುವ ಅಭಿಮಾನಿಗಳು ಇದ್ದಾರೆ.... ... ಅನೇಕ ಪೊಳ್ಳು ಆಸೆಗಳನ್ನು ...ಂದೇ ಕನ್ನಡದ ನಾಯಕಿಯರು ...ಲ್ಲಿ ನಟಿಸಲು ಹಾತೊರೆಯುತ್ತಾರೆ.




ಅಂದ್ರಿತಾ ಒಪ್ಪಿಕೊಂಡದ್ದು ಒಂದು ...ದ ಚಿತ್ರ. ಇದರ ನಿರ್ದೇಶಕ ಜಾನ್ ದೇವರಾಜ್. ...ದ ನಾಯಕನಾಗಿ ಉದಯೋನ್ಮುಖ ನಟ ನಕುಲ್ ...ವಾಗಿದ್ದ, ಇವರಿಬ್ಬರ ಫೋಟೋ ಸೆಷನ್ಸ್ ಕೂಡಾ ...ತ್ತು, ಈ ಫೋಟೋಗಳನ್ನು ಅಂದ್ರಿತಾ ಹೆಮ್ಮೆಯಿಂದ ... ದಿನಪತ್ರಿಕೆಗಳಿಗೆ ಪೋಸ್ ಮಾಡಿದ್ದಳು. ಕೂಡಲೇ ಇದರ ಚಿತ್ರೀಕರಣವೂ ಆರಂಭವಾಯಿತು. ಆದರೆ ಎರಡೇ ದಿನಕ್ಕೆ "ನಿಮಗೆ ನಟನೆ ಮಾಡಲು ಬರುವುದಿಲ್ಲ" ಎಂದು ಈಕೆಯನ್ನು ನಿರ್ದೇಶಕ ಜಾನ್ ವಾಪಸ್ ಮನೆಗೆ ಕಳುಹಿಸಿದ್ದಾರೆ!

ತನಗೆ ಇಂತಹ ಅಪರೂಪದ 'ಗೌರವ' ಸಿಗುತ್ತದೆ ಎಂದು ಕನಸು ಮನಸ್ಸಲ್ಲೂ ನೆನೆಯದ ಅಂದ್ರಿತಾ ಸಿಟ್ಟಿನಿಂದ ರೌದ್ರಾವತಾರ ತಳೆದು "ನೀನು ಮಾಡಿರುವುದು ಕೇವಲ ಒಂದೇ ಸಿನಿಮಾ. ನಾನು ಕನ್ನಡದಲ್ಲಿ ಈಗಾಗಲೇ ಹತ್ತು ಸಿನಿಮಾಗಳಲ್ಲಿ ನಟಿಸಿ, ಜನರ-ವಿಮರ್ಶಕರ ಮನಸ್ಸನ್ನು ಗೆದ್ದಿದ್ದೇನೆ. ನಿನಗೆ ನಿರ್ದೇಶನ ಮಾಡಲು ಬರುವುದಿಲ್ಲ" ಎಂದು ಚೆನ್ನಾಗಿ ರೋಪು ಹೊಡೆದು ವಾಪಸ್ ಬಂದಿದ್ದಾಳೆ.

ಈಗ ಅಂದ್ರಿತಾ ಸ್ಥಾನದಲ್ಲಿ ಕನ್ನಡದ ಮತ್ತೊಬ್ಬ ಹುಡುಗಿ ನಿರ್ದೇಶಕ ಡಿ.ರಾಜೇಂದ್ರಬಾಬು ಅವರ ಮಗಳು ನಕ್ಷತ್ರಾ ನಟಿಸುತ್ತಿದ್ದಾಳೆ. ಅಂತೂ ಕನ್ನಡದ ಹುಡುಗಿಯನ್ನೇ ಆಯ್ಕೆ ಮಾಡುವ ಮುಖಾಂತರ ನಿರ್ದೇಶಕ ಜಾನ್ ಇದರಿಂದಾಗಿ ಉದ್ಭವಿಸಬಹುದಾಗಿದ್ದ ಕನ್ನಡ-ತಮಿಳು ವಿವಾದವನ್ನು ಬಹಳ ಜಾಣ್ಮೆಯಿಂದ ತಪ್ಪಿಸಿದ್ದಾರೆ.

ನಮ್ಮ ಕನ್ನಡದ ಹುಡುಗಿ ಅಂದ್ರಿತಾ ಹೋದ ದಾರಿಗೆ ಸುಂಕವಿಲ್ಲವೆಂಬಂತೆ ವಾಪಸ್ ಗಾಂಧಿನಗರ ತಲುಪಿದ್ದಾಳೆ.

ಇಂತಹುದ್ದೇ 'ಅವಮಾನ' ಮಾಜಿ ನಾಯಕಿ ಜಯಮಾಲರ ಮಗಳಾದ ಸೌಂದರ್ಯಳಿಗೂ ಆಗಿತ್ತು. ತಮ್ಮ ಮಗಳನ್ನು ರಾಜ್‌ಕುಮಾರ್ ಅವರ ಸಂಸ್ಥೆಯಿಂದಲೇ ಚಿತ್ರರಂಗಕ್ಕೆ ಪರಿಚಯಿಸಬೇಕು ಎಂಬ ಹಂಬಲದಿಂದ ಜಯಮಾಲ ಬಹಳ ಕಾಲ ಕಾದಿದ್ದರು. ಆ ಕಾರಣಕ್ಕಾಗಿ ಬೇರೆಯವರಿಂದ ಬಂದ ಅನೇಕ ಕನ್ನಡ ಚಿತ್ರಗಳ ಆಹ್ವಾನಗಳನ್ನೂ ತಿರಸ್ಕರಿಸಿದ್ದರು. "ಪವರ್‌ಸ್ಟಾರ್ ಪುನೀತ್ ಜೋಡಿಯಾಗಿ ಸೌಂದರ್ಯ ಚಿತ್ರರಂಗಕ್ಕೆ ಕಾಲಿಟ್ಟರೆ ಆಕೆಗೆ ಉಜ್ವಲ ಭವಿಷ್ಯ ಸಿಗಬಹುದು" ಎಂಬುವುದು ಜಯಮಾಲರ ಅನಿಸಿಕೆಯಾಗಿತ್ತು. ಅದಕ್ಕೆ ಕಾರಣವೂ ಇತ್ತು, ಅಪ್ಪು ಜೊತೆ ನಾಯಕಿಯರಾಗಿ ನಟಿಸಿದ ರಮ್ಯಾ-ರಕ್ಷಿತಾ ಮೊದಲಾದವರು ಚಿತ್ರರಂಗದಲ್ಲಿ ವಿಜೃಂಭಿಸಿದ್ದನ್ನು ಯಾರೂ ಅಲ್ಲಗಳೆಯುವುದಿಲ್ಲ.



ಆದರೆ ಯಾವಾಗ ಅಪ್ಪು ಜೊತೆ ಸೌಂದರ್ಯ ನಾಯಕಿಯಾಗುವ ಸಾಧ್ಯತೆಗಳು ಕಡಿಮೆಯೆಂದು ಗೊತ್ತಾಯಿತೋ ಆ ಕೂಡಲೇ ಅವರು ತೆಲುಗು ಚಿತ್ರರಂಗದತ್ತ ಕಣ್ಣು ಹಾಯಿಸಿದರು. ಕೊನೆಗೂ ಸೌಂದರ್ಯಳಿಗೆ 'ಪ್ರೇಮಿಕೂಡ್' ಎಂಬ ತೆಲುಗು ಚಿತ್ರದಲ್ಲಿ ನಾಯಕಿಯಾಗುವ ಅವಕಾಶ ದೊರೆಯಿತು. ಇದರ ಚಿತ್ರೀಕರಣ ಆರಂಭವಾಗಿ ಪತ್ರಿಕೆಗಳಲ್ಲಿ ಸುದ್ದಿಯೂ ಬರಲಾರಂಭಿಸಿತು. ಕೊನೆಗೊಮ್ಮೆ ಈಕೆ ಈ ಚಿತ್ರದಿಂದ ಹೊರಬಂದ ಸುದ್ದಿ ಕೂಡ ಪ್ರಕಟವಾಯಿತು. ಎಂದಿನಂತೆ "ಈ ಹುಡುಗಿಗೆ ನಟನೆ ಬರುವುದಿಲ್ಲ" ಎಂದು ನಿರ್ದೇಶಕ ಕಾರಣ ಕೊಟ್ಟ.

ಇದೀಗ ತೆಲುಗಿನಿಂದ ವಾಪಸ್ ಬಂದಿರುವ ಸೌಂದರ್ಯಳಿಗೆ ಕನ್ನಡದಲ್ಲಿ ಅವಕಾಶ ಸಿಕ್ಕಿದೆ. ಕೆ.ಮಂಜು ನಿರ್ಮಾಣದ, ಉಪೇಂದ್ರ ನಾಯಕನಾಗಿ ನಟಿಸುತ್ತಿರುವ 'ಗಾಡ್‌ಫಾದರ್' ಚಿತ್ರದಲ್ಲಿ ಸೌಂದರ್ಯ ನಟಿಸಲಿದ್ದಾಳೆ. ಒಂದು ಮೂಲದ ಪ್ರಕಾರ ಇದು ನಾಯಕಿಯ ಪಾತ್ರವಲ್ಲ, ಬದಲಿಗೆ ಸಣ್ಣಪಾತ್ರವಾದರೂ ಬಹಳ ಮುಖ್ಯವಾಗಿದೆಯಂತೆ. ಅಂತೂ ಅಪ್ಪು ಜೊತೆ ನಾಯಕಿಯಾಗಿ ಮಿಂಚಬೇಕೆಂಬ ಆಸೆಯಿದ್ದ ಸೌಂದರ್ಯ ಈಗ ಉಪ್ಪಿ ಜೊತೆ ಕಾಣಿಸಲಿದ್ದಾಳೆ. ಗಾಂಧಿನಗರದ ಪ್ರಕಾರ ಉಪ್ಪಿ ಜೊತೆ ನಟಿಸುವುದು ಅಪ್ಪುಗಿಂತಲೂ ಹೆಚ್ಚು ಅದೃಷ್ಟದಾಯಕವಂತೆ! ಅದಕ್ಕೆ ಅವರು ನೀಡುವ ಉದಾಹರಣೆ: ಉಪ್ಪಿ ಜೊತೆ ದೀಪಿಕಾ ಪಡುಕೋಣೆ ನಟಿಸಿದ ನಂತರವೇ ಆಕೆ ಶಾರೂಖ್ ಖಾನ್‌ಗೆ ಜೋಡಿಯಾಗಿದ್ದು!

ಅದೇನೆ ಇರಲಿ, ಕನ್ನಡದ ನಾಯಕಿಯರಿಗೆ ಪರಭಾಷೆಯಲ್ಲಿ ನಿರೀಕ್ಷಿಸಿದಷ್ಟು ಗೌರವ ಮನ್ನಣೆ ದೊರಕುವುದಿಲ್ಲವೆಂಬುದು ಕಾಲಕಾಲಕ್ಕೆ ಸಾಬೀತಾಗುತ್ತಲೇ ಬಂದಿದೆ. ಆದರೂ ನಮ್ಮ ಕನ್ನಡದ ನಾಯಕಿಯರಿಗೆ ತಮಿಳು-ತೆಲುಗು ಚಿತ್ರಗಳಲ್ಲಿ ನಟಿಸುವ ವ್ಯಾಮೋಹ ಕಡಿಮೆಯಾಗುತ್ತಿಲ್ಲ...


• ತೆನ್ಸೈ

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 12/- 18-5-2011 RNI No, KARKAN2005/1

ಪ್ರತಿಭೆ-ಶ್ರಮಕ್ಕೆ ಬೆಲೆ ಇಲ್ಲವೇ?

ಅದೇನು ದುರಂತವೋ ಗೊತ್ತಿಲ್ಲ... ರಕ್ತ ಬಸಿದು ದುಡಿವ ಶ್ರಮಿಕರೇ ಹಲವಷ್ಟು ಸಲ ಶೋಷಣೆಗೆ ಈಡಾಗುವುದು, ಕಡೆಗಣಿಸಲ್ಪಡುವುದು.


ಮೊನ್ನೆ ಇದಕ್ಕೊಂದು ಉದಾಹರಣೆ ದೊರೆಯಿತು. ಬಿ. 'ಎಫ್‌ಎಂ' ಚಿತ್ರದ ಧ್ವನಿಸುರುಳಿ ಬಿಡುಗಡೆ ಸಮಾರಂಭದಲ್ಲಿ ತಮ್ಮ ಚಿತ್ರಕ್ಕೆ ದುಡಿದ ಕ್ಲಾಪ್ ಬಾಯ್‌ಗಳಿಂದ ಹಿಡಿದು ಕಾಸ್ಟ್ಯೂಮರ್‌ಗಳ ತನಕ ಎಲ್ಲರನ್ನೂ ವೇದಿಕೆಗೆ ಕರೆದ ನಿರ್ದೇಶಕ ರಾಮಮೂರ್ತಿ ಎಲ್ಲರಿಗೂ ಹೂಗುಚ್ಛ ನೀಡಿ ಅಭಿನಂದಿಸಿದರು. ಆದರೆ ಈ ಚಿತ್ರಕ್ಕಾಗಿ ತುಂಬಾ ಕೆಲಸ ಮಾಡಿ ಒಂದಿಬ್ಬರನ್ನು ಉದ್ದೇಶಪೂರ್ವಕವಾಗಿ ರಾಮಮೂರ್ತಿ ಕೈಬಿಟ್ಟಿದ್ದರು.



ಈ ಚಿತ್ರದ ಟೈಟಲ್ ಕಾರ್ಡಿನಲ್ಲಿ ಕಥೆ, ಚಿತ್ರಕಥೆ, ನಿರ್ದೇಶನ ಎಲ್ಲವನ್ನೂ ರಾಮಮೂರ್ತಿಯವರೇ ಬರೆಸಿಕೊಂಡಿದ್ದಾರೆ. ಅಸಲಿಗೆ ರಾಮಮೂರ್ತಿ ಹೇಳಿದ ಸಣ್ಣದೊಂದು ಘಟನೆಯನ್ನು ಆಧಾರವಾಗಿಟ್ಟುಕೊಂಡು ಸ್ಟೋರಿ ರೆಡಿ ಮಾಡಿ, ಅದಕ್ಕೆ ಸ್ಕ್ರೀನ್ ಪ್ಲೇ ಬರೆದು, ಸೆಂಟಿಮೆಂಟು, ಕಾಮಿಡಿ ಟ್ರ್ಯಾಕುಗಳನ್ನು ಸೇರಿಸಿ, ಡೈಲಾಗು ಬರೆದು 'ಪ್ಯಾಕು' ಮಾಡಿಕೊಟ್ಟಿರುವುದು ಮತ್ತೊರ್ವ ನಿರ್ದೇಶಕ ರಾಜೇಂದ್ರಕುಮಾರ್ ಆರ್ಯ.



ಗಾಂಧಿನಗರದಲ್ಲಿ ಕೆಲ ವರ್ಷಗಳಿಂದ 'ಇಂತಹ 'ಘೋಸ್ಟ್ ರೈಟಿಂಗ್' ಸಂಪ್ರದಾಯ ಚಾಲ್ತಿಗೆ ಬಂದಿದೆ. ಇದರರ್ಥ ಯಾರಿಂದಲೋ ಸ್ಕ್ರಿಪ್ಟು, ಸಂಭಾಷಣೆ ಮಾಡಿಸಿ ಮತ್ತಿನ್ಯಾರೋ ತಮ್ಮ ಹೆಸರು ಹಾಕಿಸಿಕೊಳ್ಳುವುದು; ಅಷ್ಟೇ ಅಲ್ಲ, ಟೈಟಲ್ ಕಾರ್ಡಿನಲ್ಲಿ ತಮ್ಮ ಹೆಸರು ಬರಬೇಕಾದರೆ ಇಷ್ಟು ಸಂಭಾವನೆ, ಬೇಡವೆಂದಾದರೆ ಇಂತಿಷ್ಟು ದುಡ್ಡು ಎಂಬ ವ್ಯವಸ್ಥೆ ಇದು. ಅದೆಷ್ಟೋ ಜನ ಪ್ರತಿಭಾವಂತರು ತಮ್ಮ ಹೆಸರು ಮಿಸ್ ಆದರೂ ಪರವಾಗಿಲ್ಲ ಒಂದಿಷ್ಟು ಹೆಚ್ಚು ಹಣ ಬಂದರೆ ಸಾಕು ಎಂದು ಟೈಟಲ್ ಕಾರ್ಡಿನಲ್ಲಿ ತಮ್ಮ ಹೆಸರು ಬೇಡವೆಂದು ಹೇಳುತ್ತಾರೆ.



ಕ್ರೆಡಿಟ್ ಹೋದರೆ ಹೋಗಲಿ, ಕಡೇಪಕ್ಷ ವೇದಿಕೆಗೆ ಕರೆದು ಕೃತಜ್ಞತೆಯನ್ನಾದರೂ ಹೇಳಲಿ ಎಂಬ ಅಪೇಕ್ಷೆ ಎಂಥವರಿಗೂ ಇರುತ್ತದೆ. ಆದರೆ ಐವತ್ತೂರು ಸಿನಿಮಾಗಳನ್ನು ನಿರ್ದೇಶಿಸಿರುವ ರಾಮಮೂರ್ತಿಯಂಥ ಸೀನಿಯರ್ ನಿರ್ದೇಶಕರು ಅಂತಹವರನ್ನು ಸ್ಟೇಜಿಗೆ ಕರೆದು ಬೊಕೆ ಕೊಟ್ಟರೆ ಎಲ್ಲಿ ತಮ್ಮ ಒಳಮರ್ಮಗಳು ಬಯಲಾಗುತ್ತವೋ ಎಂದು ಅದನ್ನೂ ಅವಾಯ್ಡ್ ಮಾಡುತ್ತಾರೆ.

ದುಡ್ಡು ವರ್ಚಸ್ಸುಗಳೇ ದೊಡ್ಡದಾಗಿರುವ ಗಾಂಧಿನಗರದಲ್ಲಿ ಬೇಸರಗೊಂಡವರಿಗೆ ನ್ಯಾಯ ಕೊಡಿಸುವವರಾದರೂ ಯಾರು?

ನಾಗಾಭರಣ ಪುತ್ರ ನಿರ್ದೇಶನದತ್ತ...

ಪನ್ನಗ ನಾಗಾಭರಣ ಎಂಬ ಹದಿಹರೆಯದ ಯುವಕ ಸೆಂಚುರಿ ಹೀರೋ ಶಿವರಾಜ್‌ಕುಮಾರ್ ಅವರ ಚಿತ್ರವನ್ನು ನಿರ್ದೇಶಿಸಲು ಹೊರಟಿದ್ದಾನೆ. ಪನ್ನಗ ನಾಗಾಭರಣ ಎಂದಾಕ್ಷಣ ಈತ ನಿರ್ದೇಶಕ ನಾಗಾಭರಣರ ಮಗನಿರಬಹುದೆ ಎಂಬ ಪ್ರಶ್ನೆ ಉದ್ಭವಿಸುವುದು ಸಹಜ. ಹೌದು, ಪನ್ನಗ ನಾಗಾಭರಣ ನೀವಂದುಕೊಂಡಂತೆ ನಾಗಾಭರಣರ ಸುಪುತ್ರ.

ಈ ಮೂಲಕ ನಾಗಾಭರಣ ಕುಟುಂಬವೇ ಕನ್ನಡ ಚಿತ್ರರಂಗದಲ್ಲಿ ತೊಡಗಿಸಿಕೊಂಡಂತಾಯಿತು. ಪನ್ನಗ ತಂದೆಯ ತರಹ ರಂಗಭೂಮಿ ಮತ್ತು ಸಿನಿಮಾ ರಂಗದ ಜನರ ನಡುವೆ ಮೊದಲಿನಿಂದಲೂ ನಿಕಟ ಸಂಬಂಧವನ್ನು ಇಟ್ಟುಕೊಂಡಿದ್ದಾನೆ. ಈಗಾಗಲೇ ಕೆಲವು ಶಾರ್ಟ್ ಫಿಲ್ಮ್‌ಸ್ ಮತ್ತು ಕೆಲವು ಡಾಕ್ಯುಮೆಂಟರಿಗಳನ್ನು ಮಾಡಿರುವ ಪನ್ನಗ ಒಂದು ಹಾಸ್ಯ ಕಥಾವಸ್ತುವನ್ನು ತನ್ನ ಚೊಚ್ಚಲ ಚಿತ್ರನಿರ್ದೇಶನಕ್ಕೆ ಆಯ್ಕೆ ಮಾಡಿಕೊಂಡಿದ್ದಾನೆ.



ಬಹುಶಃ ನಾಯಕನಟ ಶಿವರಾಜ್‌ಕುಮಾರ್‌ಗೆ ಇದೊಂದು ಅಪರೂಪದ ಅನುಭವವಾಗಲಿದೆ. ಯಾಕೆಂದರೆ ತಂದೆಯ ಮತ್ತು ಮಗನ ನಿರ್ದೇಶನದಲ್ಲಿ ನಾಯಕನಾಗಿ ನಟಿಸುವ ಸಂದರ್ಭ ಬಹುತೇಕ ನಾಯಕನಟರಿಗೆ ಸಿಗುವುದಿಲ್ಲ, ಆದರೆ ಶಿವಣ್ಣನಿಗೆ ಆ ಅವಕಾಶ ಸಿಕ್ಕಿದೆ.

ಕಲಾತ್ಮಕ, ಕಮರ್ಷಿಯಲ್ ವಿಭಾಗಗಳೆರಡರಲ್ಲೂ ವಿಜೃಂಭಿಸಿದ ಭರಣ ಕನ್ನಡ ಚಿತ್ರರಂಗಕ್ಕೆ ರಾಷ್ಟ್ರ-ಅಂತರರಾಷ್ಟ್ರ ಮಟ್ಟದಲ್ಲಿ ಹೆಸರು ತಂದುಕೊಟ್ಟವರು. ಅಂತಹ ಪರಂಪರೆಯಿಂದ ಬಂದಿರುವ ಪನ್ನಗ ಏನು ಮಾಡಬಹುದು ಎಂಬ ಕುತೂಹಲವಂತೂ ಇದ್ದೇ ಇದೆ.



ಪಾಪ ಪಾಟೀಲ

ಸರ್ಕಾರಿ ಉದ್ಯೋಗಿಗಳು ಸಿನಿಮಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಾರದು ಎಂಬ ಸರಕಾರಿ ನಿಯಮವನ್ನು ಪ್ರಶ್ನಿಸಿ ಹಿರಿಯ ಐಎಎಸ್ ಅಧಿಕಾರಿ ಕಂ ನಟಭಯಂಕರ ಕೆ. ಶಿವರಾಮು ಏಳು ವರ್ಷಗಳ ಹಿಂದೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನು ಪರಿಶೀಲಿಸಿದ ಹೈಕೋರ್ಟ್‌ನ ನ್ಯಾ. ಆನಂದ ಬ್ಯಾರ ರೆಡ್ಡಿಯವರ ಏಕಸದಸ್ಯ ಪೀಠ 'ಚಲನಚಿತ್ರದಲ್ಲಿ ನಟನೆ ಮಾಡಬಯಸುವ ಸರ್ಕಾರಿ ನೌಕರರು ತಮ್ಮ ಕೆಲಸಕ್ಕೆ ರಾಜೀನಾಮೆ ಸಲ್ಲಿಸಬೇಕು' ಎಂದು ತೀರ್ಪು ನೀಡಿದೆ.

ಸದ್ಯಕ್ಕೆ ಶಿವರಾಮುಗೆ ಚಿತ್ರರಂಗದಲ್ಲಿ ಯಾವ ಅವಕಾಶವೂ ಇಲ್ಲ, ಹಾಗೇನಾದರೂ ಛಾನ್ಸು ಸಿಕ್ಕರೂ ಅವರನ್ನು ನೋಡೋಕೆ ಯಾರೂ ತಯಾರಿಲ್ಲದ ಕಾರಣ ಈ ತೀರ್ಪಿನ ಬಗ್ಗೆ ಐಎಎಸ್ ಶಿವರಾಮಣ್ಣ ಒಂಚೂರೂ ತಲೆ ಕೆಡಿಸಿಕೊಂಡಿಲ್ಲ. ಆದರೆ ಅವರನ್ನೇ ಹೋಲುವ ಮತ್ತೊಬ್ಬ ಮಹಾನ್ ನಟ ಬಿ.ಸಿ. ಪಾಟೀಲ್ ಮಾತ್ರ ಹೈಕೋರ್ಟ್ ಕಡೆ ತಿರುಗಿ, ಮುಖ ಮೇಲಕ್ಕೆ ಮಾಡಿಕೊಂಡು ಗುರ್ರೆಂದು ಅರಚುತ್ತಿದ್ದಾರೆ.



"ಕಲಾವಿದರಿಗೊಂದು ನ್ಯಾಯ, ಕ್ರೀಡಾಪಟುಗಳಿಗೊಂದು ನ್ಯಾಯ ಸರಿಯಲ್ಲ, ಕ್ರೀಡಾಕ್ಷೇತ್ರದಲ್ಲಿರುವವರಲ್ಲಿ ಹೆಚ್ಚು ಮಂದಿ ಸರ್ಕಾರಿ ನೌಕರರು. ಆದರೂ ಅವರು ರಾಜ್ಯ ಮತ್ತು ದೇಶವನ್ನು ಪ್ರತಿನಿಧಿಸುತ್ತಾರೆ. ಹೀಗಾಗಿ ನ್ಯಾಯಾಂಗ ತೀರ್ಪು ಸಿನಿಮಾದವರಿಗೆ ಅನ್ಯಾಯವೆಸಗಿದೆ. ಕಲೆ, ನಟನೆ ಎಂಬುದು ಎಲ್ಲರಿಗೂ ಒಲಿಯುವಂಥದ್ದಲ್ಲ, ಪ್ರತಿಭಾವಂತ ಕಲಾವಿದರ ಮನಸ್ಸಿನ ಮೇಲೆ ಈ ತೀರ್ಪು ಪ್ರಹಾರ ಮಾಡಿದೆ" ಎಂದೆಲ್ಲ ಪಾಟೀಲರು ಸಿಕ್ಕಾಪಟ್ಟೆ ಬೇಸರದ ಭಾಷಣ ಮಾಡುತ್ತಿದ್ದಾರೆ.

ಇತ್ತ ಪಾಟೀಲರು ನಿರ್ಮಿಸಿ ನಟಿಸಿದ ಚಿತ್ರಗಳು ತೋಪಾಗಿವೆ. ಅತ್ತ ರಾಜಕಾರಣವೂ ಹಳ್ಳ ಹಿಡಿದಿದೆ. ಇವೆರಡರ ಮಧ್ಯೆ ಇದ್ದ ಪೊಲೀಸ್ ನೌಕರಿಯೂ ಕೈಬಿಟ್ಟು ಹೋಗಿದೆ. ಪಾಪ, ಪಾಟೀಲರ ಮನೋವೇದನೆಗೆ ಇಷ್ಟು ಕಾರಣಗಳು ಸಾಕಲ್ಲವೇ?!

ಲೂಸ್‌ಗೆ ಲಾಸ್!



ಕೈಕೊಡುವುದನ್ನೇ ಕಾಯಕವಾಗಿಸಿಕೊಂಡಿರುವ ರಮ್ಯಾ ಈಗ ತನ್ನ ಆರಾಧಕ 'ಲೂಸ್ ಮಾದ'ನ ಮೇಲೂ ಮುನಿಸಿಕೊಂಡಿದ್ದಾಳೆ.

ಯೋಗೀಶ್ ನಾಯಕನಾಗಿ ನಟಿಸುತ್ತಿರುವ 'ಸಿದ್ಲಿಂಗು' ಚಿತ್ರದಲ್ಲಿ ನಟಿಸುವುದಾಗಿ ರಮ್ಯಾ ಯಾವತ್ತೋ ಭರವಸೆ ಕೊಟ್ಟಿದ್ದಳು. 'ಸಿದ್ಲಿಂಗು' ಚಿತ್ರದ ಚಿತ್ರೀಕರಣ ಫೆಬ್ರವರಿ ಕೊನೆಯವಾರದಂದೇ ಆರಂಭವಾಗಿತ್ತು. ರಮ್ಯಾ ತನ್ನ ಕಾಲ್‌ಶೀಟ್ ಕೊಟ್ಟ ತಕ್ಷಣ ಎರಡನೇ ಹಂತದ ಚಿತ್ರೀಕರಣವನ್ನು ಮಂಡ್ಯ, ಕೆ.ಆರ್.ಪೇಟೆ, ಶಿವನಸಮುದ್ರ, ಮುಂತಾದ ಕಡೆ ನಡೆಸಲು ಚಿತ್ರತಂಡದವರು ಪ್ಲಾನ್ ಮಾಡಿದ್ದರು.

ಆದರೆ ಇತ್ತೀಚೆಗೆ 'ದಂಡಂ ದಶಗುಣಂ' ಚಿತ್ರದ ವಿವಾದ, 'ಸಂಜು ವೆಡ್ಸ್ ಗೀತಾ' ಚಿತ್ರದ ಯಶಸ್ಸು, ಪೋರ್ಚುಗೀಸ್ ಪ್ರಿಯತಮನ ಬೆಂಗಳೂರು ಭೇಟಿ, ಯುವ ಕಾಂಗ್ರೆಸ್‌ಗೆ ಎಂಟ್ರಿ... ಹೀಗೆ ಸಿಕ್ಕಾಪಟ್ಟೆ ಬ್ಯುಸಿ ಆಗಿದ್ದ ರಮ್ಯಾಳ ಡೇಟ್ಸ್ ಪಡೆಯಲು ಹೋದ ನಿರ್ಮಾಪಕ ಟಿ. ಪಿ. ಸಿದ್ದರಾಜುಗೆ ರಮ್ಯ 'ಸದ್ಯಕ್ಕೆ ಕಾಲ್‌ಶೀಟ್ ಕೊಡಲ್ಲ' ಎಂದು ಹೇಳಿ ಕಳಿಸಿದ್ದಾಳಂತೆ...



'ಯಕ್ಷ' ಸೋಲಿಂದ ಸಪ್ಪಗಾಗಿರುವ ಸಿದ್ದರಾಜುಗೆ ಈಗ ರಮ್ಯಾ ಕೂಡಾ ಕೈಕೊಟ್ಟಿರುವುದು ನುಂಗಲಾರದ ತುತ್ತಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44